

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 30 ಶನಿವಾರ 2023

ಸಂಪುಟ: 44 | ಸಂಚಿಕೆ: 165 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕರ್ನಾಟಕ ಬಂದ್


ಕಾವೇರಿ ಕಣಿವೆ ಪ್ರದೇಶ ಸ್ತಬ್ಧ

ಬೆಂಗಳೂರು, ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಭಾಗದಲ್ಲಿ 'ಕರ್ನಾಟಕ ಬಂದ್'ಗೆ ಅಭೂತಪೂರ್ವ ಬೆಂಬಲ

ಬೆಂಗಳೂರು, ಸೆ.29(ಕೆಎಂಶಿ)– ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುವುದನ್ನು ನಿಲ್ಲಿಸಿ ಎಂದು ಆಗ್ರಹಿಸಿ ಕನ್ನಡಪರ, ಚಲನಚಿತ್ರೋದ್ಯಮ, ರೈತ ಪರ ಸಂಘಟನೆಗಳು ಕರೆ ನೀಡಿದ್ದ 'ಕರ್ನಾಟಕ ಬಂದ್' ಶಾಂತಿಯುತ, ಯಶಸ್ವಿಯಾಗಿದೆ.

ಕಾವೇರಿ ಕೊಳ್ಳದ ರೈತರು ಮತ್ತು ಸಾರ್ವಜನಿಕರು ಬಂದ್ ಮಾಡಿ ಪ್ರತಿಭಟನೆ ನಡೆಸುತ್ತಿದ್ದ ವೇಳೆಯಲ್ಲೇ ಕಾವೇರಿ ಜಲ ನಿರ್ವಹಣಾ ಸಮಿತಿ ಮಾಡಿದ್ದ ಶಿಫಾರಸ್ಸನ್ನು ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರವು ದೆಹಲಿಯಲ್ಲಿ ಸಭೆ ಸೇರಿ ಎತ್ತಿ ಹಿಡಿದಿರುವುದರಿಂದ ತಮಿಳುನಾಡಿಗೆ ಅ.15ರ ವರೆಗೂ ಇಂದಿನಿಂದಲೇ ಮೂರು ಸಾವಿರ ಕ್ಯುಸೆಕ್ ನೀರು ಹರಿಸಬೇಕಾಗಿದೆ. ಪ್ರಾಧಿಕಾರದ ಆದೇಶವನ್ನು ಪಾಲಿಸದಿದ್ದರೆ, ನಮ್ಮ ಜಲಾಶಯಗಳನ್ನು ಕೇಂದ್ರ ಸರ್ಕಾರ ವಶಕ್ಕೆ ತೆಗೆದುಕೊಳ್ಳುತ್ತದೆ. ಹಾಗಾಗಿ ಆದೇಶ ಪಾಲನೆ ಅನಿವಾರ್ಯವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೈಚೆಲ್ಲಿದ್ದಾರೆ. ನೀರು ಕೊಡಬಾರದೆಂಬುದು ನಮ್ಮ ಅನಿಸಿಕೆ. ನೀರು ಬಿಡದಿದ್ದರೆ ಕೇಂದ್ರ ಸರ್ಕಾರ ನಮ್ಮ ಜಲಾಶಯಗಳನ್ನು ವಶಕ್ಕೆ ● 10ನೇ ಪುಟಕ್ಕೆ







ಬೆಂಗಳೂರಲ್ಲಿ ಸಂಚಾರ ಸ್ತಬ್ಧ, ಕನ್ನಡ ಪರ ಹೋರಾಟಗಾರರ ಭಾರೀ ಪ್ರತಿಭಟನೆ...

ಮೈಸೂರಲ್ಲಿ ಬಂದ್ ಸಂಪೂರ್ಣ ಯಶಸ್ವಿ

● ಬೆಳಗ್ಗೆಯಿಂದಲೂ ಮೈಸೂರು ಸಂಪೂರ್ಣ ಸ್ತಬ್ಧ ● ವ್ಯಾಪಾರ–ವಹಿವಾಟು ಎಲ್ಲೆಡೆ ಸ್ಥಗಿತ ● ಭಣಗುಟ್ಟಿದ ಮೈಸೂರು ರಸ್ತೆಗಳು, ವೃತ್ತಗಳು ● ರಸ್ತೆಗಿಳಿಯದ ಬಸ್, ಆಟೋ, ಟ್ಯಾಕ್ಸಿ, ಕ್ಯಾಬ್ ● ಸಿನಿಮಾ ಥಿಯೇಟರ್, ಮಾಲ್‌ಗಳ ಬಾಗಿಲು ಬಂದ್ ● ಬಲವಂತದ ಬಂದ್ ಸಾಹಸಕ್ಕೆ ಕೈ ಹಾಕದ ಪ್ರತಿಭಟನಾಕಾರರು



ಮೈಸೂರು, ಸೆ.29(ಬಿಎಲ್‌ಯು)– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ವಿರೋಧಿಸಿ ರಾಜ್ಯ ರೈತ ಸಂಘ ಹಾಗೂ ಕನ್ನಡ ಪರ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಮೈಸೂರಿನಲ್ಲಿ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಹೋಟೆಲ್‌ಗಳು, ಸಿನಿಮಾ ಮಂದಿರಗಳು, ಕೈಗಾರಿಕೆಗಳು, ಅಂಗಡಿ–ಮುಂಗಟ್ಟುಗಳು ಮುಚ್ಚಿದ್ದವು. ಕೆಎಸ್‌ಆರ್‌ಟಿಸಿ ಬಸ್, ಖಾಸಗಿ ಬಸ್, ಆಟೋ, ಟ್ಯಾಕ್ಸಿಗಳು ರಸ್ತೆಗಳಿಯದೆ ಮೈಸೂರು ರಸ್ತೆಗಳು ಬಿಕೋ ಎನ್ನುತ್ತಿದ್ದವು. ಈ ಮೂಲಕ ಕಾವೇರಿ ಕಿಚ್ಚಿಗೆ ಇಡೀ ಮೈಸೂರು ನಗರ ಸ್ತಬ್ಧವಾಗಿತ್ತು.

ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶದಂತೆ ತಮಿಳುನಾಡಿಗೆ ಪ್ರತಿ ದಿನ ಕಾವೇರಿ ನೀರು ಬಿಡುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ನಡೆಯುತ್ತಿರುವ ಕಾವೇರಿ ಹೋರಾಟ ● 10ನೇ ಪುಟಕ್ಕೆ

ಬಂದ್ ನಿಂದ ಮೈಸೂರಿಗೆ 170 ಕೋಟಿ ರೂ. ನಷ್ಟ


ಮೈಸೂರು, ಸೆ.29(ಬಿಎಲ್‌ಯು)– ಕರ್ನಾಟಕ ಬಂದ್‌ಗೆ ಮೈಸೂರಿನ ವ್ಯಾಪಾರಸ್ಥರು ಸಂಪೂರ್ಣ ಬೆಂಬಲ ನೀಡಿದ್ದರು. ಈ ಬಂದ್ ನಿಂದ ಮೈಸೂರು ಜಿಲ್ಲೆಗೆ ಕೋಟ್ಯಾಂತರ ರೂ. ನಷ್ಟವಾಗಿದೆ. ಮೈಸೂರು ನಗರ ಮಾತ್ರವಲ್ಲದೆ ಜಿಲ್ಲೆ ಕೂಡ ಸ್ತಬ್ಧವಾಗಿತ್ತು, ಅಂಗಡಿ ಮುಂಗಟ್ಟು ಬಂದ್ ಆಗಿ ವ್ಯಾಪಾರ ವಹಿವಾಟು ಸ್ಥಗಿತವಾಗಿತ್ತು. ಇದರಿಂದ ಮೈಸೂರು ಜಿಲ್ಲೆಯಲ್ಲಿ ಸುಮಾರು 170 ಕೋಟಿ ರೂ. ನಷ್ಟವಾಗಿದೆ ಎಂದು ಮೈಸೂರು ಛೇಂಬರ್ಸ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿಗೆ ಒಂದು ಕೋಟಿ ನಷ್ಟ

ಮೈಸೂರು: ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಕೆಎಸ್ ಆರ್‌ಟಿಸಿ ಬಸ್‌ಗಳ ಸಂಚಾರ ಸಂಪೂರ್ಣ ಸ್ಥಗಿತವಾಗಿತ್ತು. ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಈ ಬಂದ್‌ನಿಂದ ಕೆಎಸ್‌ಆರ್‌ಟಿಸಿಗೆ ಸುಮಾರು ಒಂದು ಕೋಟಿ ರೂ. ನಷ್ಟವಾಗಿದೆ ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ತಿಳಿಸಿದ್ದಾರೆ.

ನಿತ್ಯ 3 ಸಾವಿರ ಕ್ಯೂಸೆಕ್ ನೀರು ಬಿಡಿ

ಬಂದ್ ನಡುವೆ CWRC ಆದೇಶ ಪಾಲಿಸುವಂತೆ ಕರ್ನಾಟಕಕ್ಕೆ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಸೂಚನೆ



ನವದೆಹಲಿ, ಸೆ.29– ಕಾವೇರಿ ನದಿ ನೀರಿಗಾಗಿ ರಾಜ್ಯಾದ್ಯಂತ ಬಂದ್ ನಡೆಯುತ್ತಿರುವಂತೆಯೇ ಅತ್ತ ದೆಹಲಿಯಲ್ಲಿ ಇಂದು ನಡೆದ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ–CWMA ಸಭೆಯಲ್ಲಿ ಈ ಹಿಂದೆ ಕಾವೇರಿ ನೀರು ನಿಯಂತ್ರಣ ಸಮಿತಿ (CWRC) ನೀಡಿದ್ದ ಆದೇಶವನ್ನು ಪಾಲಿಸುವಂತೆ ಕರ್ನಾಟಕ ಸರ್ಕಾರಕ್ಕೆ ಆದೇಶಿಸಿದೆ.


ಈ ಹಿಂದೆ ಕಾವೇರಿ ನೀರು ನಿಯಂತ್ರಣ ಸಮಿತಿ (CWRC) ನೀಡಿದ್ದ ಅಕ್ಟೋಬರ್ 15ರವರೆಗೆ ತಮಿಳುನಾಡಿಗೆ ನಿತ್ಯ 3 ಸಾವಿರ ಕ್ಯುಸೆಕ್ ನೀರನ್ನು ಹರಿಸುವ ಆದೇಶವನ್ನು ಪಾಲಿಸುವಂತೆ ಕರ್ನಾಟಕಕ್ಕೆ ಇಂದು ಸೂಚಿಸಲಾಗಿದೆ. ಆ ಮೂಲಕ ಕಾವೇರಿ ನೀರು ನಿಯಂತ್ರಣ ಸಮಿತಿ (CWRC) ನೀಡಿದ್ದ ಆದೇಶವನ್ನು ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ–CWMA ಎತ್ತಿಹಿಡಿದಿದೆ.

ಅಂತೆಯೇ ತಮಿಳುನಾಡು ಮತ್ತು ಕರ್ನಾಟಕ ಉಭಯ ಸರ್ಕಾರಗಳ ಬೇಡಿಕೆಯನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ತಿರಸ್ಕರಿಸಿದ್ದು, ನಿತ್ಯ 3 ಸಾವಿರ ಕ್ಯುಸೆಕ್ ನೀರನ್ನು ಹರಿಸುವ ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶವನ್ನು ಪಾಲಿಸುವಂತೆ ಕರ್ನಾಟಕ ಸರ್ಕಾರಕ್ಕೆ ಸೂಚಿಸಿದೆ.

12 ಟಿಎಂಸಿ ಬ್ಯಾಕ್ ಲಾಗ್ ನೀರು ಬಿಡುವಂತೆ ತಮಿಳುನಾಡು ಪಟ್ಟು: ಇನ್ನು, ಇಂದಿನ ಸಭೆಯಲ್ಲಿ ತಮಿಳುನಾಡು ನಿತ್ಯ 12,500 ಕ್ಯುಸೆಕ್ ನೀರು ಬಿಡುವಂತೆ ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು ಎಂದು ಇಂದಿನ ಸಭೆಯಲ್ಲಿ ಆಗ್ರಹಿಸಿತ್ತು. ಇದು ಮಾತ್ರವಲ್ಲದೇ ಕರ್ನಾಟಕ ಬಾಕಿ ಉಳಿಸಿಕೊಂಡಿರುವ 12 ಟಿಎಂಸಿ ಬ್ಯಾಕ್‌ಲಾಗ್ ನೀರನ್ನು ಮೊದಲು ಬಿಡುವಂತೆ ಆದೇಶ ನೀಡಬೇಕು ಎಂದು ವಾದಿಸಿತ್ತು. ಅಂತೆಯೇ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಕರ್ನಾಟಕ 123 ಟಿಎಂಸಿ ನೀರು ಹರಿಸಬೇಕಿತ್ತು. ಆದರೆ, ಈವರೆಗೆ ಕೇವಲ 40 ಟಿಎಂಸಿ ನೀರು ಮಾತ್ರ ಹರಿಸಿದೆ. ● 10ನೇ ಪುಟಕ್ಕೆ







ಮೈಸೂರು ಮಿತ್ರ ಶನಿವಾರ 30 ಸೆಪ್ಟೆಂಬರ್ 2023

ಮೈಸೂರು ಕೊಡವ ಸಮಾಜದ ನೂತನ ಪದಾಧಿಕಾರಿಗಳು


ಪಿ.ಎ.ಗಣಪತಿ


ಐ.ಜಿ.ಕಾಶಿಯಪ್ಪ

ಮೈಸೂರು, ಸೆ. 29– ಮೈಸೂರಿನ ವಿಜಯನಗರದಲ್ಲಿರುವ ಕೊಡವ ಸಮಾಜದ ಆವರಣದಲ್ಲಿ ಗುರುವಾರ ನಡೆದ ವಾರ್ಷಿಕ ಸರ್ವ ಸದಸ್ಯರ ಸಭೆ ಸಂದರ್ಭದಲ್ಲಿ 2023–25ನೇ ಸಾಲಿನ ವ್ಯವಸ್ಥಾಪನಾ ಸಮಿತಿಗೆ ನಡೆದಂತಹ ಚುನಾವಣೆಯಲ್ಲಿ ಕೊಡವ ಸಮಾಜದ ನೂತನ ಅಧ್ಯಕ್ಷರಾಗಿ ಪೊಂಜಂಡ ಎ. ಗಣಪತಿ ಆಯ್ಕೆಯಾಗಿದ್ದಾರೆ. ಇದೇ ವೇಳೆ ಗೌರವ ಖಜಾಂಚಿಯಾಗಿ ಇಟ್ಟೀರ ಜಿ. ಕಾಶಿಯಪ್ಪ ಆಯ್ಕೆಯಾದರು.

ಪೊಂಜಂಡ ಎ. ಗಣಪತಿ ಅವರು 814 ಮತಗಳನ್ನು ಪಡೆದರೆ, ಇವರ ಪ್ರತಿಸ್ಪರ್ಧಿ ಮಾಲಚಿರಾ ಎಂ. ಪೊನ್ನಪ್ಪ 681 ಮತಗಳನ್ನು ಪಡೆದುಕೊಂಡರು. ಇಟ್ಟಿರಾ ಜಿ.ಕಾಶಿಯಪ್ಪ 805 ಮತಗಳನ್ನು ಗಳಿಸಿದರೆ, ಇವರ ಪ್ರತಿಸ್ಪರ್ಧಿ ಬಾಳೆಕುಟ್ಟೀರಾ ಪೂಣಚ್ಚ 648 ಮತಗಳನ್ನು ಪಡೆದುಕೊಂಡರು. 1495 ಮತಗಳು ಚಲಾವಣೆಗೊಂಡವು. ಉಪಾಧ್ಯಕ್ಷರಾಗಿ ಮಾಚಿಮಾಡ ಪಿ. ನಾಣಯ್ಯ, ಗೌರವ ಕಾರ್ಯದರ್ಶಿಯಾಗಿ ಕೆಟೋಲಿರ ಎ. ಬೆಳ್ಳಿಯಪ್ಪ; ಜಂಟಿ ಕಾರ್ಯದರ್ಶಿಯಾಗಿ ಅಜ್ಜಿಕುಟ್ಟೀರ ಡಯಾನ ಪೂವಯ್ಯ ಅವಿರೋಧವಾಗಿ ಆಯ್ಕೆಯಾದರು.

ಪ್ರದೇಶವಾರು ಕೊಡವ ಅಸೋಸಿಯೇಷನ್ ಸಮಿತಿ ಸದಸ್ಯರು; ಶ್ರೀ ಭಗವತಿ ಕೊಡವ ಅಸೋಸಿಯೇಷನ್–ಕೊಕ್ಕಂಡ ಬಿದ್ದಪ್ಪ; ಶ್ರೀ ಬ್ರಹ್ಮಗಿರಿ ಕೊಡವ ಅಸೋಸಿಯೇಷನ್–ಚಿರಿಯಾಪಂಡ ಕೆ. ವಿಶ್ವನಾಥ್; ಕಾವೇರಿ ಕೊಡವ ಒಕ್ಕೂಟ (ಎನ್.ಆರ್. ಮೊಹಲ್ಲಾ)–ಮಾದೇಟಿರಾ ಪಿ. ಸೋಮಣ್ಣ ಸುನೀಲ್; ಶ್ರೀ ಕಾವೇರಿ ಕೊಡವ ಅಸೋಸಿಯೇಷನ್, ಮೈಸೂರು ಈಸ್ಟ್– ಮೋಳೇರಾ ಎ. ಕವಿತಾ; ಗೋಕುಲಂ ಕೊಡವ ಸಂಘ–ಉಳ್ಳಿಯಾಡ ಎಂ. ಚಿದಾನಂದ, ಇಗ್ಗುತಪ್ಪ ಕೊಡವ ಅಸೋಸಿಯೇಷನ್ (ಶ್ರೀರಾಂಪುರ)– ಕುಪ್ಪಂಡ ನಮಿತಾ ಸುಬ್ಬಯ್ಯ; ಇಗ್ಗುತಪ್ಪ ಕೊಡವ ಕ್ಷೇಮಾಭಿವೃದ್ಧಿ ಸಂಘ – ಕೊಟ್ಟಂಗಡ ಪಿ.ಪೆಮ್ಮಯ್ಯ ಮತ್ತು ಮುಂಜಾಂಡಿರ ಶೈಲಾ ದೇವಯ್ಯ; ಜಯಲಕ್ಷ್ಮಿಪುರಂ ಕೊಡವ ಅಸೋಸಿಯೇಷನ್– ನಾಮ ನಿರ್ದೇಶನವಿಲ್ಲ; ಕುವೆಂಪುನಗರ ಕೊಡವ ರೆಸಿಡೆಂಟ್ಸ್ ಅಸೋಸಿಯೇಷನ್– ಅಚಂಡಿರ ಎಂ. ಸೋಮಯ್ಯ; ಲೋಪಮುದ್ರ ಕೊಡವ ಅಸೋಸಿಯೇಷನ್ (ವಿಜಯನಗರ 1ನೇ ಹಂತ) – ನಾಮ ನಿರ್ದೇಶನವಿಲ್ಲ; ನೆಲ್ಲಕ್ಕಿ ಕೊಡವ ಕೂಟ (ವಿಜಯನಗರ 2ನೇ ಹಂತ)– ಚೆಂಡಂಡ ಸಿ. ಸುಬ್ರಮಣಿ ಮತ್ತು ಪಾಡೇಯಂಡ ಸುಮಿ ಗೋಪಾಲ್; ಪೊಂಬೊಲಾಕ್ ಕೊಡವ ಕೂಟ (ವಿಜಯನಗರ 4ನೇ ಹಂತ)– ಅಮ್ಮಂಡ ಪಿ. ಸೋಮಯ್ಯ; ಪೊಮ್ಮಳೆ ಕೊಡವ ಒಕ್ಕೂಟ (ರಾಮಕೃಷ್ಣನಗರ)– ಕಂಜಿತಂಡ ಬಿ. ಕುಶಾಲಪ್ಪ; ರಾಮಕೃಷ್ಣನಗರ ಐ ಬ್ಲಾಕ್ ಕೊಡವ ವೆಲ್‌ಫೇರ್ ಅಸೋಸಿಯೇಷನ್ –ಡಾ. ನೆರವಂಡ ಬಿ. ಸುರೇಶ್; ಶ್ರೀ ಫೀಲ್ಡ್ ಮಾರ್ಷಲ್ ಕೊಡವ ಕ್ಷೇಮಾಭಿವೃದ್ಧಿ ಸಂಘ (ಇಲವಾಲ)– ಕಡೀರ ನಂದಕುಮಾರ್; ಶ್ರೀ ತಲಕಾವೇರಿ ಕೊಡವ ಸಾಂಸ್ಕೃತಿಕ ಸಂಘ (ಹೂಟಗಳ್ಳಿ) – ಪೊನ್ನಿಮಾಡ ಕೆ. ಬಿದ್ದಪ್ಪ ಮತ್ತು ಪಟ್ಟಮಾಡ ದೇವಕ್ಕಿ ಸೋಮಯ್ಯ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಚೆಂಬಂಡ ಜಿ. ಸೋಮಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಮಿಳುನಾಡಿಗೆ ಕಾವೇರಿ ನೀರು ಬಿಡದಂತೆ ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ



ಮೈಸೂರು, ಸೆ. 29– ಕನ್ನಡ ನಾಡಿನ ಜೀವನದಿ ಕಾವೇರಿ ನೀರನ್ನು ತಮಿಳುನಾಡಿಗೆ ನಿರಂತರವಾಗಿ ಹರಿಸುತ್ತಿರುವುದನ್ನು ವಿರೋಧಿಸಿ ಈ ಕೂಡಲೇ ಕಾವೇರಿ ನೀರನ್ನು ತಮಿಳುನಾಡಿಗೆ ಬಿಡುವುದನ್ನು ನಿಲ್ಲಿಸುವಂತೆ ಆಗ್ರಹಿಸಿ ಮೈಸೂರಿನ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಚೇಂಬರ್ ಆಫ್ ಕಾಮರ್ಸ್‌ನಿಂದ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮೈಸೂರು ಕೈಗಾರಿಕಾ ಮತ್ತು ವಾಣಿಜ್ಯ ಸಂಘದ ಅಧ್ಯಕ್ಷ ಕೆ.ಬಿ. ಲಿಂಗರಾಜು ಉಪಾಧ್ಯಕ್ಷ ಆನಂದ್, ಗೌರವ ಕಾರ್ಯದರ್ಶಿ ಶಿವಾಜಿರಾವ್, ಕೋಶ್ಯಾಧ್ಯಕ್ಷ ಎಸ್.ಜೆ.ಅಶೋಕ್, ಗ್ರಾನೈಟ್ ಅಸೋಸಿಯೇಷನ್ ಜಂಟಿ ಕಾರ್ಯದರ್ಶಿ ವಿನೋದ್ ಜೈನ್, ದೇವರಾಜ ಮಾರುಕಟ್ಟೆ ಸಂಘದ ಅಧ್ಯಕ್ಷ ಎಸ್ ಮಹದೇವ್, ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾದ ಸಂಸ್ಥಾಪಕ ರಾಜ್ಯಾಧ್ಯಕ್ಷ ಎನ್. ಬೆಟ್ಟೇಗೌಡ, ಜೈನ್ ಪ್ರೊಫೆಷನಲ್ ಅಸೋಸಿಯೇಷನ್ ಕಾರ್ಯದರ್ಶಿ ಎಂ.ಸಿ.ಬನ್ಸಾಲಿ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಬಾಡಿಗೆದಾರರ ಸಂಘದ ಅಧ್ಯಕ್ಷ ಸಂಪತ್, ಮೈಸೂರು ನಗರ ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ದೇವರಾಜ್, ಮೈಸೂರ್ ಚೇಂಬರ್ಸ್ ಅಸೋಸಿಯೇಷನ್ ಸದಸ್ಯರಾದ ಮಲ್ಲೇಶ್, ಎಸ್.ಡಿ.ರಾಮು ಹಾಗೂ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.


ಲಿಂಗೈಕ್ಯರಾದ ನರಗ್ಯಾತನಹಳ್ಳಿ ಶ್ರೀ ರಾಜಶೇಖರ ಸ್ವಾಮೀಜಿ



ಮೈಸೂರು, ಸೆ. 29–ಟಿ.ನರಸೀಪುರ ತಾಲೂಕು ನರಗ್ಯಾತನಹಳ್ಳಿ ಶ್ರೀ ವಿರಕ್ತ ಮಠದ ಶ್ರೀ ರಾಜಶೇಖರ ಸ್ವಾಮಿಗಳು ಸೆಪ್ಟೆಂಬರ್ 29ರಂದು ಮುಂಜಾನೆ ಲಿಂಗೈಕ್ಯರಾದರು.

ಶ್ರೀಮಠಕ್ಕೆ ಸುಮಾರು ನಾಲ್ಕು ನೂರು ವರ್ಷಗಳ ಇತಿಹಾಸವಿದೆ. ಶ್ರೀ ರಾಜಶೇಖರ ಸ್ವಾಮಿಗಳಿಗೆ 1972ರಲ್ಲಿ ನಿರಂಜನ ಪಟ್ಟಾಧಿಕಾರ ನೆರವೇರಿತ್ತು. ಅವರಿಗೆ 78 ವರ್ಷ ವಯಸ್ಸಾಗಿತ್ತು. ಶ್ರೀಮಠದ ಎಲ್ಲ ಕಾರ್ಯಗಳನ್ನು ಯಶಸ್ವಿಯಾಗಿ ನೆರವೇರಿಸಿ ಕೊಂಡು ಬರುತ್ತಿದ್ದರು. ಭಕ್ತಾದಿಗಳ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಶ್ರೀಗಳ ಅಗಲುವಿಕೆಯಿಂದ ಉಂಟಾಗಿರುವ ಕೊರತೆಯನ್ನು ಅವರ ಉತ್ತರಾಧಿಕಾರಿಗಳಾದ ಶ್ರೀ ಇಮ್ಮಡಿ ಶಿವಕುಮಾರ ಸ್ವಾಮಿಗಳು ಮುಂದುವರೆಸಿಕೊಂಡು ಹೋಗಲು ಮತ್ತು ಶ್ರೀಗಳ ಅಗಲುವಿಕೆಯಿಂದ ಶ್ರೀಮಠದ ಭಕ್ತಾದಿಗಳಿಗೆ, ಸಾರ್ವಜನಿಕರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಮೈಸೂರು ಮತ್ತು ಚಾಮರಾಜನಗರದ ವೀರಶೈವ–ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯಿಂದ ಪ್ರಾರ್ಥಿಸಲಾಗಿದೆ.

ರೇವಣ್ಣ ನಿಧನ



ಮಲ್ಕುಂಡಿ, ಸೆ.29– ಸಮೀಪದ ಕಗ್ಗಲಿಹುಂಡಿ ಗ್ರಾಮದ ನಿವಾಸಿ ಕಾಂಗ್ರೆಸ್ ಪಕ್ಷದ ಎಸ್ಸಿ ಘಟಕದ ಜಿಲ್ಲಾ ಉಪಾಧ್ಯಕ್ಷ ಮಹದೇವು ಅವರ ಪುತ್ರ ರೇವಣ್ಣ(33) ಗುರುವಾರ ರಾತ್ರಿ ಹೃದಯಾಘಾತದಿಂದ ಮೈಸೂರಿನ ಬನ್ನಿ ಮಂಟಪದಲ್ಲಿ ನಿಧನರಾದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವ ಗ್ರಾಮವಾದ ಕಗ್ಗಲಿಹುಂಡಿ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಶಿಲ್ಪ



ತಿ.ನರಸೀಪುರ, ಸೆ.29– ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮೂಗೂರು ಎಂ. ಡಿ.ಬಸವರಾಜ್ ಅವರ ಸೊಸೆ ತ್ರಿಪುರ ಸುಂದರಿ ದೇವಸ್ಥಾನ ಪಾರುಪತ್ತೆಗಾರ ಎಂ.ಬಿ. ಸಾಗರ್ ಅವರ ಪತ್ನಿ ಶ್ರೀಮತಿ ಶಿಲ್ಪ(34) ಅವರು ಇಂದು ಸಂಜೆ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದ್ದಾರೆ.

ದಿವಂಗತರು ಪತಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಶನಿವಾರ) ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮ ಮೂಗೂರು ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ಮೂಲ ತಿಳಿಸಿವೆ.

ಸಂತಾಪ: ಪುರಸಭಾ ಸದಸ್ಯ ಬಾದಾಮಿ ಮಂಜು, ಶ್ರೀ ಮಹದೇಶ್ವರ ಕಲ್ಯಾಣ ಮಂಟಪ ಮಾಲಿಕ ಹೋಟೆಲ್ ರಾಜಣ್ಣ, ಬೈರಾಪುರ ಗ್ರಾಮ ಮಾಜಿ ಅಧ್ಯಕ್ಷ ವೆಂಕಟೇಶ್ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದ್ದಾರೆ.

ಅ.2ರಂದು ಶಾಸಕ ಜಿಟಿಡಿಯವರಿಂದ ವೃದ್ಧಾಶ್ರಮ ಉದ್ಘಾಟನೆ

ಲಿಂಗಾಂಬುದ್ಧಿ ಪಾಳ್ಯದ ಶಕ್ತಿ ಬಡಾವಣೆಯಲ್ಲಿ ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದಿಂದ ನಿರ್ಮಾಣ




ಪಾರ್ವತಿ ಕಾರಿಯಪ್ಪ

ಮೈಸೂರು, ಸೆ. 29– ಮೈಸೂರಿನ ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದಿಂದ ಲಿಂಗಾಂಬುದ್ಧಿ ಪಾಳ್ಯದ ಶಕ್ತಿ ಬಡಾವಣೆಯಲ್ಲಿ ನಿರ್ಮಾಣಗೊಂಡಿರುವ ವೃದ್ಧಾಶ್ರಮವನ್ನು ಅ. 2 ರಂದು ಬೆಳಗ್ಗೆ 10 ಗಂಟೆಗೆ ಚಾಮುಂಡೇಶ್ವರಿ ಶಾಸಕ ಜಿ.ಟಿ. ದೇವೇಗೌಡರು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಎಲ್. ನಾಗೇಂದ್ರ ಭಾಗವಹಿಸುವರು. ಗೌರವ ಅತಿಥಿಯಾಗಿ ವಿಜಯನಗರದ ಕಾರ್ಪೊರೇಟರ್ ಎಂ.ಯು. ಸುಬ್ಬಯ್ಯ ಉಪಸ್ಥಿತರಿರುವರು. ಸಂಘದ ಅಧ್ಯಕ್ಷರಾದ ಪೊಂಜಂಡ ಲಲ್ಲಿ ಅಪ್ಪಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಘದ ಉಪಾಧ್ಯಕ್ಷ ಕೊಲ್ಲೀರಾ ಬೊಳ್ಳಮ್ಮ (ಶಾಂತಿ) ಕುಟ್ಟಪ್ಪ; ಗೌರವ ಕಾರ್ಯದರ್ಶಿ ಚೆಂಡಂಡ ನಿರ್ಮಲ ಸುಬ್ರಮಣಿ; ಖಜಾಂಚಿ ಮಾಚಿಮಾಂಡ ಗೀತಾ ಕುರುಂಬಯ್ಯ; ಜಂಟಿ ಕಾರ್ಯದರ್ಶಿಗಳಾದ ತಂಬಂಡ ನೀನಾ ದೇವಯ್ಯ ಮತ್ತು ಅಜ್ಜಿಕುಟ್ಟಿರ ಡಯಾನ ಪೂವಯ್ಯ; ಜಂಟಿ ಕಾರ್ಯದರ್ಶಿಗಳಾದ ಪಾಡೆಯಂಡ ಸುಮಿ ಗೋಪಾಲ್ ಮತ್ತು ಇಟ್ಟಿರಾ ಜ್ಯೋತಿ ಕಾಶಿಯಪ್ಪ ಹಾಗೂ ಸಂಘದ ಇತರ ಸದಸ್ಯರು ಮತ್ತು ಸಂಘಗಳ ಮಾಜಿ ಅಧ್ಯಕ್ಷರಾದ ಬಳ್ಳಿಯಮಂಡ ಸರಸು ನಾಣಯ್ಯ, ಬಳ್ಳಾಡಿಚಂಡ ಜೆರ್ರೆ ಪೊನ್ನಪ್ಪ ಮತ್ತು ಮೂವೇರಾ ಬೊಳ್ಳಮ್ಮ ಕುಟ್ಟಪ್ಪ ಇದೇ ವೇಳೆ ಉಪಸ್ಥಿತರಿರುವರು.

ಕನಸಿನ ಯೋಜನೆ



ಇದು ಸೆ.13, 2021ರಂದು ನಿಧನರಾದ ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ ಸಂಸ್ಥಾಪಕ ಅಧ್ಯಕ್ಷರು ಮತ್ತು ಸಲಹೆಗಾರರಾದ ದಿ. ಇಟ್ಟೀರಾ ಪಾರ್ವತಿ ಕಾರಿಯಪ್ಪ (ಡಾಟಿ) ಅವರ ಕನಸಿನ ಯೋಜನೆಯಾಗಿದೆ.

ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅವರು ಮಾರ್ಚ್ 1, 2020ರಂದು ವೃದ್ಧಾಶ್ರಮಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು.

ಓಲ್ಡ್ ಏಜ್ ಹೋಮ್ ಅನ್ನು ಸಾವಿರಾರು ದಾನಿಗಳು, ಚುನಾಯಿತ ಪ್ರತಿನಿಧಿಗಳು ಮತ್ತು ಸಂಘಗಳ ಸದಸ್ಯರಿಂದ ಸಂಗ್ರಹಿಸಿದ ದೇಣಿಗೆ ಹಣದಿಂದ ನಿರ್ಮಿಸಲಾಗಿದೆ. ವೃದ್ಧಾಶ್ರಮವು ಸುಸಜ್ಜಿತವಾಗಿದ್ದು, 7 ರೂಮುಗಳು, ಡೈನಿಂಗ್ ಹಾಲ್, ಅಡುಗೆ ಮನೆ ಮತ್ತು 14 ಮಂದಿ ಉಳಿದುಕೊಳ್ಳುವ ಒಂದು ದೊಡ್ಡ ಹಾಲ್ ಒಳಗೊಂಡಿದೆ. ವೃದ್ಧಾಶ್ರಮಕ್ಕೆ ಓರ್ವ ವಾರ್ಡನ್ ಮತ್ತು ವೃದ್ಧಾಶ್ರಮದಲ್ಲಿ ಉಳಿದುಕೊಳ್ಳುವವರ ಸುರಕ್ಷತೆಗಾಗಿ ವಾಚ್‌ಮನ್ ನಿಯೋಜಿಸಲಾಗಿದೆ. ಅಗತ್ಯವಿರುವವರಿಗೆ ಕರೆ ಮಾಡಿದರೆ ಸಾಕು ನೆರವಿಗೆ ಬರುವಂತಹ ಓರ್ವ ವೈದ್ಯರನ್ನು ಕೂಡ ನಿಯೋಜಿಸಲಾಗಿದೆ. ಈ ವೃದ್ಧಾಶ್ರಮವನ್ನು ನಂಜನಗೂಡು ರಿಂಗ್ ರಸ್ತೆ, ಮೈಸೂರು ಯೂನಿವರ್ಸಿಟಿ ಬಡಾವಣೆಗೆ ಹೊಂದಿಕೊಂಡಂತೆ ಮಾಲೆಗಾಲ ಮಾರಮ್ಮ ದೇವಸ್ಥಾನದ ಹತ್ತಿರ, ಶಕ್ತಿ ಬಡಾವಣೆಯಲ್ಲಿ ನಿರ್ಮಿಸಲಾಗಿದ್ದು, ಎಲ್ಲಾ ಸಮುದಾಯ ದವರಿಗೂ ಮುಕ್ತವಾಗಿದ್ದು, ಶೀಘ್ರದಲ್ಲೇ ಕಾರ್ಯಾರಂಭವಾಗಲಿದೆ.

ಅ.8ಕ್ಕೆ ವಾರ್ಷಿಕ ಸರ್ವ ಸದಸ್ಯರ ಸಭೆ

ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ 2022–2023ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಅ.8ರಂದು ಬೆಳಗ್ಗೆ 10.30 ಗಂಟೆಗೆ ವಿಜಯನಗರದ ಕೊಡವ ಸಮಾಜದ ಆವರಣದಲ್ಲಿ ಕರೆಯಲಾಗಿದ್ದು, ಸಂಘದ ಅಧ್ಯಕ್ಷೆ ಪೊಂಜಂಡ ಲಲ್ಲಿ ಅಪ್ಪಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ಮೈಸೂರಿನ ಅಭಿನವ ಶಂಕರಮಠದಲ್ಲಿ ವೇದಾಂತ ಶಿಬಿರ

ಮೈಸೂರು, ಸೆ. 29– ಮೈಸೂರಿನ ಅಭಿನವ ಶ್ರೀ ಶಂಕರಮಠದ ವಿದ್ಯಾಭಾರತಿ ಕಲ್ಯಾಣ ಮಂಟಪದ ಆವರಣದಲ್ಲಿ ಅ. 6 ರಿಂದ 8 ರವರೆಗೆ ಬೆಳಗ್ಗೆ 9 ರಿಂದ ಸಂಜೆ 7 ಘಂಟೆಯವರೆಗೆ ವೇದಾಂತ ಶಿಬಿರವನ್ನು ಏರ್ಪಡಿಸಲಾಗಿದೆ.

ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತಿ ಮಹಾಸ್ವಾಮಿಗಳ ಮಾರ್ಗದರ್ಶನದೊಂದಿಗೆ ವೇದಾಂತ ಶಿಬಿರವನ್ನು ಪ್ರಸ್ತುತ ಪಡಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಯಡತೊರೆ ಯೋಗಾನಂದೇಶ್ವರ ಸರಸ್ವತೀ ಮಠದ ಅಧಿಪತಿ ಶ್ರೀ ಶಂಕರ ಭಾರತಿ ಸ್ವಾಮಿಗಳು ಆಶೀರ್ವಚನ ನೀಡಲಿದ್ದಾರೆ. ಶೃಂಗೇರಿ ಹಾಗೂ ರಾಜ್ಯದ ಅನೇಕ ಜಿಲ್ಲೆಗಳಿಂದ ವಿದ್ವಾಂಸರು, ವಾಗ್ಮಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಅನೇಕ ವೇದಾಂತ ವಿಷಯಗಳ ಕುರಿತಾಗಿ ಪ್ರವಚನ ನೀಡಲಿದ್ದಾರೆ. ಮೊ. 7483433427.

ರಾಜ್ಯಮಟ್ಟಕ್ಕೆ ದಕ್ಷ ವಿದ್ಯಾರ್ಥಿನಿಯರು ಆಯ್ಕೆ


ಎನ್.ಸಿಂಚನ


ಆರ್.ತನ್ಮಯಿ

ಮೈಸೂರು, ಸೆ. 29– ದಕ್ಷ ಕಾಲೇಜಿನ ವಿದ್ಯಾರ್ಥಿನಿಯರು 2023–24ನೇ ಸಾಲಿನ ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಕಾಲೇಜಿನ ದ್ವಿತೀಯ ಪಿಯು ವಿದ್ಯಾರ್ಥಿನಿ ಎನ್.ಸಿಂಚನ ಥ್ರೋಬಾಲ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸಲಿದ್ದಾಳೆ. ಅದೇ ರೀತಿ, ಪ್ರಥಮ ಪಿಯು ವಿದ್ಯಾರ್ಥಿನಿ ಆರ್. ತನ್ಮಯಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ಉಳಿದಂತೆ ಪ್ರಥಮ ಪಿಯು ವಿದ್ಯಾರ್ಥಿನಿ ಅನನ್ಯ ಆರ್. ಕರಾಟೆ ಸ್ಪರ್ಧೆಯಲ್ಲಿ ಮೂರನೇ ಸ್ಥಾನವನ್ನು ತನ್ನದಾಗಿಸಿಕೊಂಡಿದ್ದಾರೆ. ಸಾಧನೆ ಮಾಡಿದ ಕ್ರೀಡಾಪಟುಗಳನ್ನು ಕಾಲೇಜಿನ ಅಧ್ಯಕ್ಷ ಜಯಚಂದ್ರ ಪಿ.ರಾಜು, ಕಾರ್ಯದರ್ಶಿಗಳಾದ ಸೋನಿಯಾ ಉಮಾಪತಿ, ವ್ಯವಸ್ಥಾಪಕ ನಿರ್ದೇಶಕರಾದ ಗೌತಮ್ ರಾಜು, ಅಭಿವೃದ್ಧಿ ನಿರ್ದೇಶಕರಾದ ರತ್ನಾಕರ್ ಶಾನ್ಭಾಗ್, ಪ್ರಾಂಶುಪಾಲರಾದ ಮೋಹನ್ ಸಿ.ಆರ್., ದೈಹಿಕ ಶಿಕ್ಷಣ ನಿರ್ದೇಶಕರಾದ ಶಶಿರಾಜ್ ಅಭಿನಂದಿಸಿದ್ದಾರೆ.

ಭಾರತದ ಹೆಮ್ಮೆಯ ಪುತ್ರ ಡಾ.ಎಂ.ಎಸ್.ಸ್ವಾಮಿನಾಥನ್

ಸುತ್ತೂರು ಶ್ರೀಗಳ ಶೋಕ ಸಂದೇಶ


ಇದೇ ಸೆಪ್ಟೆಂಬರ್ 28ರಂದು ಅಗಲಿದ ಭಾರತದ ಹಸಿರು ಕ್ರಾಂತಿಯ ಪಿತಾಮಹ ಎಂದೇ ಖ್ಯಾತರಾಗಿದ್ದ ಡಾ. ಎಂ.ಎಸ್. ಸ್ವಾಮಿನಾಥನ್‌ರವರು 8 ಜುಲೈ 2008ರಂದು ಸುತ್ತೂರು ಶ್ರೀಕ್ಷೇತ್ರಕ್ಕೆ ಎಸ್‌ಜಿಎಸ್‌ವೈ ಬೀಜ ಘಟಕಗಳ ಉದ್ಘಾಟನೆಗೆ ಆಗಮಿಸಿದ್ದಾಗ ಸುತ್ತೂರು ಶ್ರೀಗಳೊಂದಿಗೆ ಸಮಾಲೋಚಿಸುತ್ತಿರುವ ಸಾಂದರ್ಭಿಕ ಚಿತ್ರ.

ಮೈಸೂರು, ಸೆ.29–ಹಸಿರು ಕ್ರಾಂತಿಯ ಪಿತಾಮಹರೆನಿಸಿದ್ದ ಖ್ಯಾತ ಕೃಷಿ ವಿಜ್ಞಾನಿ ಹಾಗೂ ಸಂಶೋಧಕರೂ ಆಗಿದ್ದ ಡಾ. ಎಂ.ಎಸ್.ಸ್ವಾಮಿನಾಥನ್ ಅವರ ಅಗಲಿಕೆ ಭಾರತೀಯ ಕೃಷಿ ಕ್ಷೇತ್ರಕ್ಕೆ ಆದ ದೊಡ್ಡ ನಷ್ಟವಾಗಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ತಿಳಿಸಿದ್ದಾರೆ.

ಭಾರತದ ಆರ್ಥಿಕ ಇತಿಹಾಸದಲ್ಲಿ ಡಾ. ಸ್ವಾಮಿನಾಥನ್‌ರವರು ಅತ್ಯುನ್ನತ ಪಂಕ್ತಿಯಲ್ಲಿ ಪರಿಗಣಿತವಾಗುವ ಹೆಸರು. ಕೃಷಿ ಕ್ಷೇತ್ರದಲ್ಲಿ ಅಪೂರ್ವ ಪಾಂಡಿತ್ಯವನ್ನೂ, ಭವಿಷ್ಯತ್ತಿನ ಮುಂಗಾಣ್ಕೆಯನ್ನು ಹೊಂದಿದ್ದ ಧೀಮಂತರು. ಅಮೆರಿಕದ ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ ಪಡೆದ ಪ್ರತಿಭಾನ್ವಿತರು. ರೈತ ಸಮುದಾಯದ ನೈಜ ಶಕ್ತಿ ಸಾಮರ್ಥ್ಯಗಳನ್ನು ದೇಶಕ್ಕೆ ಪರಿಚಯಿಸುವ ಮೂಲಕ ಅವರು ಭಾರತೀಯ ಕೃಷಿ ವ್ಯವಸ್ಥೆಗೆ ಹೊಸದೊಂದು ದಾರಿಯನ್ನೇ ನಿರ್ಮಿಸಿದರು.

ಅವರೊಬ್ಬರು ಜಗದ್ವಿಖ್ಯಾತ ಕೃಷಿ ಅರ್ಥಶಾಸ್ತ್ರಜ್ಞರು. ಕೃಷಿ ವಿಜ್ಞಾನಿಗಳು, ಸಸ್ಯವಂಶವಾಹಿ ತಜ್ಞರು. ಸಮರ್ಥ ಆಡಳಿತಗಾರರು, ಇವೆಲ್ಲಕ್ಕಿಂತ ಮಿಗಿಲಾಗಿ ಸಜ್ಜನರು, ಹೃದಯವಂತರು. ಅವರನ್ನು "ಭಾರತದ ಹಸಿರು ಕ್ರಾಂತಿಯ ಪಿತಾಮಹ" ಎಂದು ವಿದ್ವಾಂಸರು ಗುರುತಿಸಿದ್ದಾರೆ. ನೋಬೆಲ್ ಪ್ರಶಸ್ತಿ ಪುರಸ್ಕೃತ ಕೃಷಿ ವಿಜ್ಞಾನಿ ನಾರ್ಮನ್ ಬೊರ್ಲಾಗ್‌ರವರ ಜೊತೆಯಲ್ಲಿ ಸಂಶೋಧನೆ ನಡೆಸಿದ ಹಿರಿಮೆ ಡಾ. ಸ್ವಾಮಿನಾಥನ್‌ರವರಿಗೆ ಸಲ್ಲುತ್ತದೆ. ಆಮೂಲಕ 1960ರಲ್ಲಿ ಭಾರತ ಮತ್ತು ಪಾಕಿಸ್ತಾನದಲ್ಲಿ ಉದ್ಭವಿಸಿದ ಕ್ಷಾಮಸದೃಶ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಿದ ಕೀರ್ತಿಗೆ ಭಾಜನರು ಎಂದು ಶ್ರೀಗಳು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ಅಂತಾರಾಷ್ಟ್ರೀಯ ಅಕ್ಕಿ ಸಂಶೋಧನಾ ಸಂಸ್ಥೆಯ ಮಹಾನಿರ್ದೇಶಕರಾಗಿ ಅವರ ಕಾರ್ಯವೈಖರಿಯು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದುದು. ಅವರ ಕಾರ್ಯದಕ್ಷತೆಯ ಸಂಕೇತವೆಂಬಂತೆ ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮದಲ್ಲಿ ಅವರು ನೀಡಿದ ಕೊಡುಗೆಯಿಂದಾಗಿ ಅವರನ್ನು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ 'ಆರ್ಥಿಕ ಪರಿಸರ ಕ್ಷೇತ್ರದ ಪಿತಾಮಹ' ಎಂದು ಕರೆಯಲಾಯಿತು.


ಡಾ. ಎಂ.ಎಸ್. ಸ್ವಾಮಿನಾಥನ್‌ರವರ ಬಹುಮುಖ ಸಾಧನೆಗಳಲ್ಲಿ ಅವರು ರಾಜ್ಯಸಭೆಯ ಸದಸ್ಯರಾದುದು ಮತ್ತು ಪದ್ಮವಿಭೂಷಣ ಪ್ರಶಸ್ತಿಗೂ ಪಾತ್ರರಾದುದು ಸೇರುತ್ತವೆ. ಡಾ. ಶಾಂತಿಸ್ವರೂಪ್ ಭಟ್ನಾಗರ್ ಪ್ರಶಸ್ತಿ, ರೊಮನ್ ಮ್ಯಾಗ್ಸೇಸ್ ಪ್ರಶಸ್ತಿ ಮೊದಲಾದ ಹಲವಾರು ಪ್ರತಿಷ್ಠಿತ ಪುರಸ್ಕಾರಗಳಿಗೆ ಭಾಜನರಾದ ಬಹುಶ್ರುತರು. ಅವರ ಅಗಲುವಿಕೆಯಿಂದ ಭಾರತದ ಸುಪುತ್ರರೊಬ್ಬರು ಕಣ್ಮರೆಯಾದಂತಿದೆ ಎಂದು ಸ್ಮರಿಸಿದ್ದಾರೆ. ಡಾ. ಸ್ವಾಮಿನಾಥನ್‌ರವರು 8 ಜುಲೈ 2008ರಂದು ಶ್ರೀ ಸುತ್ತೂರು ಕ್ಷೇತ್ರಕ್ಕೆ ಆಗಮಿಸಿದಾಗ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಿರ್ಮಿಸಿದ್ದ ಎಸ್‌ಜಿಎಸ್‌ವೈ ಯೋಜನೆಯ ಬೀಜ ಸಂಸ್ಕರಣ ಘಟಕಗಳ ಉದ್ಘಾಟನೆಯನ್ನು ನೆರವೇರಿಸಿದ್ದರು. ಆ ಸಂದರ್ಭದಲ್ಲಿ ಶ್ರೀಮಠ ಮತ್ತು ಸಂಸ್ಥೆಯ ಸೇವಾಕಾರ್ಯಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು.

ಡಾ.ಸ್ವಾಮಿನಾಥನ್‌ರವರ ಅಗಲುವಿಕೆಗೆ ಶ್ರದ್ಧಾಂಜಲಿ ಸಲ್ಲಿಸುತ್ತ, ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು, ಅವರ ಕುಟುಂಬಸ್ಥರು, ಬಂಧುಮಿತ್ರರು ಹಾಗೂ ಅಭಿಮಾನಿಗಳಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಶ್ರೀಗಳು ಕೋರಿದ್ದಾರೆ.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 97.56 ಅಡಿ	ಇಂದಿನ ಮಟ್ಟ 2,273.33 ಅಡಿ	ಇಂದಿನ ಮಟ್ಟ 2,853.89 ಅಡಿ
ಹಿಂದಿನ ವರ್ಷದ ಮಟ್ಟ 123.86 ಅಡಿ	ಹಿಂದಿನ ವರ್ಷದ ಮಟ್ಟ 2,282.71 ಅಡಿ	ಹಿಂದಿನ ವರ್ಷದ ಮಟ್ಟ 2,856.57 ಅಡಿ
ನಿನ್ನೆಯ ಮಟ್ಟ 97.28 ಅಡಿ	ನಿನ್ನೆಯ ಮಟ್ಟ 2,273.43 ಅಡಿ	ನಿನ್ನೆಯ ಮಟ್ಟ 2,854.08 ಅಡಿ
ಇಂದಿನ ಒಳಹರಿವು 4,835 ಕ್ಯುಸೆಕ್	ಇಂದಿನ ಒಳಹರಿವು 860 ಕ್ಯುಸೆಕ್	ಇಂದಿನ ಒಳಹರಿವು 1,636 ಕ್ಯುಸೆಕ್
ಇಂದಿನ ಹೊರಹರಿವು 1,500 ಕ್ಯುಸೆಕ್	ಇಂದಿನ ಹೊರಹರಿವು 1,500 ಕ್ಯುಸೆಕ್	ಇಂದಿನ ಹೊರಹರಿವು 2,200 ಕ್ಯುಸೆಕ್

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.9.2023 ಶನಿವಾರ, ಮಳೆ ನಕ್ಷತ್ರ: ಹಸ್ತ, 28.09.2023 ರಿಂದ 10.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು** : ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಜಿಎಸ್‌ಎಸ್ ಪ್ರಾಜೆಕ್ಟ್ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ಅಧ್ಯಕ್ಷ ಶ್ರೀಹರಿ ದ್ವಾರಕಾನಾಥ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಅಭಿವೃದ್ಧಿ ಆಯುಕ್ತರು (ಕೈಮಗ್ಗ), ಜವಳಿ ಮಂತ್ರಾಲಯ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್** : ವಿಶೇಷ ಕೈಮಗ್ಗ ಮೇಳ, ಸಂಸ್ಕೃತಿ–ಹತ್‌ಕರ್ಗ್–2023, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ರಿಂಗ್ ರೋಡ್, ಬೆಳಗ್ಗೆ 10 ರಿಂದ.

■ **ಸುಯೋಗ್ ಆಸ್ಪತ್ರೆ:** ಮೂತ್ರಪಿಂಡ ರೋಗ ತಪಾಸಣಾ ಶಿಬಿರ, ಮೂತ್ರಪಿಂಡ ತಜ್ಞ ಡಾ. ಅರುಣ್ ಕೆ.ಜಿ. ಅವರ ನೇತೃತ್ವ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆಯಿಂದ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು** : ಡಾ. ಎಸ್.ಆರ್. ರಂಗನಾಥನ್ ಅವರ ಜನ್ಮದಿನಾಚರಣೆ ಅಂಗವಾಗಿ ಸ್ನೇಹಸಿಂಚನ ಸಮಾರಂಭ, ಕಿರಿಯರಿಗೆ ಹಿರಿಯ ವಿದ್ಯಾರ್ಥಿನಿಯರ ಒಲುಮೆ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಪುಷ್ಪಾರ್ಚನೆ : ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಶಾಲಿನಿ ಅರಸ್, ಪುಸ್ತಕ ಪ್ರದರ್ಶನ ಉದ್ಘಾಟನೆ : ಮೈಸೂರು ವಿವಿ ಗಣಕ ವಿಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ. ಡಿ.ಎಸ್.ಗುರು, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಪ್ರಭಾರ ಪ್ರಾಂಶುಪಾಲ ಡಾ.ಎನ್.ಜಿ. ಲೋಕೇಶ್, ಉಪ ಪ್ರಾಂಶುಪಾಲ ಡಾ. ಜಿ. ಪ್ರಸಾದಮೂರ್ತಿ, ಗ್ರಂಥಪಾಲಕರಾದ ಶ್ರೀಮತಿ ಬಿ.ಆರ್. ಶುಭಾ ಅರಸ್, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ** : ಗ್ರಾಮ ಸ್ವರಾಜ್ಯ ಕರ್ನಾಟಕ ಅಭಿಯಾನ ಉದ್ಘಾಟನೆ, ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ : ಒಕ್ಕೂಟದ ರಾಜ್ಯಾಧ್ಯಕ್ಷ ಸತೀಶ್ ಕಾಡಶೆಟ್ಟಿಹಳ್ಳಿ, ಮುಖ್ಯ ಅತಿಥಿಗಳು : ಒಕ್ಕೂಟದ ರಾಜ್ಯ ಉಪಾಧ್ಯಕ್ಷರಾದ ಶ್ರೀಮತಿ ಬೃಂದಾ ಕೃಷ್ಣೇಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಎ.ಎಂ. ಛಲಪತಿ, ರಾಜ್ಯ ಸಹ ಕಾರ್ಯದರ್ಶಿ ನಿಶಾಂತ್ ಚಂದಗಾಲು, ಅಧ್ಯಕ್ಷತೆ : ಒಕ್ಕೂಟದ ಜಿಲ್ಲಾಧ್ಯಕ್ಷ ನಾಗರಾಜು ಯದುನಾಡು, ಸ್ಥಳ: ಟೌನ್‌ಹಾಲ್, ದೊಡ್ಡಗಡಿಯಾರದ ಹತ್ತಿರ, ಬೆಳಗ್ಗೆ 10.30ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** 62ನೇ ಪಾರಂಪರಿಕ ಸಂಗೀತೋತ್ಸವ, ಬೆಳಗ್ಗೆ 8 ಗಂಟೆಗೆ ಶ್ರೀ ಗಣಪತಿ ಮತ್ತು ಪವಮಾನ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಶ್ರೀ ಚಲ್ಲಕೆರೆ ಸಹೋದರರಿಂದ, ಸ್ಥಳ: 8ನೇ ಕ್ರಾಸ್, ವಿವಿ.ಮೊಹಲ್ಲಾ.

■ **ಆಯಾಮ, ಅಕಾಡೆಮಿ ಆಫ್ ಫೈನ್ ಆರ್ಟ್ಸ್** : ಆಯಾಮೋತ್ಸವ ನೃತ್ಯ ನಾಟಕಗಳ ಉತ್ಸವ, ಬೆಳಗ್ಗೆ 9.30ಕ್ಕೆ ವಿಚಾರ ಸಂಕಿರಣ, ವಿಷಯ : ನಾಟ್ಯ ವಿದ್ಯಾರ್ಥಿಗಳು ಮತ್ತು ಶಾಸ್ತ್ರದ ಅಧ್ಯಯನ, ಅಧ್ಯಕ್ಷತೆ: ಹಿರಿಯ ರಂಗಕರ್ಮಿ ಪ್ರೊ ಹೆಚ್.ಎಸ್. ಉಮೇಶ್, ವಿಷಯ ಮಂಡನೆ : ಹಿರಿಯ ನೃತ್ಯ ಗುರು ಡಾ. ತುಳಸಿ ರಾಮಚಂದ್ರ, ಡಾ. ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ಉಪಕುಲಪತಿ ಪ್ರೊ. ನಾಗೇಶ್ ವಿ ಬೆಟ್ಟಕೋಟೆ, ಪ್ರತಿಕ್ರಿಯೆ : ವಿದ್ವಾನ್ ಬದರಿ ದಿವ್ಯಭೂಷಣ್, ಚಲನಚಿತ್ರ ನಟ ಸಂಪತ್ ಕುಮಾರ್, ಸಂಜೆ 6ಕ್ಕೆ ಉಪಸ್ಥಿತರು : ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿಗಳು, ನಿವೃತ್ತ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಪ್ರಭಾಕರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ಮೈಸೂರಿನ ಕಲಾರ್ಪಣಂ ಗ್ರೂಪ್ ಆಫ್ ಡ್ಯಾನ್ಸ್ ಕಲಾವಿದರಿಂದ 'ಅಭಿಗಮ್ಯ–ತತ್ವಂ ಪ್ರತಿ' ಪರಿಕಲ್ಪನೆ ಮತ್ತು ನಿರ್ದೇಶನ : ವಿದುಷಿ ಅಪೂರ್ವ ಜಿ. ಮೂರ್ತಿ, ಸ್ಥಳ: ಕಲಾಮಂದಿರ.

■ **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಮಹಿಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ** : ಕಪ್ಪಡಿ ಕ್ಷೇತ್ರ ಮತ್ತು ಮಳವಳ್ಳಿ ಮಠಗಳ ಸ್ವಾಮೀಜಿಯವರಾದ ಸರದಾರ್ ಎಂ.ಎಲ್. ರಾಜೇ ಅರಸ್ ಸ್ಮರಣಾರ್ಥ ವಚನಾಮೃತ, ಹೊನ್ನನಾಯಕನಹಳ್ಳಿ ಮಠಾಧೀಶರಾದ ಶ್ರೀ ಸಿದ್ದಲಿಂಗರಾಜೇ ಅರಸ್ ಅವರಿಂದ ಜಯಂತಿ ಮಹೋತ್ಸವ ಉದ್ಘಾಟನೆ, ಅಧ್ಯಕ್ಷತೆ: ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸ್, ಜಾನಪದ ಕಲಾವಿದರಾದ ಬಸವರಾಜ್ ಜೆ. ಭಂಟನೂರು ಮತ್ತು ಸಂಗಡಿಗರಿಂದ ತತ್ವಪದ ಮತ್ತು ವಚನ ಸಂಗೀತ ಕಾರ್ಯಕ್ರಮ, ಸ್ಥಳ: ಆಳ್ವಾರ್ ಕಲಾ ಭವನ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ–ಅನುಶೋಧ, ಪ್ರಾಯೋಜಿತ ಕಾರ್ಯಕ್ರಮ, ಪ್ರಸ್ತುತಿ– ಡಾ. ಪ್ರಸನ್ನ ವಾಸು, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ–ಡಾ. ಮೈಸೂರ್ ಉಮೇಶ್, 7.15 ಭಾವಗೀತೆಗಳು–ಡಾ. ರೋಹಿಣಿ ಮೋಹನ್, 8.30 ವಿಶಿಷ್ಟ ವ್ಯಕ್ತಿ–ವಿಶೇಷ ಯತ್ನ, ಬಾನುಲಿ ಸರಣಿ–ಆರೋಗ್ಯ ಭಾರತೀಯ, ಡಾ.ಎ.ಎಸ್. ಚಂದ್ರಶೇಖರ್ ಅವರೊಡನೆ ಸಂವಾದ– ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 10.00 ಬಾಲಾಜಿ ಶಂಕರ್ – ಹಾಡುಗಾರಿಕೆ, 11.00 "ಸ್ವರಾಜ್"– ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರಗಾಥೆ

ಮಧ್ಯಾಹ್ನ: 12.30 ದೇವರನಾಮ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 12.45 ಜನಪದಗೀತೆ, 1.20 ಭಾವಗೀತೆ–ಎನ್. ಜ್ಯೋತಿ, ಸಿ. ವಿಶ್ವನಾಥ್, 1.30ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ–ಶ್ರೀರಂಗರಾವ್ ಸ್ಮಾರಕ ವಿಕಲಚೇತನರ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ "ದೂರದ ಬೆಟ್ಟ" ಮೂಲ ಕಾದಂಬರಿ– ತ್ರಿವೇಣಿ, ಬಾನುಲಿ ನಾಟಕ ರೂಪಾಂತರ– ಪ್ರೊ.ಎಸ್.ಎನ್. ಶಂಕರ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ, 4.30ನೆನಪಿನಂಗಳ–ಕನ್ನಡ ಸಾಹಿತ್ಯ ಲೋಕದ ದಿಗ್ಗಜರಾದ ತ.ಸು.ಶ್ಯಾಮರಾಯರಿಂದ ನೆನಪಿನ ಲಹರಿ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ–ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಪರಾಗ–ಬೇಸಾಯದ ಬದುಕು ಸರಾಗ– ಬಾನುಲಿ ಸರಣಿ, 8.00 ಯುವವಾಣಿ, 9.30 ಭಾರತೀಯ ಕಾನೂನುಗಳ ಮರುವೀಕ್ಷಣೆ–ಹಿರಿಯ ವಕೀಲರಾದ ಸಿ.ವಿ. ಕೇಶವಮೂರ್ತಿ ಅವರಿಂದ ಭಾಷಣ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಅರಣ್ಯಕುಮಾರ ಮುನ್ನೇನಿ–ಯಶರಾಜ್ ವಾದನ

ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪರ ನೇತೃತ್ವದಲ್ಲಿ

ದಸರಾ ಗಜಪಡೆ ಪರಿವಾರಕ್ಕೆ ಉಪಹಾರ ಸತ್ಕಾರ





ಮೈಸೂರು,ಸೆ.29(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧ ಕ್ಯಾಂಪ್‌ಗಳಿಂದ ಆಗಮಿಸಿ, ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ಗಜಪಡೆಯ ಮಾವುತರು, ಕಾವಾಡಿಗಳು ಹಾಗೂ ಅವರ ಪರಿವಾರಕ್ಕೆ ಸಂಪ್ರದಾಯದಂತೆ ಶುಕ್ರವಾರ ಉಪಹಾರ ಕೂಟ ಆಯೋಜಿಸಲಾಗಿತ್ತು.

ಪ್ರತಿವರ್ಷ ಅರಮನೆ ಮಂಡಳಿ ವತಿಯಿಂದ ಉಪಾಹಾರ ಕೂಟ ಏರ್ಪಡಿಸುವ ಸಂಪ್ರದಾಯವಿದ್ದು, ಅದರಂತೆ ಇಂದು ಬೆಳಗ್ಗೆ ಅರಮನೆ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉಪಾಹಾರ ಬಡಿಸುವ ಮೂಲಕ ಚಾಲನೆ ನೀಡಿದರು.

ಮಾವುತರು, ಕಾವಾಡಿಗಳು ಹಾಗೂ ಪರವಾರದವರಿಗೆ ಹೋಳಿಗೆ, ತುಪ್ಪ, ತಟ್ಟೆ ಇಡ್ಲಿ, ಸಾಂಬಾರ್, ಚಟ್ನಿ, ಉದ್ದಿನವಡೆ, ಮಸಾಲೆ ದೋಸೆ, ಸಾಗು, ಟೊಮೊಟೊ ಬಾತ್, ಕೇಸರಿಬಾತ್ ಬಡಿಸಲಾಯಿತು. ಅಲ್ಲದೆ, ಮಾವುತರೊಂದಿಗೆ ಸಚಿವರು, ಅಧಿಕಾರಿಗಳೂ ಉಪಹಾರ ಸೇವಿಸಿದರು.

ಅಗತ್ಯ ಸೌಲಭ್ಯ ಕಲ್ಪಿಸಲಾಗಿದೆ: ಉಪಹಾರ ಕೂಟಕ್ಕೆ ಚಾಲನೆ ನೀಡಿದ ಬಳಿಕ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಗಜಪಡೆಯೊಂದಿಗೆ ಮೈಸೂರಿಗೆ ಬಂದಿರುವ ಮಾವುತರು ಮತ್ತು ಕಾವಾಡಿಗರಿಗೆ ಪ್ರತೀ ವರ್ಷದಂತೆ ಸಾಂಪ್ರದಾಯಿಕವಾಗಿ ಉಪಹಾರ ಕೂಟ ಏರ್ಪಡಿಸಲಾಗಿದೆ. ಈ ಬಾರಿ 250ಕ್ಕೂ ಹೆಚ್ಚು ಮಂದಿಗೆ ಉಪಹಾರದ ವ್ಯವಸ್ಥೆ ಮಾಡಲಾಗಿದೆ. ದಸರಾ ಮಹೋತ್ಸವದ ಸಂದರ್ಭದಲ್ಲಿ ಕಾಡನ್ನು ಬಿಟ್ಟು ನಗರಕ್ಕೆ ಬಂದಿರುವ ಮಾವುತರು ಮತ್ತು ಕಾವಾಡಿಗರ ಕುಟುಂಬಕ್ಕೆ ಅಗತ್ಯ ಸೌಲಭ್ಯ ಕಲ್ಪಿಸಲಾಗಿದೆ. ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅಡ್ಡಿ ಆಗದಂತೆ ನೋಡಿಕೊಳ್ಳಲು ತಾತ್ಕಾಲಿಕ ಶಾಲೆ ತೆರೆದು, ಶಿಕ್ಷಕರನ್ನು ನೇಮಿಸಲಾಗಿದೆ. ಅವರ ಆರೋಗ್ಯದ ದೃಷ್ಟಿಯಿಂದಲೂ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ ಎಂದರು.

ಆರೋಗ್ಯ ತಪಾಸಣಾ ಶಿಬಿರ

ಅರಮನೆ ಮಂಡಳಿ ಹಾಗೂ ಅಪೋಲೋ ಬಿಜಿಎಸ್ ಆಸ್ಪತ್ರೆ ಸಹಯೋಗದಲ್ಲಿ ಮಾವುತರು ಮತ್ತು ಕಾವಾಡಿಗರ ಕುಟುಂಬದವರಿಗೆ ಆಯೋಜಿಸಿದ್ದ ಉಚಿತ ತಪಾಸಣೆ ಶಿಬಿರಕ್ಕೆ ಸಚಿವರು ಚಾಲನೆ ನೀಡಿದರು. ಮಾವುತರು ತಪಾಸಣೆ ಮಾಡಿಸಿಕೊಂಡು ಆರೋಗ್ಯವಾಗಿರುವಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು. ಆಸ್ಪತ್ರೆಯ ನುರಿತ ವೈದ್ಯರು, ಸಿಬ್ಬಂದಿ ದಿನವಿಡೀ ಮಾವುತರು, ಕಾವಾಡಿಗಳು, ಅವರ ಮಕ್ಕಳಿಗೆ ನಾನಾ ರೀತಿಯ ತಪಾಸಣೆ ಮಾಡಿ, ಅಗತ್ಯವಿರುವವರಿಗೆ ಚಿಕಿತ್ಸೆ ನೀಡಲಾಯಿತು.

ಕುಶಲೋಪರಿ ವಿಚಾರಿಸಿದ ಸಚಿವರು: ಉಪಹಾರ ಸೇವಿಸಿದ ಬಳಿಕ ಸಚಿವರು, ಗಜಪಡೆಯ ಮಾವುತರು ಹಾಗೂ ಕಾವಾಡಿಗರ ಯೋಗಕ್ಷೇಮ ವಿಚಾರಿಸಿದರು. ಅರಣ್ಯ ಸಂಪತ್ತೇ ನಾಡಿನ ಸಂಪತ್ತಾಗಿದೆ. ಕಾಡಿನ ಸಂರಕ್ಷಕರಾದ ನೀವು, ಅರಣ್ಯ ಸಂಪತ್ತಿನ ಭಾಗವೇ ಆಗಿದ್ದೀರಿ. ನಿಮಗೆ ಅಗತ್ಯ ಮೂಲಭೂತ ಸೌಕರ್ಯವನ್ನು ಸರ್ಕಾರದಿಂದ ಒದಗಿಸಿಕೊಡಲಾಗುವುದು ಎಂದು ಭರವಸೆ ನೀಡಿದರು.

ತಾತ್ಕಾಲಿಕ ಶಾಲೆ, ಗ್ರಂಥಾಲಯಕ್ಕೆ ಚಾಲನೆ: ಮಾವುತರು ಕಾವಾಡಿಗಳ ಮಕ್ಕಳ ಶಿಕ್ಷಣಕ್ಕಾಗಿ ಜಿಲ್ಲಾಡಳಿತ, ಜಿ.ಪಂ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಅರಮನೆ ಆವರಣದಲ್ಲಿ ಆರಂಭಿಸಿರುವ ತಾತ್ಕಾಲಿಕ ಶಾಲೆ ಹಾಗೂ ಗ್ರಂಥಾಲಯವನ್ನು, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಇದೇ ವೇಳೆ ಉದ್ಘಾಟಿಸಿದರು. ಬಳಿಕ ಮಕ್ಕಳು ವಿವಿಧ ವೇಷ ಭೂಷಣ ತೊಟ್ಟು ನೃತ್ಯ ಪ್ರದರ್ಶಿಸಿ ನೆರೆದವರ ಗಮನ ಸೆಳೆದರು. 'ಕಾಂತಾರ' ಚಿತ್ರದ ವರಾಹ ರೂಪಂ, 'ಜೋಗಿ' ಚಿತ್ರದ ಏಳು ಮಲೆ ಮೇಲೇರಿ ಕುಂತಾ ನೋಡು ಮಾದೇವ ಹಾಡಿನ ಜೊತೆಗೆ ತಮ್ಮ ಹಾಡಿಯ ಸಂಪ್ರದಾಯ ನೃತ್ಯ ಪ್ರದರ್ಶಿಸಿದರು. ಹಾಡಿ ಮಕ್ಕಳ ನೃತ್ಯಕ್ಕೆ ಅತಿಥಿಗಳು ಮೂಕವಿಸ್ಮಿತರಾದರು.

ಕಾರ್ಯಕ್ರಮಕ್ಕೂ ಮುನ್ನ ಹಸಿರು ಕ್ರಾಂತಿಯ ಪಿತಾಮಹ, ಕೃಷಿ ವಿಜ್ಞಾನಿ ಎಂ.ಎಸ್.ಸ್ವಾಮಿನಾಥನ್ ಅವರಿಗೆ ಮೌನಾಚರಣೆ ಮೂಲಕ ಗೌರವ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಸದ ಪ್ರತಾಪ ಸಿಂಹ, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿ.ಪಂ.ಸಿಇಒ ಕೆ.ಎಂ.ಗಾಯಿತ್ರಿ, ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಸಿಸಿಎಫ್ ಡಾ. ಮಾಲತಿ ಪ್ರಿಯಾ, ಡಿಸಿಎಫ್ ಸೌರಭ್ ಕುಮಾರ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಅರಮನೆ ಭದ್ರತಾ ಪಡೆಯ ಎಸಿಪಿ ಚಂದ್ರಶೇಖರ್ ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ನೆಲ, ಜಲ ವಿಷಯದಲ್ಲಿ ರಾಜ್ಯ ಸರ್ಕಾರ ರಾಜೀ ಮಾಡಿಕೊಳ್ಳದು

ಮೈಸೂರು ಉಸ್ತುವಾರಿ ಸಚಿವ ಡಾ. ಮಹದೇವಪ್ಪ ಸ್ಪಷ್ಟನೆ

ಮೈಸೂರು, ಸೆ.29(ಎಂಟಿವೈ)– ನೂರು ವರ್ಷಗಳ ಅವಧಿಯಲ್ಲಿ ಕಂಡು ಕೇಳರಿಯದ ಬರಗಾಲ ಈ ಬಾರಿ ತಲೆದೋರಿದ್ದು, ರಾಜ್ಯ ಸರ್ಕಾರ ನೆಲ, ಜಲ, ಭಾಷೆಯ ಸಂರಕ್ಷಣೆ ವಿಚಾರದಲ್ಲಿ ರಾಜೀ ಮಾಡಿಕೊಳ್ಳುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಅರಮನೆ ಆವರಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಬಾರಿ ತೀವ್ರ ಬರಗಾಲ ಆವರಿಸಿದೆ. ಇದರಿಂದ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕುಸಿದಿದೆ. ಆದರೆ ಕಾವೇರಿ ನೀರು ನಿರ್ವಹಣಾ ಸಮಿತಿ ವಾಸ್ತವ ಸ್ಥಿತಿ ಅರಿಯದೇ ತಮಿಳುನಾಡಿಗೆ ನೀರು ಬಿಡುವಂತೆ ಆದೇಶಿಸುವ ಮೂಲಕ ರಾಜ್ಯಕ್ಕೆ ಅನ್ಯಾಯ ಮಾಡಿದೆ. ಸಂಕಷ್ಟ ಸೂತ್ರ ಜಾರಿಯಾಗದಿರುವುದರಿಂದ ಸಮಸ್ಯೆ ಉಲ್ಬಣವಾಗಿದೆ ಎಂದರು.

ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಸರ್ಕಾರ ಸಮರ್ಥವಾಗಿ ವಾದ ಮಂಡನೆ ಮಾಡಿ, ವಸ್ತುಸ್ಥಿತಿ ಮನವರಿಕೆ ಮಾಡಿಕೊಡುವ ಕೆಲಸ ಮಾಡಿದೆ. ಆದರೂ ರಾಜ್ಯಕ್ಕೆ ಹಿನ್ನಡೆಯಾಗುತ್ತಿದೆ. ಈ ಬಗ್ಗೆ ಸರ್ವ ಪಕ್ಷಗಳ ಸಭೆಯಲ್ಲೂ ಮನವರಿಕೆ ಮಾಡಿಕೊಡಲಾಗಿದೆ. ಈ ವಿಚಾರದಲ್ಲಿ ಯಾರೂ ರಾಜಕೀಯ ಮಾಡಬಾರದು ಎಂದು ಅಭಿಪ್ರಾಯಪಟ್ಟರು.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವನ್ನು ಸುಪ್ರೀಂಕೋರ್ಟ್ ರಚನೆ ಮಾಡಿದೆ. ಹಾಗಾಗಿ ರಾಜ್ಯ ಸರ್ಕಾರ ಸದ್ಯದ ಪರಿಸ್ಥಿತಿಯಲ್ಲಿ ಪ್ರಾಧಿಕಾರದ ಆದೇಶ ಪಾಲನೆ ಮಾಡುತ್ತಿದೆ. ಸಿಎಂ ಸಿದ್ದರಾಮಯ್ಯ ಕೂಡ ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸುತ್ತಿದ್ದು ಸೂಕ್ತ ತೀರ್ಮಾನ ಕೈಗೊಳ್ಳಲಾಗುತ್ತದೆ. ಸಂಕಷ್ಟ ಸೂತ್ರ ಇಲ್ಲದಿರುವುದೇ ಸಮಸ್ಯೆಗೆ ಕಾರಣವಾಗಿದೆ. ಪ್ರಧಾನಮಂತ್ರಿಗಳು ಒಕ್ಕೂಟ ವ್ಯವಸ್ಥೆಯ ಮುಖ್ಯಸ್ಥರಾಗಿರುವುದರಿಂದ ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಮಧ್ಯೆ ಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದೇ ನಿರಂತರ ಚಳವಳಿಗಳ ಮೂಲಕ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೋರಾಟ, ಚಳವಳಿಗಳಿಗೆ ತನ್ನದೇ ಆದ ಮಹತ್ವವಿದೆ. ಪ್ರತಿಭಟನೆ, ಬಂದ್ ಮಾಡಲು ಮುಕ್ತ ಅವಕಾಶಗಳಿವೆ. ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಶಾಂತಿಯುತ ಬಂದ್ ಆಚರಣೆಯಾಗಿದೆ. ಸರ್ಕಾರ ಇದರಲ್ಲಿ ಮಧ್ಯ ಪ್ರವೇಶ ಮಾಡುವುದಿಲ್ಲ ಎಂದರು.

ಪಠ್ಯಕ್ರಮ ರಚನೆ: ದೇಶದ ಚರಿತ್ರೆ, ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆಗಳು, ವೈಚಾರಿಕತೆ, ಸಂವಿಧಾನ, ಪ್ರಜಾಪ್ರಭುತ್ವದ ಆಶಯಗಳನ್ನೊಳಗೊಂಡ ಪಠ್ಯಕ್ರಮ ಪರಿಚಯಿಸಬೇಕೆಂಬುದು ದೇಶದ ಕೂಗು. ಈ ನಿಟ್ಟಿನಲ್ಲಿ ಯುವಜನರನ್ನು ತಯಾರಿಸುವ ಕೆಲಸ ಮಾಡುತ್ತೇವೆ.

ಕಾವೇರಿ ಹೋರಾಟಕ್ಕೆ ಆರ್ಯವೈಶ್ಯ ಸಮುದಾಯದ ಬೆಂಬಲ



ಮೈಸೂರು, ಸೆ.29(ಎಸ್‌ಬಿಡಿ)– ತಮಿಳುನಾಡಿಗೆ ನೀರು ಹರಿಸಬಾರದು ಎಂದು ಒತ್ತಾಯಿಸಿ ಆರ್ಯವೈಶ್ಯ ಸಮುದಾಯದವರು ಮೈಸೂರಿನಲ್ಲಿ ಮೌನ ಪ್ರತಿಭಟನೆ ನಡೆಸಿದರು.

ಆರ್ಯವೈಶ್ಯ ರಾಜಕೀಯ ಸಮಿತಿ ನೇತೃತ್ವದಲ್ಲಿ ಆರ್ಯ ವೈಶ್ಯ ಜನಾಂಗದವರು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಗಾಂಧಿವೃತ್ತದವರೆಗೆ ಮೇಣದ ಬತ್ತಿಯೊಂದಿಗೆ ಮೆರವಣಿಗೆ ನಡೆಸಲು ನಿರ್ಧರಿಸಿದ್ದರು. ಆದರೆ ಸಂಜೆ 6 ಗಂಟೆ ನಂತರ ಪ್ರತಿಭಟನಾ ಮೆರವಣಿಗೆಗೆ ಪೊಲೀಸರ ಅನುಮತಿ ದೊರಕದ ಹಿನ್ನೆಲೆಯಲ್ಲಿ ದೇವಸ್ಥಾನದ ಬಳಿ ಮೌನ ಪ್ರತಿಭಟನೆ ನಡೆಸುವ ಮೂಲಕ ಕಾವೇರಿ ಹೋರಾಟವನ್ನು ಬೆಂಬಲಿಸಿದರು.

ಕಾವೇರಿ ಜಲ ನಮ್ಮದು, ನೀರು ಕೊಟ್ಟರೆ ಎಚ್ಚರ, ಕಾವೇರಿ ಕನ್ನಡಿಗರ ಜೀವನಾಡಿ ಎಂಬಿತ್ಯಾದಿ ಘೋಷಣಾ ಫಲಕಗಳನ್ನು ಪ್ರದರ್ಶಿಸಿ, ತಮಿಳುನಾಡಿಗೆ ನೀರು ಹರಿಸದಂತೆ ಮನವಿ ಮಾಡಿದರು. ಕನ್ನಿಕಾಪರಮೇಶ್ವರಿ ದೇವಸ್ಥಾನದ ಅಧ್ಯಕ್ಷ ಎಸ್.ಕೆ.ದಿನೇಶ್, ಆರ್ಯವೈಶ್ಯ ರಾಜಕೀಯ ಸಮಿತಿ ಅಧ್ಯಕ್ಷ ಕೆ.ಆರ್. ನಾರಾಯಣಮೂರ್ತಿ, ಕಾರ್ಯದರ್ಶಿಗಳಾದ ಹೆಚ್.ಕೆ.ಗುಂಡು ವೆಂಕಟೇಶ್ ಕುಮಾರ್, ಜೆ.ಉಮಾಶಂಕರ್ ಸೇರಿದಂತೆ 20ಕ್ಕೂ ಹೆಚ್ಚು ಸಂಘ ಸಂಸ್ಥೆಗಳ ಪ್ರತಿನಿಧಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಮಗೆ ಮಾತ್ರವಲ್ಲ ಅನ್ಯರಿಗೂ ಸಂತೋಷ ತರುವಂತಹ ಕಾರ್ಯ ಮಾಡಬೇಕು

ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥರ ಕಿವಿಮಾತು



ಮೈಸೂರು, ಸೆ.29(ಎಸ್‌ಪಿಎನ್)– ಮಾನವ ಸ್ವಭಾವತಃ ಸಂಘ ಜೀವಿ. ನಾವು ಒಬ್ಬರೇ ಜೀವಿಸುವುದು ಕಷ್ಟ ಹೀಗಿರುವಾಗ ಎಲ್ಲರೂ ಸುಖ– ಸಂತೋಷಕ್ಕಾಗಿ ಹಂಬಲಿಸುತ್ತೇವೆ ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳಂವರು ಅಭಿಪ್ರಾಯಪಟ್ಟರು.

ಮೈಸೂರಿನ ತಮ್ಮ 36 ನೇ ಚಾತುರ್ಮಾಸ್ಯ ವ್ರತದ ಕೊನೆಯ ದಿನ ಶುಕ್ರವಾರದಂದು ಮೈಸೂರಿನ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ಲಯನ್ಸ್ ಕ್ಲಬ್, ರೋಟರಿ ಕ್ಲಬ್, ರೋಟರಿ ಇನ್ನರ್ ವೀಲ್ ಕ್ಲಬ್‌ಗಳ ಆಶ್ರಯದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣೆ ಶಿಬಿರ ಮತ್ತು ವಿವಿಧ ಸವಲತ್ತು ವಿತರಣೆ ಮಾಡಿ, ಖೈದಿಗಳಿಗೆ ರಾಮ ಮಂತ್ರ ಬೋಧಿಸಿ ಸಂದೇಶ ನೀಡಿದರು.

ಆದರೆ ಕೆಲವು ಬಾರಿ ವೈಯಕ್ತಿಕ ಜೀವನದ ಸುಖ–ಸಂತೋಷಕ್ಕಾಗಿ ಅನ್ಯರಿಗೆ ಕಷ್ಟ ಕೊಡುತ್ತೇವೆ. ಇದಕ್ಕಾಗಿ ಕೆಟ್ಟ ಕೆಲಸಗಳಿಗೂ ಮುಂದಾಗುತ್ತೇವೆ. ಇದರಿಂದಾಗಿ ಸಮಾಜದಲ್ಲಿ ಅಶಾಂತಿ, ಅಪರಾಧ ಪರಿಸ್ಥಿತಿ ಉಂಟಾಗುತ್ತವೆ. ಆದ್ದರಿಂದ ಅನ್ಯರಿಗೆ ದುಃಖವಾದರೂ ಪರವಾಗಿಲ್ಲ ನಮ್ಮ ಸುಖ ಸಂತೋಷ ಮುಖ್ಯ ಎಂಬ ಮನಸ್ಥಿತಿಯಿಂದ ಹೊರ ಬಂದು ನಮ್ಮ ಸಂತೋಷ ಅನ್ಯರ ಸಂತೋಷಕ್ಕೂ ಕಾರಣವಾಗುವ ಸತ್ಕಾರ್ಯಗಳನ್ನು ಮಾಡಲು ಪ್ರಯತ್ನಿಸಬೇಕು ಎಂದರು.

ಒಂದು ವೇಳೆ ಇನ್ನೊಬ್ಬರಿಗೆ ನಮ್ಮಿಂದ ಒಳ್ಳೆಯದು ಮಾಡಲು ಆಗದಿದ್ದರೂ ಕೆಡು ಬಯಸಬಾರದು. ಅದನ್ನು ನಾವು ಧರ್ಮ ಎನ್ನುತ್ತೇವೆ. ಇದನ್ನೇ ಸನಾತನ ಧರ್ಮವೂ ಸಾರುತ್ತದೆ. ಬೇಡನಾಗಿದ್ದ ವಾಲ್ಮೀಕಿ, ಬದುಕಿನ ಘಟನೆಯ ತಿರುವಿನಿಂದ ರಾಮಮಂತ್ರ ಜಪಿಸುತ್ತ, ರಾಮಾಯಣವನ್ನೇ ರಚಿಸಿದರು. ಇಂದು ಲೋಕವೆಲ್ಲ ಪೂಜಿಸುವ ರೀತಿ ಮಹರ್ಷಿಯಾದರು. ಇದು ನಮಗೆ ಮಾದರಿಯಾಗಬೇಕು ಎಂದು ತಿಳಿಸಿದರು.

ನಿತ್ಯ ಜೀವನದಲ್ಲಿ ರಾಮನಾಮ ಸ್ಮರಣೆ ಮಾಡಿದರೆ ಜೀವನ ಪಾವನವಾಗುತ್ತದೆ. ತಿಳಿದೋ, ತಿಳಿಯದೆಯೋ ನಮ್ಮಿಂದ ಅಪರಾಧಗಳು ಸಂಭವಿಸುತ್ತವೆ. ನಾಗರಿಕ ಸಮಾಜದ ನಿಯಮಾನುಸಾರ ಶಿಕ್ಷೆ ಅನುಭವಿಸಬೇಕಾಗುತ್ತದೆ. ಆದರೆ, ಶಿಕ್ಷೆ ಅನುಭವಿಸಿ ಹೊರಗೆ ಬರುವಾಗ ನಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಮಾಡಿದ ತಪ್ಪಿಗೆ ಪಶ್ಚಾತ್ತಾಪಪಟ್ಟಾಗ ಪರಿಶುದ್ಧರಾಗಲು ಸಾಧ್ಯವಿದೆ. ಮುಂದೆ ಇಂತಹ ಅಪರಾಧಗಳನ್ನು ನಡೆಸದೇ ಒಳ್ಳೆಯ ನಾಗರಿಕರಾಗಿ ಬದುಕುವ ಮೂಲಕ ಅಪರಾಧ ಮುಕ್ತ ಸಮಾಜ ನಿರ್ಮಿಸಲು ಶ್ರಮಿಸೋಣ ಎಂದು ಕಿವಿಮಾತು ಹೇಳಿದರು. ಈ ವೇಳೆ ಜಿಲ್ಲಾ ಕೇಂದ್ರ ಕಾರಾಗೃಹ ಅಧೀಕ್ಷಕ ಪಿ.ಎಸ್.ರಮೇಶ್, ಲಯನ್ಸ್ ಮತ್ತು ರೋಟರಿ ಇನ್ನರ್ ವ್ಹೀಲ್ ಕ್ಲಬ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪೇಜಾವರ ಶ್ರೀಗಳ ಸೀಮೋಲ್ಲಂಘನ



ಮೈಸೂರು, ಸೆ.29– 36ನೇ ಚಾತುರ್ಮಾಸ್ಯ ವ್ರತವನ್ನು ಸಂಪನ್ನಗೊಳಿಸಿದ ಶ್ರೀ ಪೇಜಾವರ ಮಠದ ಶ್ರೀವಿಶ್ವ ಪ್ರಸನ್ನತೀರ್ಥ ಶ್ರೀಪಾದರಿಗೆ ಶುಕ್ರವಾರ ಮಧ್ಯಾಹ್ನ ಮೈಸೂರಿನಲ್ಲಿ ಜನತೆ ಭಾವುಕರಾಗಿ ಬೀಳ್ಕೊಟ್ಟರು. ಬಳಿಕ ಸಂಜೆ ನಂಜನಗೂಡಿಗೆ ತೆರಳಿ ಕಪಿಲಾ ನದಿತೀರದಲ್ಲಿ ನದಿಗೆ ಹಾಲು ಅರಿಸಿನ– ಕುಂಕುಮ, ಪುಷ್ಪ ಸಹಿತ ಬಾಗಿನ ಅರ್ಪಿಸಿ, ಮಂಗಳಾರತಿ ಮಾಡಿದರು.

ನಂತರ ಅಲಂಕೃತ ತೆಪ್ಪದಲ್ಲಿ ಕುಳಿತು ನದಿಯ ಸೀಮೋಲ್ಲಂಘನ ಮಾಡಿ ವಿದಿ–ವಿಧಾನ ಪೂರೈಸಿದರು. ನಂಜನಗೂಡು ಶ್ರೀರಾಘವೇಂದ್ರ ಮಠಕ್ಕೂ ತೆರಳಿ ಗುರುರಾಯರ ಮೃತ್ತಿಕಾ ವೃಂದಾವನ ದರ್ಶನ ಪಡೆದರು. ಇದರೊಂದಿಗೆ ಶ್ರೀಗಳ 2023ರ ಚಾತುರ್ಮಾಸ್ಯ ವ್ರತ ಅಧಿಕೃತವಾಗಿ ಸಂಪನ್ನಗೊಂಡಿತು.

ನಾಳೆ ಹಿರಿಯ ನಾಗರಿಕರ ದಿನಾಚರಣೆ

ಮೈಸೂರು, ಸೆ.29– ಅಕ್ಟೋಬರ್ 1ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜೆ.ಎಸ್.ಎಸ್ ಆಸ್ಪತ್ರೆಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸಭಾಂಗಣದಲ್ಲಿ 2023–24ನೇ ಸಾಲಿನ ಹಿರಿಯ ನಾಗರಿಕರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ದೂ.ಸಂ: 0821–2490333 ಅನ್ನು ಸಂಪರ್ಕಿಸಬಹುದು ಎಂದು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿರಿಯ ಐಪಿಎಸ್ ಅಧಿಕಾರಿ ಡಾ. ಕೆ.ರಾಮಚಂದ್ರ ರಾವ್ ಪದೋನ್ನತಿ

ಮೈಸೂರು: ಹಿರಿಯ ಐಪಿಎಸ್ ಅಧಿಕಾರಿ ಡಾ ಕೆ ರಾಮಚಂದ್ರ ರಾವ್ ಅವರಿಗೆ



ಪದೋನ್ನತಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಕರ್ನಾಟಕ ಸ್ಟೇಟ್ ಪೊಲೀಸ್ ಹೌಸಿಂಗ್ ಕಾರ್ಪೊರೇಷನ್‌ನಲ್ಲಿ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದ ಡಾ ಕೆ ರಾಮಚಂದ್ರ ರಾವ್ ಅವರನ್ನು ಕರ್ನಾಟಕ ಸ್ಟೇಟ್ ಪೊಲೀಸ್ ಹೌಸಿಂಗ್ ಅಂಡ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್‌ನ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ (ಡಿಜಿಪಿ) ಆಗಿ ಪದೋನ್ನತಿ ನೀಡಿದೆ. ಈ ಆದೇಶ ಅ.1ರಿಂದ ಅನ್ವಯವಾಗಲಿದೆ ಎಂದು ರಾಜ್ಯ ಸರ್ಕಾರ ತನ್ನ ಆದೇಶದಲ್ಲಿ ತಿಳಿಸಿದೆ.

ಮಹಿಳಾ ಮೀಸಲಾತಿ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಸಹಿ

ನವದೆಹಲಿ: ಲೋಕಸಭೆ ಹಾಗೂ ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿಯನ್ನು ಕಲ್ಪಿಸುವ ಮಹಿಳಾ ಮೀಸಲಾತಿ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಸಹಿ ಹಾಕಿದ್ದಾರೆ



ಕಾನೂನು ಸಚಿವಾಲಯ ಪ್ರಕಟಿಸುವ ಅಧಿಸೂಚನೆಯಲ್ಲಿ ಗುರುವಾರ ರಾಷ್ಟ್ರಪತಿ ಗಳು ಸಹಿ ಹಾಕಿದ್ದಾರೆ ಹಾಗೂ ಅದೇ ಕ್ಷಣದಿಂದ ಸಂವಿಧಾನದ (106ನೇ ತಿದ್ದುಪಡಿ) ಕಾಯ್ದೆಯಾಗಿರುವುದು ಅಧಿಕೃತವಾಗಿದೆ. ನಿಬಂಧನೆಗಳ ಪ್ರಕಾರ ಕೇಂದ್ರ ಸರ್ಕಾರ ಅಧಿಕೃತ ಗೆಜೆಟ್ ನೋಟಿಫಿಕೇಶನ್ ಪ್ರಕಟಿಸಿದ ದಿನದಿಂದ ಕಾಯ್ದೆ ಜಾರಿಯಾಗಲಿದೆ.

ನಾರಿ ಶಕ್ತಿ ವಂದನ್ ಅಧಿನಿಯಮ್ ಮಹಿಳೆಯರಿಗೆ ಲೋಕಸಭೆಯಲ್ಲಿ ಹಾಗೂ ವಿಧಾನಸಭೆಗಳಲ್ಲಿ ಶೇ.33 ರಷ್ಟು ಮೀಸಲಾತಿಯನ್ನು ಕಲ್ಪಿಸುತ್ತದೆ ಈ ಮಸೂದೆಯನ್ನು ಉಭಯ ಸದನಗಳಲ್ಲಿಯೂ ಅಂಗೀಕರಿಸಲಾಗಿದ್ದು ಹೊಸ ಸಂಸತ್ ಭವನದಲ್ಲಿ ಅಂಗೀಕರಿಸಲಾದ ಮೊದಲ ಮಸೂದೆ ಎಂಬ ಹೆಗ್ಗಳಿಕೆ ಹೊಂದಿದೆ. ಸೆಪ್ಟೆಂಬರ್ 20 ರಂದು ಮಸೂದೆಯನ್ನು ಅಂಗೀಕರಿಸಲಾಗಿತ್ತು 454 ಸದಸ್ಯರು ಶಾಸನದ ಪರವಾಗಿ ಮತ ಚಲಾಯಿಸಿದರು ಮತ್ತು ವಿರುದ್ಧ ಇಬ್ಬರು ಮತ ಚಲಾಯಿಸಿದ್ದರು. ವಿರೋಧ ಪಕ್ಷದ ಸದಸ್ಯರು ಮಂಡಿಸಿದ ತಿದ್ದುಪಡಿಗಳು ಋಣಾತ್ಮಕವಾಗಿದ್ದು, ಕರಡು ಶಾಸನದ ಪ್ರತ್ಯೇಕ ಷರತ್ತುಗಳ ಮೇಲೆ ಮತ ಚಲಾಯಿಸಲಾಯಿತು. ಸೆ.21 ರಂದು ರಾಜ್ಯಸಭೆಯಲ್ಲಿ ನಾರಿ ಶಕ್ತಿ ವಂದನ್ ಅಧಿನಿಯಮವನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿತ್ತು.

ಮೈಸೂರಲ್ಲಿ ವಾಹನ ಸಂಚಾರ ಸಹಜ ಸ್ಥಿತಿಗೆ; ಬಾಗಿಲು ತೆರೆಯದ ಬಹುತೇಕ ಅಂಗಡಿ–ಮುಂಗಟ್ಟು

ರಜೆ ಮೂಡ್‌ಗೆ ಜಾರಿದ್ದ ಜನ; ಫಾಸ್ಟ್‌ಫುಡ್‌ಗಳ ಮೊರೆ



ಮೈಸೂರು, ಸೆ29(ಎಸ್‌ಬಿಡಿ)– ಕರ್ನಾಟಕ ಬಂದ್ ಮುಕ್ತಾಯದ ಬಳಿಕ ಮೈಸೂರಿನಲ್ಲಿ ಜನಜೀವನ ಸಹಜ ಸ್ಥಿತಿಗೆ ಮರಳಿತಾದ್ದೂ, ವ್ಯಾಪಾರ ವಹಿವಾಟು ಎಂದಿನಂತಿರಲಿಲ್ಲ

ಶುಕ್ರವಾರ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ನಡೆದ ಕರ್ನಾಟಕ ಬಂದ್‌ಗೆ ಮೈಸೂರಲ್ಲಿ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು. ಅಗತ್ಯ ವಸ್ತುಗಳ ಮಾರಾಟ ಹೊರತು ಉಳಿದೆಲ್ಲಾ ಅಂಗಡಿ ಮುಂಗಟ್ಟುಗಳು ಬಂದ್ ಆಗಿದ್ದವು. ಮಧ್ಯಾಹ್ನ 3 ಗಂಟೆ ನಂತರ ಸಾರಿಗೆ ಬಸ್ ಸಂಚಾರ ಪುನರಾರಂಭವಾಗುತ್ತಿದ್ದಂತೆ ಆಟೋ, ಟ್ಯಾಕ್ಸಿಗಳೂ ರಸ್ತೆಗಿಳಿಯಲಾರಂಭಿಸಿದವು. ಖಾಸಗಿ ವಾಹನಗಳ ಸಂಖ್ಯೆಯೂ ಹೆಚ್ಚಾಯಿತು. ಆದರೆ ವ್ಯಾಪಾರ ವಹಿವಾಟಿನಲ್ಲಿ ಸಹಜ ಸ್ಥಿತಿ ಕಂಡುಬರಲಿಲ್ಲ.

ಡಿ.ದೇವರಾಜ ಅರಸು ರಸ್ತೆ, ಸಯ್ಯಾಜಿ ರಾವ್ ರಸ್ತೆ, ಕೆ.ಟಿ.ಸ್ಟ್ರೀಟ್, ವಿನೋಬಾ ರಸ್ತೆ, ಹಳೇ ಸಂತೆಪೇಟೆ, ಅಶೋಕ ರಸ್ತೆ, ಕಾಳಿದಾಸ ರಸ್ತೆ, ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ಸಂಜೆ 6 ಗಂಟೆ ಬಳಿಕ ಶೇ.40–50ರಷ್ಟು ಅಂಗಡಿಗಳು ಮಾತ್ರ ತೆರೆದವು. ದೇವರಾಜ ಮಾರುಕಟ್ಟೆಯಲ್ಲೂ ಎಲ್ಲಾ ಮಳಿಗೆಗಳು ತೆರೆಯಲಿಲ್ಲ. ಬಹುತೇಕ ಹಣ್ಣಿನ ಮಂಡಿಗಳು, ಮಾಂಸದಂಗಡಿಗಳ ಬಾಗಿಲು ತೆಗೆಯಲೇ ಇಲ್ಲ. ಚಿಕ್ಕಗಡಿಯಾರದ ಬಳಿ ಕೆಲ ವ್ಯಾಪಾರಿಗಳನ್ನು ಹೊರತುಪಡಿಸಿದರೆ ಎಲ್ಲಾ ಕಡೆ ಬೀದಿಬದಿ ವ್ಯಾಪಾರಿಗಳೂ ಸಂಜೆ ನಂತರ ವ್ಯಾಪಾರ ಆರಂಭಿಸಲಿಲ್ಲ. ಮಳಿಗೆಗಳಲ್ಲಿ ಕೆಲಸ ಮಾಡುವವರು ಸಂಜೆ ವೇಳೆಗೆ ಬರಲು ಕಷ್ಟವಾಗುತ್ತದೆ ಎಂಬ ಕಾರಣಕ್ಕೆ ಹಲವರು ಇಡೀ ದಿನ ಅಂಗಡಿಗೆ ರಜೆ ಮಾಡಿದ್ದರು. ಮೂರ್‍ನಾಲ್ಕು ಗಂಟೆಗಳ ವ್ಯಾಪಾರಕ್ಕೆ ಅಂಗಡಿ ತೆಗೆಯುವುದೇನು ಎಂದು ಕೆಲ ವ್ಯಾಪಾರಿಗಳು ಯೋಚಿಸಿ, ಅಂಗಡಿ ತೆರೆಯಲೇ ಇಲ್ಲ. ತೆರೆದಿದ್ದ ಮಳಿಗೆಗಳಲ್ಲೂ ಗ್ರಾಹಕರು ತೀರಾ ವಿರಳವಾಗಿದ್ದರು. ಹೂವು, ಹಣ್ಣು, ತರಕಾರಿ, ದಿನಸಿ ಇನ್ನಿತರ ಅಗತ್ಯ ವಸ್ತು ಖರೀದಿಯಷ್ಟೇ ಹೆಚ್ಚಾಗಿ ಕಂಡು ಬಂದಿತು. ಬಡಾವಣೆಗಳಲ್ಲೂ ಬೆಳಗ್ಗೆಯಿಂದ ಬಹುತೇಕ ಅಂಗಡಿಗಳು ಬಂದ್ ಆಗಿದ್ದವು. ಆದರೆ ಸಂಜೆ 4 ಗಂಟೆ ಬಳಿಕ ಒಂದೊಂದಾಗಿ ಅಂಗಡಿಗಳು ತೆರೆದವು. ಸಾರ್ವಜನಿಕರೂ ಅನಗತ್ಯವಾಗಿ ರಸ್ತೆಯಲ್ಲಿ ಅಡ್ಡಾಡದೆ ಸ್ವಯಂ ಪ್ರೇರಿತವಾಗಿ ಬಂದ್‌ಗೆ ಸಹಕಾರ ನೀಡಿದರು. ಸಂಜೆ ವೇಳೆಗೆ ರಸ್ತೆಗಿಳಿದ ಆಟೋಗಳಿಗೂ ಗ್ರಾಹಕರಿರಲಿಲ್ಲ.

ಫಾಸ್ಟ್‌ಫುಡ್ ವ್ಯಾಪಾರ: ಹೋಟೆಲ್ ಮಾಲೀಕರ ಸಂಘವೂ ಕರ್ನಾಟಕ ಬಂದ್‌ಗೆ ಸಂಪೂರ್ಣ ಬೆಂಬಲ ನೀಡಿದ್ದರಿಂದ ಬಹುತೇಕ ಹೋಟೆಲ್, ಬೇಕರಿ, ಸ್ವೀಟ್ ಸ್ಟಾಲ್‌ಗಳನ್ನು ಬಂದ್ ಮಾಡಲಾಗಿತ್ತು. ಪರಿಣಾಮ ಹೋಟೆಲ್ ನೆಚ್ಚಿಕೊಂಡವರಿಗೆ ತೊಂದರೆಯಾಯಿತು. ಆದರೆ ಸಂಜೆ ವೇಳೆಗೆ ಹೋಟೆಲ್ ಜೊತೆಗೆ ರಸ್ತೆಬದಿ ಫಾಸ್ಟ್‌ಫುಡ್, ಪಾನಿಪುರಿ, ಗೋಬಿ ಇನ್ನಿತರ ಚಾಟ್ಸ್ ಗಾಡಿಗಳು ಕಾಣಿಸಿಕೊಂಡವು. ಬೆಳಗ್ಗೆಯಿಂದ ಉಪಾಹಾರ–ಊಟಕ್ಕೆ ಪರದಾಡಿದ್ದವರು ಫಾಸ್ಟ್‌ಫುಡ್‌ಗಳತ್ತ ಹೆಜ್ಜೆ ಹಾಕಿದ್ದು ಕಂಡು ಬಂದಿತು. ಒಟ್ಟಾರೆ ಸಂಜೆ 6 ಗಂಟೆವರೆಗೆ ಕರ್ನಾಟಕ ಬಂದ್ ಇತ್ತಾದರೂ ಮೈಸೂರಲ್ಲಿ ಇಡೀ ದಿನ ಕಾವೇರಿ ಕಿಚ್ಚಿನ ಕರಿನೆರಳು ರಾಚಿದಂತಿತ್ತು.

ಮೈಸೂರು ಮಿತ್ರ ಶನಿವಾರ 30 ಸೆಪ್ಟೆಂಬರ್ 2023

ನಕ್ಕರೆ ಅದೇ ಸ್ವರ್ಗ

ಮಾಸ್ಟರ್ : "ಈಗ ಒಂದು ಕಳೆಯೋ ಲೆಕ್ಕ ಹೇಳ್ತೀನಿ ಉತ್ತರ ಹೇಳು. ಆರು ಮಾವಿನ ಹಣ್ಣುಗಳಲ್ಲಿ ಆರನ್ನು ತಿಂದರೆ ಉಳಿಯುವುದೇನು?"

ವಿದ್ಯಾರ್ಥಿ : "ಆರು ವಾಟೆಗಳು ಮತ್ತು ಸಿಪ್ಪೆಸಾರ್!"

ಮೈಸೂರು ಮಿತ್ರ

ಶನಿವಾರ, 30 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಇತರರ ತಪ್ಪುಗಳನ್ನು ಹುಡುಕುವವರು ತಮ್ಮ ತಪ್ಪನ್ನು ಅರಿಯರು.

–ಲೋಕೋಕ್ತಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬರೀ ಮಾತಿನವ ಹೊರೆ ಹೊತ್ತಾನೆ?

ನಿಮ್ಮ ಪತ್ರಗಳು

ಹಸಿರು ಕಾಂತ್ರಿಯ ಹರಿಕಾರ ಅಸ್ತಂಗತ



ಮಾನ್ಯರೆ,

ವಿಶ್ವ ಕಂಡ ಶ್ರೇಷ್ಠ ಕೃಷಿ ವಿಜ್ಞಾನಿ, ಭಾರತದ ಹಸಿರು ಕ್ರಾಂತಿಯ ಪಿತಾಮಹ ಎಂದೇ ಪ್ರಖ್ಯಾತರಾದ ಡಾ. ಮೊಂಕೊಂಬ ಸಾಂಬಶಿವನ್ ಸ್ವಾಮಿನಾಥನ್ (98) ಅಥವಾ ಎಂ.ಎಸ್. ಸ್ವಾಮಿನಾಥನ್ ಎಂದೂ ಖ್ಯಾತರಾದ ಹಸಿರು ಕಾಂತ್ರಿಯ ಹರಿಕಾರ ಚೆನ್ನೈಯಲ್ಲಿ ಬುಧವಾರ ನಿಧನರಾಗಿದ್ದು, ಇದರಿಂದ ದೇಶಕ್ಕೆ ತುಂಬಲಾರದ ನಷ್ಟವಾಗಿದೆ.

ಆಗಸ್ಟ್ 7, 1925 ರಂದು ಕುಂಭಕೋಣಂ ಜಿಲ್ಲೆಯಲ್ಲಿ ಜನಿಸಿದ ಸ್ವಾಮಿನಾಥನ್ ಅವರು ತಮ್ಮ ಸ್ವಂತ ಊರಿನಲ್ಲಿ ಶಿಕ್ಷಣವನ್ನು ಪೂರ್ಣಗೊಳಿಸಿದರು. ವಿಶ್ವ ಸಂಸ್ಥೆಯ ಪರಿಸರ ಕಾರ್ಯಕ್ರಮವು ಸ್ವಾಮಿನಾಥನ್ ಅವರನ್ನು 'ಆರ್ಥಿಕ ಪರಿಸರ ವಿಜ್ಞಾನದ ಪಿತಾಮಹ' ಎಂದು ಬಣ್ಣಿಸಿದೆ. 1960 ಹಾಗೂ 70ರ ದಶಕದಲ್ಲಿ ರಾಸಾಯನಿಕ ಹಾಗೂ ಜೈವಿಕ ತಂತ್ರಜ್ಞಾನದ ಮೂಲಕ ಅಕ್ಕಿ ಮತ್ತು ಗೋಧಿಯ ಉತ್ಪಾದನೆ ಹೆಚ್ಚಿಸಲು ರೂಪಿಸಲಾದ ಹಸಿರು ಕ್ರಾಂತಿ ಯೋಜನೆಯಲ್ಲಿ ಕೇಂದ್ರ ಕೃಷಿ ಸಚಿವರಾಗಿದ್ದ ಸಿ.ಸುಬ್ರಮಣಿಯಂ, ಜಗಜೀವನ್ ರಾವ್ ಅವರೊಂದಿಗೆ ಸ್ವಾಮಿನಾಥನ್ ಕೆಲಸ ಮಾಡಿದ್ದರು.

ಇವರ ವಿಶೇಷ ಸಾಧನೆಯಾದ ಅಧಿಕ ಇಳುವರಿಯ ಭತ್ತ ಹಾಗೂ ಗೋಧಿ ತಳಿಯ ಅಭಿವೃದ್ಧಿಗಾಗಿ 1987ರಲ್ಲಿ ಅವರಿಗೆ "ಜಾಗತಿಕ ಆಹಾರ ಬಹುಮಾನ" ಲಭಿಸಿತ್ತು. ಅದರಿಂದ ಬಂದ ಹಣದಲ್ಲಿ ಅವರು ಚೆನ್ನೈನಲ್ಲಿ ಎಂ.ಎಸ್.ಸ್ವಾಮಿನಾಥನ್ ಸಂಶೋಧನಾ ಪ್ರತಿಷ್ಠಾನವನ್ನು ಆರಂಭಿಸಿದರು. 1971ರಲ್ಲಿ ರೇಮನ್ ಮ್ಯಾಗ್ಸೆಸೆ ಹಾಗೂ 1986ರಲ್ಲಿ ಆಲ್ಬರ್ಟ್ ಐನ್‌ಸ್ಟೀನ್ ವಿಶ್ವ ವಿಜ್ಞಾನ ಪ್ರಶಸ್ತಿಗಳೂ ಅವರಿಗೆ ಸಂದಿರುವುದು ಅವರ ಸಾಧನೆಗೆ ಹಿಡಿದ ಕನ್ನಡಿಯಾಗಿದೆ.

ಎಂ.ಎಸ್.ಸ್ವಾಮಿನಾಥನ್‌ರ ಸಾಧನೆಯನ್ನು ಮೆಚ್ಚಿ ಪದ್ಮ ಶ್ರೀ, ಪದ್ಮ ಭೂಷಣ ಹಾಗೂ ಪದ್ಮ ವಿಭೂಷಣ ಪ್ರಶಸ್ತಿಗಳು, ಎಚ್.ಕೆ.ಫಿರೋದಿಯಾ ಪ್ರಶಸ್ತಿ, ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಪ್ರಶಸ್ತಿ ಹಾಗೂ ಇಂದಿರಾ ಗಾಂಧಿ ಪ್ರಶಸ್ತಿಗಳೂ ಲಭಿಸಿರುವುದು ನಮ್ಮ ದೇಶಕ್ಕೆ ಹೆಮ್ಮೆಯ ಸಂಗತಿಯಾಗಿದೆ.

ದೇಶದ ಕೃಷಿ ಕ್ಷೇತ್ರದಲ್ಲೇ ಅಲ್ಲದೆ, ಜಾಗತಿಕ ಮಟ್ಟದಲ್ಲಿ ಸ್ವಾಮಿನಾಥನ್ ಅವರ ಕಾರ್ಯ ಹೆಚ್ಚು ಜನಪ್ರಿಯ. ಜಾಗತಿಕ ಮಟ್ಟದ ಹಲವು ಕೃಷಿ ಹಾಗೂ ಪರಿಸರ ಜಾಗೃತಿ ಕುರಿತ ಕಾರ್ಯಕ್ರಮಗಳಲ್ಲಿ ಅವರು ಸಕ್ರೀಯರಾಗಿದ್ದರು. ಇವರ ಇನ್ನೊಂದು ಹೆಮ್ಮೆಯ ವಿಷಯವೆಂದರೆ ಟೈಮ್ ನಿಯತಕಾಲಿಕೆ ಪ್ರಕಟಿಸಿದ 20ನೇ ಶತಮಾನದ 20 ಅತ್ಯಂತ ಪ್ರಭಾವಿಗಳ ಪಟ್ಟಿಯಲ್ಲಿ ಸ್ವಾಮಿನಾಥನ್ ಅವರ ಹೆಸರು ಸೇರಿರುವುದು ಭಾರತದ ಹಿರಿಮೆಯನ್ನು ಹೆಚ್ಚಿಸಿದೆ. ಎಂ.ಎಸ್.ಸ್ವಾಮಿನಾಥನ್ ಅವರ ಅಗಲಿಕೆ ಭಾರತದ ವಿಜ್ಞಾನ ಕ್ಷೇತ್ರವೆಂಬ ಮರದ ಕೊಂಬೆಯನ್ನು ಕಳೆದುಕೊಂಡ ಹಾಗೆ ಅಗಿದ್ದು, ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ದೇಶದ ಜನರ ಪರವಾಗಿ ಪ್ರಾರ್ಥಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ಕಿರಂಗೂರು–ಪಾಂಡವಪುರ ರಸ್ತೆ ಅಗಲೀಕರಣ ಮಾಡಿ

ಮಾನ್ಯರೆ,

ಶ್ರೀರಂಗಪಟ್ಟಣ– ಪಾಂಡವಪುರದ ಮುಖ್ಯ ರಸ್ತೆಯ ಕಿರಂಗೂರು ಮತ್ತು ಪಾಂಡವಪುರ ಸಕ್ಕರೆ ಕಾರ್ಖಾನೆ ನಡುವಿನ ಸುಮಾರು ಎರಡು ಕಿಮೀ ದೂರದ ಪ್ರಯಾಣಕ್ಕೆ ಕೆಲವು ಸಲ ಒಂದು ಗಂಟೆಗೂ ಹೆಚ್ಚು ಸಮಯಬೇಕಾಗುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಈ ರಸ್ತೆ ಅತ್ಯಂತ ಕಿರಿದಾಗಿರುವುದು ಮತ್ತು ಈ ರಸ್ತೆಯಲ್ಲಿ ಪಾಂಡವಪುರ ಶುಗರ್ ಫ್ಯಾಕ್ಟರಿಗೆ ಕಬ್ಬು ಸಾಗಿಸಲು ಬರುವ ಎತ್ತಿನ ಗಾಡಿಗಳು, ಲಾರಿ, ಟ್ರಾಕ್ಟರ್‌ಗಳು, ರಸ್ತೆಯ ಮಧ್ಯದಲ್ಲೇ ಹೋಗಬೇಕಾದ ಅನಿವಾರ್ಯತೆಯೂ ಇರುವುದರಿಂದ ಕಬ್ಬು ತುಂಬಿದ ಎತ್ತಿನ ಗಾಡಿಗಳು ಅಥವಾ ಲಾರಿಗಳು ರಸ್ತೆಯ ಒಂದು ಬದಿಯಲ್ಲಿ ಚಲಿಸುವಾಗ ಒಂದೇ ಕಡೆ ಕಬ್ಬಿನ ಭಾರ ಹೆಚ್ಚಾಗಿ ಉರುಳು ಬೀಳುವ ಸಾಧ್ಯತೆ ಇರುತ್ತದೆ. ಅನೇಕ ಸಲ ಎತ್ತಿನ ಗಾಡಿಗಳು ಮತ್ತು ಲಾರಿಗಳು ಉರುಳಿ ಸಾಕಷ್ಟು ಅಪಘಾತಗಳು ಸಂಭವಿಸಿರುವ ಉದಾಹರಣೆಗಳಿವೆ. ಈ ಎರಡು ಕಿಮೀ ರಸ್ತೆಯನ್ನು ಅಗಲೀಕರಣ ಮಾಡಿ ಏಕಮುಖ ಸಂಚಾರ ವ್ಯವಸ್ಥೆ ಮಾಡಿದಾಗ ಮಾತ್ರ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಜನಪ್ರತಿನಿಧಿಗಳು ಈ ಬಗ್ಗೆ ಗಮನಹರಿಸಿ, ಈ ರಸ್ತೆಯನ್ನು ಅಗಲೀಕರಣ ಮಾಡಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಿ.

–ಬೂಕನಕೆರೆ ವಿಜೇಂದ್ರ, ಲೇಖಕರು, ಕುವೆಂಪುನಗರ, ಮೈಸೂರು

ಕಾವೇರಿಯ ಜಲ ವಿವಾದಕ್ಕೆ ಕೊನೆಯಿಲ್ಲವೇ.!!

ಮಾನ್ಯರೆ,

ಕಾವೇರಿಯ ಜಲ ವಿವಾದವು ಇಂದು ನಿನ್ನೆಯದಲ್ಲ, ಸುಮಾರು 280 ವರ್ಷಗಳ ಹಿಂದಿನಿಂದಲೂ ಜ್ವಲಂತ ಸಮಸ್ಯೆಯಾಗಿದೆ, ಕಾವೇರಿಯು ಕರ್ನಾಟಕದ ಜೀವನದಿ ಆದರೂ, ಕಾವೇರಿ ಕರ್ನಾಟಕದಲ್ಲಿ 400 ಕಿಮೀ ಹರಿದರೂ ಕೇವಲ ಶೇ.25 ಮಾತ್ರ ಅನುಕೂಲ. ಇನ್ನುಳಿದ ಶೇ.75 ಭಾಗ ತಮಿಳುನಾಡಿಗೆ ಅನುಕೂಲವಾಗುತ್ತಿದೆ. ಕೆಆರ್‌ಎಸ್ ಡ್ಯಾಮ್ ಕಟ್ಟಿರುವುದು ಕರ್ನಾಟಕದ ಹಣದಿಂದ. ಆದರೆ ಹೆಚ್ಚಿನ ಅನುಕೂಲ ಪಡೆಯುತ್ತಿರುವುದು ತಮಿಳುನಾಡಿನವರು. ಆದರೂ ಸಮೃದ್ಧಿಯಾಗಿ ಮಳೆ ಆಗದಿದ್ದ ಸಂದರ್ಭದಲ್ಲಿ ತಮಿಳುನಾಡು ಕ್ಯಾತೆಯನ್ನು ತೆಗೆಯುತ್ತಿರುವುದು ದುರಾದೃಷ್ಟಕರವಾಗಿದೆ. ಇದರಿಂದ ಕರ್ನಾಟಕದಲ್ಲಿ ದಿನದಿಂದ ದಿನಕ್ಕೆ ವಿರೋಧ ಪಕ್ಷಗಳು, ಕನ್ನಡ ಪರ ಸಂಘಟನೆಗಳು, ಇತರೆ ಸಂಘಟನೆಗಳು ಹೋರಾಟಗಳ ಮೂಲಕ ಉಗ್ರ ಸ್ವರೂಪವನ್ನು ಪಡೆಯುವಂತೆ ಮಾಡುತ್ತಿದೆ. ಡ್ಯಾಮ್‌ನಲ್ಲಿ ನೀರಿನ ಪ್ರಮಾಣ ಕಡಿಮೆ ಇದ್ದು ಕುಡಿಯುವುದಕ್ಕೆ ಸಾಕಾಗುತ್ತಿಲ್ಲ ಎಂಬ ನಿಜ ಸಂಗತಿಯನ್ನು ಕೋರ್ಟ್‌ಗೆ ಅರಿವು ಮೂಡಿಸುವಂತಹ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿಲ್ಲ. ನನಗೇನು ಸಂಬಂಧ ಇಲ್ಲವೆಂಬಂತೆ ಬೇಜವಾಬ್ದಾರಿಯಿಂದ ಕಾಲಹರಣ ಮಾಡುತ್ತಿದೆ. ಕೋಟಿ ಕೋಟಿ ರೂಪಾಯಿಗಳು ವಕೀಲರಿಗೆ ಸಂದಾಯವಾಗುತ್ತಿದೆ. ಒಂದು ವರದಿಯ ಪ್ರಕಾರ ನಮ್ಮ ರಾಜ್ಯದ ವಕೀಲರನ್ನು ಇದರಲ್ಲಿ ನೇಮಕ ಮಾಡುತ್ತಿಲ್ಲ. ಎಲ್ಲಾ ವಕೀಲರು ಕೇರಳ, ತಮಿಳುನಾಡಿನವರೇ ಇರುತ್ತಾರೆಂಬ ಆರೋಪವಿದೆ. ಪ್ರತಿ ಬಾರಿಯೂ ಕರ್ನಾಟಕಕ್ಕೆ ಇದರಿಂದಲೇ ಹಿನ್ನಡೆಯಾಗುತ್ತಿದೆ ಎಂಬ ಅಂಶವನ್ನು ಅರಿತುಕೊಳ್ಳಬೇಕು. ಸರ್ಕಾರವು ಕೂಡ ಕಾಳಜಿ ಬದ್ಧತೆಯನ್ನು ಜನರ ಹಿತದೃಷ್ಟಿಯಿಂದ ಕಾಪಾಡಬೇಕು. ಸುಪ್ರೀಂಕೋರ್ಟ್ ತೀರ್ಮಾನವೆಂದು ಕುಳಿತುಕೊಳ್ಳಬಾರದು. ನೀರಿನ ಸ್ಥಿತಿಗತಿ ತಿಳಿಸುವುದರ ಮೂಲಕ ಗೆಲುವನ್ನು ಸಾಧಿಸಬಹುದು. ಆ ಕೆಲಸ ಇಲ್ಲಿ ಆಗುತ್ತಿಲ್ಲ. ಕರ್ನಾಟಕದ ಎಂಪಿಗಳು ಕೂಡ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸುವಂತೆ ಒತ್ತಡವನ್ನು ತರಬೇಕು. ತಮ್ಮ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳಲು ಅಧಿಕಾರದ ಗದ್ದುಗೆಯನ್ನೇರಲು ಇಂತಹ ಪರಿಸ್ಥಿತಿಯನ್ನು ಬಳಸಿಕೊಳ್ಳುತ್ತಾರೆ ವಿನಹ, ನೆಲ, ಜಲ, ಭಾಷೆಗಾಗಿ ಅಧಿಕಾರ ತ್ಯಜಿಸಲು ಸಿದ್ದರಿರುವುದಿಲ್ಲ. ರಾಜಕೀಯ ಧುರೀಣರಲ್ಲಿ ನಿರ್ಲಕ್ಷತೆ ಭಾವವಿರುತ್ತದೆ. ಸಮಯಕ್ಕೆ ತಕ್ಕಂತೆ ತಮಿಳು ಆಡಳಿತಗಾರರ ತಂತ್ರಗಾರಿಕೆಯಲ್ಲಿ ಈ ವಿವಾದ ರಕ್ತಬೀಜಾಸುರನಾಗಿದೆ. ರಾಜಕೀಯ ದೊಂಬರಾಟಕ್ಕೆ ಕಾವೇರಿಯ ಜಲ ವಿವಾದವು ಕೊನೆಯಾಗುತ್ತಿಲ್ಲ ಎಂಬುದನ್ನು ಕರ್ನಾಟಕದ ಜನರು ಅರ್ಥ ಮಾಡಿಕೊಳ್ಳಬೇಕು. ಅನಾದಿ ಕಾಲದಲ್ಲಿ ನಡೆದ ಜಲ ಒಪ್ಪಂದದಲ್ಲಿ ಬದಲಾವಣೆ ಆದರೆ ಮಾತ್ರ ಕಾವೇರಿ ಜಲ ವಿವಾದವು ಕೊನೆಗೊಳ್ಳುತ್ತದೆ.

–ಪರಶಿವಮೂರ್ತಿ ಎನ್.ಪಿ. ನಂಜೀಪುರ, ಸರಗೂರು ತಾ.



ಕಾರ್ಕಳ ಆನಂದ ಭಟ್

ಮೊ : 7676554198

ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಕುದೆಸೆ

ಪ್ರಪಂಚಕ್ಕೆ ಭಾರತದ ಸಾಮರ್ಥ್ಯ ಪರಿಚಯಿಸಿದ ಜಿ–20 ಶೃಂಗಸಭೆ



❝ ಕೊರೊನಾ ಮಹಾಮಾರಿಯ ನಂತರ ಉಂಟಾದ ಜಾಗತಿಕ ಹತಾಶೆ ಉಕ್ರೇನ್ ಸಮರದಿಂದ ಮತ್ತಷ್ಟು ಹದಗೆಟ್ಟಿತು. ಈ ಹತಾಶೆಯನ್ನು ಆತ್ಮವಿಶ್ವಾಸದಲ್ಲಿ ಪರಿವರ್ತಿಸೋಣ ಎಂದು ಪ್ರಧಾನಿ ಮೋದಿಯವರು ನವದೆಹಲಿಯ ಭಾರತ್ ಮಂಡಪಂನಲ್ಲಿ ಸಮಾವೇಶಗೊಂಡ ಜಿ–20ರ 18ನೇ ಶೃಂಗಸಭೆಯಲ್ಲಿ ಸದಸ್ಯ ರಾಷ್ಟ್ರಗಳಿಗೆ ಕರೆ ನೀಡಿದರು.

43 ವಿಶ್ವನಾಯಕರು, 20 ರಾಷ್ಟ್ರ ನಾಯಕರು, 9 ಆಹ್ವಾನಿತ ದೇಶಗಳು, ಹದಿನಾಲ್ಕು ಜಾಗತಿಕ ಮತ್ತು ಆರ್ಥಿಕ ಸಂಸ್ಥೆಗಳ ಮುಖ್ಯಸ್ಥರು ಈ ಶೃಂಗ ಸಭೆಯಲ್ಲಿ ಭಾಗವಹಿಸಿದ್ದು ಭಾರತದ ನಾಯಕತ್ವದ ಸಾಮರ್ಥ್ಯ, ವರ್ಚಸ್ಸು ಪ್ರತಿಬಿಂಬಿಸಿತು. ಕಳೆದ ವರ್ಷ ಜಿ20ರ ಅಧ್ಯಕ್ಷತೆ ವಹಿಸುತ್ತಿದ್ದಂತೆ ಅನಾವರಣಗೊಳಿಸಿದ ಲೋಗೋ ಧ್ಯೇಯ ವಾಕ್ಯಗಳು ಭಾರತದ ಉದ್ದೇಶ ಸ್ಪಷ್ಟವಾಗಿ ತಿಳಿಸಿತ್ತು. 'ವಸುದೈವ ಕುಟುಂಬಕಂ' ಅಂದರೆ ಒಂದು ಭೂಮಿ, ಒಂದು ಪರಿವಾರ, ಒಂದು ಭವಿಷ್ಯ ಎಂಬ ಭಾರತೀಯ ಪರಂಪರೆಯಲ್ಲಿ ಬಿಂಬಿತವಾಗಿರುವ ಮೌಲ್ಯಗಳನ್ನು ಈ ಶೃಂಗಸಭೆಯ ಅಂತ್ಯದಲ್ಲಿ ಜಗತ್ತು ಸ್ವೀಕರಿಸಿತು.

ಪ್ರಥಮ ಬಾರಿ ಭಾರತವು ಜಿ20 ಶೃಂಗ ಸಭೆಯನ್ನು ಜನಸಮಾವೇಶವಾಗಿ ಪರಿವರ್ತಿಸಿತು. ಜಾಗತಿಕ ಮಹತ್ವದ ಈ ಶೃಂಗ ಸಭೆಯಲ್ಲಿ ಜನಸಾಮಾನ್ಯರ ಭಾಗವಹಿಸುವಿಕೆ ವಿಶೇಷವಾಗಿತ್ತು. ಜಿ20ಗೆ ಪೂರಕವಾಗಿ ಪ್ರತಿ ಒಂದು ಸಚಿವಾಲಯವು ತಮ್ಮ ಖಾತೆಗಳಿಗೆ ಅನುರೂಪವಾದ ಕಾರ್ಯಕ್ರಮಗಳನ್ನು ಶಾಲೆ, ಪಂಚಾಯತ್, ಬ್ಲಾಕ್, ಜಿಲ್ಲೆ ಹಾಗೂ ರಾಜ್ಯ ಮಟ್ಟಗಳಲ್ಲಿ ವರ್ಷಪೂರ್ತಿ ಆಯೋಜಿಸಿದ್ದರು. ದೇಶದ ಅರವತ್ತು ನಗರಗಳಲ್ಲಿ 220 ಅಧಿಕೃತ ಸಭೆ ನಡೆಸಲಾಗಿತ್ತು. ಮೂವತ್ತು ಸಾವಿರದಷ್ಟು ಪ್ರತಿನಿಧಿಗಳು ಒಂದು ಲಕ್ಷದಷ್ಟು ಜನಸಾಮಾನ್ಯರು ಜಿ20 ಪೂರಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ರಾಷ್ಟ್ರೀಯ ಶಿಕ್ಷಣ ನೀತಿಗೆ ಸಂಬಂಧಿತ ಕಾರ್ಯಕ್ರಮಗಳಲ್ಲಿ 15.7 ಮಿಲಿಯನ್ ವಿದ್ಯಾರ್ಥಿಗಳು, 25.5 ಲಕ್ಷ ಅಧ್ಯಾಪಕರು ಹಾಗೂ 51.1 ಲಕ್ಷ ಸಮುದಾಯ ಸದಸ್ಯರು ಒಟ್ಟು 23.3 ಮಿಲಿಯನ್ ಜನರು ಭಾಗವಹಿಸಿದ್ದರು. ದೇಶಾದ್ಯಂತ ನಡೆದ ಸುಮಾರು 1563 ರಷ್ಟು ಸಾಮಾನ್ಯ ಸಮಾವೇಶಗಳು ಜಿ20ಗೆ ಶಕ್ತಿ ತುಂಬಿದವು. ಜಾಗತಿಕವಾಗಿ ಸಿವಿಲ್ 20ರ ಕಾರ್ಯಕ್ರಮಗಳಲ್ಲಿ ಸುಮಾರು 45 ಲಕ್ಷ ಜನ ಭಾಗವಹಿಸಿದರು. ಭಾರೀ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸುವಿಕೆಯಿಂದ ಸಾಮಾಜಿಕ ಜಾಲತಾಣಗಳಲ್ಲಿ 14 ಟ್ರಿಲಿಯನ್ ಅಭಿಪ್ರಾಯಗಳು ದಾಖಲಾದವು. ಕಾಶಿಯಲ್ಲಿ ವಿದ್ಯಾರ್ಥಿಗಳಿಗಾಗಿ ನಡೆದ ಜಿ20 ಸಂಬಂಧ ರಸಪ್ರಶ್ನೆ ಕಾರ್ಯಕ್ರಮದಲ್ಲಿ 800 ಶಾಲೆಗಳಿಂದ ಸುಮಾರು 1.25 ಲಕ್ಷ ವಿದ್ಯಾರ್ಥಿಗಳು ಭಾಗವಹಿಸಿದ್ದರು. 450 ಲಂಬಾಣಿ ಕುಶಲಕರ್ಮಿಗಳು ತಮ್ಮ ಕೌಶಲ್ಯ ಮತ್ತು ಪರಿಶ್ರಮದಿಂದ ನಿರ್ಮಿಸಿದ 1800ಕ್ಕೂ ಹೆಚ್ಚು ಕಲಾ ಪ್ರಕಾರಗಳನ್ನು ಜಿ 20 ಶೃಂಗಸಭೆಯಲ್ಲಿ ಪ್ರಸ್ತುತಪಡಿಸಿದರು. ಪ್ರಧಾನಿ ಮೋದಿಯವರು ತಮ್ಮ 'ಮನ್ ಕಿ ಬಾತ್'ನಲ್ಲಿ ಜಿ20 ಬಗ್ಗೆ ಉಲ್ಲೇಖಿಸುತ್ತಾ ಭಾರತದ ಜಿ20 ಅಧ್ಯಕ್ಷತೆಯು ಜನತಾ ಅಧ್ಯಕ್ಷತೆಯಾಗಿತ್ತು ಎಂದಿದ್ದರು. ದೇಶದ ಜನತೆಯ ಉತ್ಸಾಹ, ಬೆಂಬಲ ಹಾಗೂ ಪ್ರೇರಣೆಯಿಂದಾಗಿ ಜಿ20 ಅನ್ನು ಜಾಗತಿಕ ಮಟ್ಟದಲ್ಲಿ ಸ್ಮರಣೀಯ ಹಾಗೂ ಐತಿಹಾಸಿಕ ಆಂದೋಲನವಾಗಿ ಸಂಘಟಿಸುವಲ್ಲಿ ಭಾರತ ಅಭೂತಪೂರ್ವ ಯಶಸ್ಸು ಗಳಿಸಿದೆ. ಜಿ20 ಶೃಂಗಕ್ಕೆ ಆಗಮಿಸಿದ ವಿದೇಶಿ ಪ್ರತಿನಿಧಿಗಳು 'ಒಂದು ಜಿಲ್ಲೆ ಒಂದು ಉತ್ಪನ್ನ' ಯೋಜನೆಯಲ್ಲಿ ತಯಾರಾದ ಸಾಂಪ್ರದಾಯಿಕ ಉತ್ಪನ್ನಗಳಲ್ಲಿ ಭಾರತೀಯರ ನೈಪುಣ್ಯವನ್ನು ನೋಡಿ ಭಾರೀ ಪ್ರಭಾವಿತರಾಗಿದ್ದರು.

ಜಿ20 ಕೂಟದ ಹಿನ್ನೆಲೆ

1999ರಲ್ಲಿ ಉಂಟಾದ ತೀವ್ರ ಆರ್ಥಿಕ ಬಿಕ್ಕಟ್ಟಿನಿಂದ ಜಗತ್ತು ತತ್ತರಿಸಿತು. ಆ ವರ್ಷ ಜೂನ್ ತಿಂಗಳಲ್ಲಿ ನಡೆದ ಜಿ7ರ ಶೊಲೋನ್ ಶೃಂಗಸಭೆಯಲ್ಲಿ ಜಿ20 ಪ್ರಸ್ತಾಪವಾಯಿತು. 26.9.1999ರಲ್ಲಿ ನಡೆದ ಜಿ7 ಹಣಕಾಸು ಮಂತ್ರಿಗಳ ಸಭೆಯಲ್ಲಿ ಔಪಚಾರಿಕವಾಗಿ ಸ್ಥಾಪಿಸಲಾಯಿತು. ಜಿ20 ಪ್ರಥಮ ಅಧ್ಯಕ್ಷರಾಗಿ ಕೆನಡಾದ ಹಣಕಾಸು ಸಚಿವ ಪಾಲ್ ಮಾರ್ಟಿನ್‌ರನ್ನು ಹಾಗೂ ಜರ್ಮನ್ ಹಣಕಾಸು ಸಚಿವ ಹ್ಯಾನ್ಸ್ ಐಚೆಲ್‌ರನ್ನು ಉದ್ಘಾಟನಾ ಸಭೆಯ ಆಯೋಜಕರಾಗಿ ಆಯ್ಕೆ ಮಾಡಲಾಗಿತ್ತು. 1990ರ ದಶಕದ ಉತ್ತರಾರ್ಧದಲ್ಲಿ ಮೆಕ್ಸಿಕನ್ ಕರೆನ್ಸಿ ಪೆಸೊ ಬಿಕ್ಕಟ್ಟಿನಿಂದ ಆರಂಭವಾಗಿ 1997 ರ ಏಷ್ಯನ್ ಆರ್ಥಿಕ ಬಿಕ್ಕಟ್ಟು, 1998ರ ರಷ್ಯನ್ ಆರ್ಥಿಕ ಬಿಕ್ಕಟ್ಟು ಅಂತ್ಯದಲ್ಲಿ ವಿಶ್ವಸನೀಯ ಮಾರುಕಟ್ಟೆಗಳಲ್ಲಿ ವ್ಯಾಪಿಸಿದ ಭಾರೀ ಪ್ರಮಾಣದ ಸಾಲದ ಬಿಕ್ಕಟ್ಟುಗಳು ಎದುರಾದಲ್ಲಿ ಪರಿಹರಿಸುವ ಸಂಘಟನೆಯ ರೂಪದಲ್ಲಿ ಪೌಲ್ ಮಾರ್ಟಿನ್ ಮತ್ತು ಅಮೇರಿಕದ ಖಜಾನೆ ಕಾರ್ಯದರ್ಶಿಯಾಗಿದ್ದ ಪಾಲ್ ಸಮ್ಮರ್ಸ್ ಜಿ20 ರೂಪಿಸಿದರು. ಆದರೂ ಜರ್ಮನಿ ಹಾಗೂ ಅಮೇರಿಕ ಈ ಸಂಘಟನೆಗೆ ಸರಿಯಾದ ದಿಕ್ಕು ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿವೆಯೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ.

ಜಿ20 ಆರಂಭದಲ್ಲಿ ಆದ್ಯತೆ ನೀಡಿದ ವಿಷಯಗಳು

ಜಿ20 ಕೂಟವು ಆರಂಭಿಕ ಹಂತದಲ್ಲಿ ಜಾಗತಿಕ ಆರ್ಥಿಕತೆಯ ನಿರ್ವಹಣೆ ಬಗ್ಗೆ ಗಮನ ನೀಡಿತು. 2006ರಲ್ಲಿ ಜಿ–20 ಕೂಟ ಆಯ್ದ ವಿಷಯ "ನಿರ್ಮಾಣ ಮತ್ತು ಸುಸ್ಥಿರ ಸಮೃದ್ಧಿ"ಯಾಗಿತ್ತು. ಸುಸ್ಥಿರ ಬೆಳವಣಿಗೆ ಸಾಧಿಸಲು ದೇಶೀಯ ಸುಧಾರಣೆಗಳು, ಜಾಗತಿಕ ಇಂಧನ ಮತ್ತು ಸರಕು ಮಾರುಕಟ್ಟೆಗಳು, ವಿಶ್ವಬ್ಯಾಂಕ್, ಐಎಂಎಫ್‌ನ ಸುಧಾರಣೆ ಒಳಗೊಂಡಿತ್ತು. 2008ರಲ್ಲಿ ಹಣಕಾಸು ಮಾರುಕಟ್ಟೆಗಳಲ್ಲಿ ಸ್ಪರ್ಧೆ, ಶುದ್ಧ ಇಂಧನ, ಆರ್ಥಿಕ ಅಭಿವೃದ್ಧಿ ಮತ್ತು ಬೆಳವಣಿಗೆಗಳ ಬಗ್ಗೆ ಪ್ರಸ್ತಾಪಿಸಲಾಯಿತು. 2012ರ ಜಿ20 ಪ್ರವಾಸೋದ್ಯಮ ಸಚಿವರ ಶೃಂಗಸಭೆಯಲ್ಲಿ ಪ್ರವಾಸೋದ್ಯಮವು ಉದ್ಯೋಗ ಸೃಷ್ಟಿಯ ಸಾಧನವೆಂದು ನಿರ್ಣಯಿಸಲಾಯಿತು. ಇದರ ಆಧಾರದಲ್ಲಿ ಜಿ20ರ ಘೋಷಣಾ ಪತ್ರದಲ್ಲಿ ಉದ್ಯೋಗ ಸೃಷ್ಟಿ. ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಪ್ರಯಾಣ ಮತ್ತು ಪ್ರವಾಸೋದ್ಯಮದ ಮಹತ್ವ ಗುರುತಿಸುತ್ತೇವೆಂಬ ವಾಕ್ಯವನ್ನು ಸೇರಿಸಲಾಯಿತು. 2016ರ ಜಿ20 ಶೃಂಗದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಬದ್ಧತೆ, ಸಮತೋಲನದ ಬೆಳವಣಿಗೆ ವಿನಾಶದಿಂದ ಗ್ರಹದ ರಕ್ಷಣೆ ಹಾಗೂ ಕಡಿಮೆ ಆದಾಯ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳೊಂದಿಗೆ ಸಹಕಾರ ವೃದ್ಧಿ ಮೊದಲಾದ ವಿಚಾರಗಳಿಗೆ ಮಹತ್ವ ನೀಡಲಾಯಿತು.

ಜಿ20 ಕೂಟದ ಸಾಮರ್ಥ್ಯ

ವಿಶ್ವದ ಮೂರನೇ ಎರಡರಷ್ಟು ಜನಸಂಖ್ಯೆ ಜಿ20 ಕೂಟದಲ್ಲಿದೆ. ಜಾಗತಿಕ ವಾಣಿಜ್ಯ ವ್ಯವಹಾರದಲ್ಲಿ ಶೇ. 75 ರಷ್ಟು ಪಾಲು ಹೊಂದಿದೆ. ಒಟ್ಟು ಜಾಗತಿಕ ಉತ್ಪನ್ನದಲ್ಲಿ ಶೇ. 85 ಪಾಲು ಹಾಗೂ ಜಿ20ರಲ್ಲಿರುವ ದೇಶಗಳು ಪ್ರಪಂಚದ ಒಟ್ಟು ವಿಸ್ತೀರ್ಣದ ಶೇ.60ರಷ್ಟು ಪ್ರದೇಶದಲ್ಲಿವೆ. ಪ್ರಸ್ತುತ ಜಿ20 ಜಗತ್ತಿನ ಬೃಹತ್ ಆರ್ಥಿಕತೆಯುಳ್ಳ ಯುರೋಪಿಯನ್ ಒಕ್ಕೂಟ ಸಹಿತ ಒಟ್ಟು 20 ದೇಶಗಳ ಬೃಹತ್ ಶಕ್ತಿಶಾಲಿ ಅಂತರರಾಷ್ಟ್ರೀಯ ಕೂಟವಾಗಿದೆ. ಈ ಕೂಟವು ಅಭಿವೃದ್ಧಿ ಹಾಗೂ ಅಭಿವೃದ್ಧಿಶೀಲ ದೇಶಗಳಿಂದ ಕೂಡಿದ್ದು, ಜಗತ್ತಿನ ಆರ್ಥಿಕತೆ, ಹಣಕಾಸು ಸ್ಥಿರತೆ, ಹವಾಮಾನ ಬದಲಾವಣೆ, ಸುಧಾರಿತ, ಸುಸ್ಥಿರ ಅಭಿವೃದ್ಧಿ ಮೊದಲಾದ ಕಾರ್ಯಸೂಚಿಗಳ ಮೇಲೆ ಸಮಾಲೋಚನೆ, ಪರಿಹಾರ ಕಂಡುಕೊಳ್ಳುವ ಉದ್ದೇಶ ಹೊಂದಿದೆ.

ಧ್ಯೇಯವಾಕ್ಯಕ್ಕೆ ಅನುಗುಣವಾದ ನಾಯಕತ್ವ ನೀಡಿದ ಭಾರತ

ಜಿ20 ಕೂಟದ 18ನೇ ಶೃಂಗಸಭೆಯಲ್ಲಿ ಪ್ರಧಾನಿ ಮೋದಿಯವರು ವಸುದೈವ ಕುಟುಂಬಕಂ ಧ್ಯೇಯವಾಕ್ಯಕ್ಕೆ ಅನುಗುಣವಾಗಿ ಜಾಗತಿಕ ದಕ್ಷಿಣ ಗೋಳಾರ್ಧಕ್ಕೆ ಭರವಸೆ ನೀಡುತ್ತಾ "ನಿಮ್ಮ ಧ್ವನಿ ಭಾರತದ ಧ್ವನಿ, ನಿಮ್ಮ ಆದ್ಯತೆ ಭಾರತದ ಆದ್ಯತೆ ಗಳೆಂದು ಶೃಂಗದ ಉದ್ದೇಶ ಸ್ಪಷ್ಟಪಡಿಸುತ್ತಾ ಭಾರತವು ಜಾಗತಿಕ ಶಕ್ತಿ ಎನ್ನಿಸುವಲ್ಲಿ ಯಶಸ್ವಿಯಾಯಿತು. ಮಾನವ ಕೇಂದ್ರಿತ ಬೆಳವಣಿಗೆಗೆ ನಾವು ಬದ್ಧರಾಗಬೇಕು. ಜಾಗತಿಕ ಗ್ರಾಮ ಕಲ್ಪನೆಯನ್ನು ಭಾವನಾತ್ಮಕವಾಗಿ ವೈಶ್ವಿಕ ಕುಟುಂಬವಾಗಿ ಮಾಡಲು ಜಗತ್ತು ಸಿದ್ಧಗೊಳ್ಳಬೇಕು. ಈ ಉದ್ದೇಶಕ್ಕಾಗಿ ಜಿಡಿಪಿ ಕೇಂದ್ರಿತ ಅಭಿವೃದ್ಧಿಯ ಬದಲು ಮಾನವ ಕೇಂದ್ರಿತ ಅಭಿವೃದ್ಧಿಗೆ ಆದ್ಯತೆ ನೀಡುವ ಮೂಲಕ ಬಡವರು, ದೀನರು, ದುರ್ಬಲರ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸಬೇಕಿದೆ ಎಂದು ಪ್ರಧಾನಿ ಮೋದಿಯವರು ಕರೆ ನೀಡಿದರು. ಬಲವಿದ್ದವರಿಗೆ ಜಗತ್ತು ಎಂಬ ಪರಿಕಲ್ಪನೆಯಿಂದ ಬಾಂಧವ್ಯದಿಂದ ಜಗತ್ತು" ಎಂಬ ವಿಚಾರವನ್ನು ಸ್ವೀಕರಿಸಬೇಕಾಗಿದೆ ಎಂದು ಮೋದಿಯವರು ವೈಶ್ವಿಕ ಭ್ರಾತೃತ್ವದ ಸಂದೇಶ ನೀಡಿದರು.

ಒಮ್ಮತದ ದಿಲ್ಲಿ ಘೋಷಣೆ


ಪ್ರಸ್ತುತ ಜಗತ್ತು ಎದುರಿಸುತ್ತಿರುವ ಬಹು ಆಯಾಮದ ಬಹು ಕೇಂದ್ರಿತ ಬಿಕ್ಕಟ್ಟುಗಳಿಂದ ಹಿಂದಿನ ಶೃಂಗ ಸಭೆಗಳಲ್ಲಾದಂತೆ ದಿಲ್ಲಿಯಲ್ಲೂ ಸರ್ವಾನುಮತದ ಘೋಷಣೆ ಅಸಾಧ್ಯವೆಂಬ ಭಾವನೆ ಇತ್ತು. ಭಾರತದ ಪ್ರತಿಪಕ್ಷಗಳು ಪ್ರಧಾನಿ ಮೋದಿಯವರನ್ನು ಹಣಿಯಲು ಸಿದ್ಧರಾಗಿದ್ದರು. ಆದರೆ ವಿಪಕ್ಷಗಳ ದುರಾದೃಷ್ಟಕ್ಕೆ ಶೃಂಗದ ಮೊದಲ ದಿನವೇ ದಿಲ್ಲಿ ಘೋಷಣೆ ಸರ್ವಾನುಮತದಿಂದ ಅಂಗೀಕರಿಸಲಾಯಿತು. ಈ ಐತಿಹಾಸಿಕ ಯಶಸ್ಸು ಪ್ರಧಾನಿ ಮೋದಿಯವರ ವರ್ಚಸ್ಸು, ವಿದೇಶಾಂಗ ಸಚಿವ ಎಸ್.ಜೈಶಂಕರ, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಹಾಗೂ ಭಾರತೀಯ ಉನ್ನತಾಧಿಕಾರಿಗಳ ಸತತ ಪರಿಶ್ರಮ, ಜಾಣ್ಮೆಯಿಂದ ಸಾಧ್ಯವಾಯಿತು.

ಜಿ20 ಸದಸ್ಯ ದೇಶಗಳು 34 ಪುಟಗಳು, 83 ಪ್ಯಾರಾಗಳಲ್ಲಿದ್ದ, 73 ಘೋಷಣೆಗಳುಳ್ಳ ದಿಲ್ಲಿ ಘೋಷಣೆಯನ್ನು ಸರ್ವಾನುಮತದಿಂದ ಅಂಗೀಕರಿಸಿದವು. ಘೋಷಣೆಯಲ್ಲಿ ಪ್ರಮುಖವಾಗಿ ಇಂದಿನ ಯುಗವು ಯುದ್ಧದಿಂದ ಕೂಡಿರಬಾರದು ಎಂದು ಪ್ರತಿಪಾದಿಸಲಾಯಿತು. ಈ ಮೂಲಕ ದೇಶಗಳ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವ ಸೇರಿದಂತೆ ಅಂತರ ರಾಷ್ಟ್ರೀಯ ಕಾನೂನು ಮತ್ತು ಶಾಂತಿ ಸ್ಥಿರತೆಯನ್ನು ಕಾಪಾಡುವ ಬಹುಪಕ್ಷೀಯ ವ್ಯವಸ್ಥೆ ಸೇರಿದಂತೆ ಅಂತರರಾಷ್ಟ್ರೀಯ ಕಾನೂನನ್ನು ಎತ್ತಿ ಹಿಡಿಯಲು ಕರೆ ನೀಡಲಾಯಿತು. ಈ ಶೃಂಗ ಸಭೆಯ ಐದು ಪ್ರಮುಖ ಮುಖ್ಯಾಂಶಗಳಲ್ಲಿ ಒಂದನೆಯದಾಗಿ ಆಫ್ರಿಕನ್ ಯೂನಿಯನ್‌ಗೆ ಪ್ರಧಾನಿ ಮೋದಿಯವರ ಮುತುವರ್ಜಿಯಿಂದ ಜಿ20ರ ಶಾಶ್ವತ ಸದಸ್ಯತ್ವ ನೀಡಲಾಯಿತು. ವಿಶ್ವದಲ್ಲಿ ಆರ್ಥಿಕತೆಯ ಲಾಭ ಎಲ್ಲ ದೇಶಗಳಿಗೂ ಸಿಗಬೇಕು. ಈ ಹಿನ್ನೆಲೆಯಲ್ಲಿ ಬಡತನದಿಂದ ಬಳಲುತ್ತಿರುವ 1.466 ಬಿಲಿಯನ್ ಜನಸಂಖ್ಯೆ ಇರುವ ಅಪಾರ, ಅತ್ಯಮೂಲ್ಯ ಪ್ರಾಕೃತಿಕ ಸಂಪತ್ತಿರುವ ಆಫ್ರಿಕಾ ಖಂಡದ 54 ದೇಶಗಳ ಆಫ್ರಿಕನ್ ಒಕ್ಕೂಟಕ್ಕೆ ಸದಸ್ಯತ್ವ ನೀಡಲಾಯಿತು. ಚೀನಾದ ಬೆಲ್ಟ್ ಅಂಡ್ ರೋಡ್ ಇನಿಷಿಯೇಟಿವ್‌ಗೆ ಪ್ರತಿಯಾಗಿ ಭಾರತದ ಆರ್ಥಿಕ ದೃಷ್ಟಿಯಿಂದ ಅತ್ಯಂತ ಮಹತ್ವದ ಭಾರತ–ಮಧ್ಯ ಪ್ರಾಚ್ಯ–ಯುರೋಪ್ ಆರ್ಥಿಕ ಕಾರಿಡಾರ್ ರಚನೆ ಕುರಿತ ತಿಳುವಳಿಕೆ ಪತ್ರಕ್ಕೆ ಭಾರತ, ಅಮೇರಿಕ, ಯುಎಇ, ಸೌದಿ ಅರೇಬಿಯಾ, ಫ್ರಾನ್ಸ್, ಜರ್ಮನಿ, ಇಟಲಿ ಮತ್ತು ಇಯು ಸಹಿ ಹಾಕಿದವು. ಜೋ ಬೈಡೆನ್ ಈ ಒಪ್ಪಂದವನ್ನು ಗೇಮ್ ಚೇಂಜಿಂಗ್ ಎಂದು ಬಣ್ಣಿಸಿದರು. ಹವಾಮಾನ ಬದಲಾವಣೆ ನಿಭಾಯಿಸಲು ಅಭಿವೃದ್ಧಿಶೀಲ ದೇಶಗಳಿಗೆ ಸಹಾಯ ಮಾಡಲು ಗ್ರೀನ್ ಕ್ಲೈಮೇಟ್ ಫಂಡ್‌ಗೆ (ಜಿಸಿಎಫ್) 2 ಬಿಲಿಯನ್ ಡಾಲರ್ ನೀಡುವುದಾಗಿ ಬ್ರಿಟನ್ ಪ್ರಧಾನಿ ರಿಷಿ ಸುನಾಕ್ ಹೇಳಿದರು. ಐದನೇದಾಗಿ ಉಕ್ರೇನ್ ಮೇಲಿನ ರಷ್ಯಾ ದಾಳಿಗೆ ಸಂಬಂಧಿಸಿದಂತೆ ರಷ್ಯಾವನ್ನು ನೇರ ಟೀಕೆ ಮಾಡುವುದನ್ನು ನಿಲ್ಲಿಸುವ ಜಿ20 ರಾಷ್ಟ್ರಗಳ ಒಮ್ಮತದ ಘೋಷಣೆಯನ್ನು ರಷ್ಯಾ ಶ್ಲಾಘಿಸಿದೆ. ಈ ವಿಚಾರದಲ್ಲಿ ಭಾರತ ತೋರಿದ ದೃಢತೆಯನ್ನು ಮುಕ್ತಕಂಠದಿಂದ ರಷ್ಯಾ ಪ್ರಶಂಸಿಸಿದೆ.

ಚೀನಾ ಚಕಾರವೆತ್ತದಂತೆ, ಮಾಸ್ಕೋಗೆ ನೋವಾಗದಂತೆ, ಅಮೇರಿಕೆಗೆ ಬೇಸರವಾಗದಂತೆ, ಯುರೋಪಿಯನ್ ದೇಶಗಳಿಗೆ ಸಮಾಧಾನವಾಗುವಂತೆ ಹಾಗೂ ಆಫ್ರಿಕನ್ ದೇಶಗಳಿಗೆ ಸಂತೋಷವಾಗುವ ರೀತಿಯಲ್ಲಿ ಸರ್ವಾನುಮತದ ಘೋಷಣೆಯಾಗುವಲ್ಲಿ ಪ್ರಧಾನಿ ಮೋದಿಯವರ ಮುತ್ಸದ್ದಿತನ ಭಾರತೀಯರ ರಾಜತಂತ್ರಜ್ಞರ ಜಾಣ್ಮೆಯನ್ನು ಕಂಡು ಜಗತ್ತು ಮತ್ತು ಮೋದಿ ವಿರೋಧಿಗಳು ನಿಬ್ಬೆರಗಾಗಿರುವುದು ಈ ಬಾರಿಯ ಶೃಂಗ ಸಭೆಯ ವಿಶೇಷವಾಗಿದೆ. ಆಸ್ಟ್ರೇಲಿಯಾ ಪ್ರಧಾನಿ ಆಲ್ಬನೀಸ್ ಹಿಂದೆ ಹೇಳಿದಂತೆ ಈ ಶೃಂಗದಿಂದ ಪ್ರಧಾನಿ ಮೋದಿಯವರು ನಿಜವಾಗಿ ಜಗತ್ತಿನ ಬಾಸ್ ಆಗಿದ್ದಾರೆ.

ಕಾವೇರಿ ನೀರು ನಿರ್ವಹಣಾ ಮಂಡಳಿ: ಸುಪ್ರೀಂಕೋರ್ಟ್ ಮುಂದೆ ಮರುಪರಿಶೀಲನಾ ಅರ್ಜಿ

ನಿವೃತ್ತ ನ್ಯಾಯಮೂರ್ತಿಗಳೊಂದಿಗೆ ಸಭೆ ಬಳಿಕ ಮುಖ್ಯಮಂತ್ರಿ ಮಾಹಿತಿ



ಬೆಂಗಳೂರು, ಸೆ.29– 'ನಮ್ಮ ಬಳಿ ನೀರು ಇಲ್ಲ, ನೀರು ಬಿಡಲು ಸಾಧ್ಯವಿಲ್ಲ' ಎಂದು ಕಾವೇರಿ ನೀರು ನಿರ್ವಹಣಾ ಮಂಡಳಿ ಹಾಗೂ ಸುಪ್ರೀಂ ಕೋರ್ಟ್‌ಗೆ ನಾಳೆಯೇ ಮರುಪರಿಶೀಲನಾ ಅರ್ಜಿ ಸಲ್ಲಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಶಾಂತಿಯುತ ಬಂದ್ ಆಚರಿಸಿದ್ದಕ್ಕೆ ಅಭಿನಂದನೆ



ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು, ಅಡ್ವೋಕೇಟ್ ಜನರಲ್ ಅವರೊಂದಿಗೆ ಸಭೆ ನಡೆಸಿದ ನಂತರ ಗೃಹ ಕಚೇರಿ ಕೃಷ್ಣಾದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು, ಮಾಜಿ ಅಡ್ವೋಕೇಟ್ ಜನರಲ್‌ಗಳು ಸಭೆಯಲ್ಲಿ ಭಾಗವಹಿಸಿದ್ದರು. ಅವರ ಅನುಭವದ ಆಧಾರದ ಮೇಲೆ ಕೆಲವು ಅಭಿಪ್ರಾಯ, ಸಲಹೆಗಳನ್ನು ನೀಡಿದ್ದಾರೆ. ಅವರ ಸಲಹೆಗಳನ್ನು ಪರಿಗಣಿಸಿ ಮುಂದಿನ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುವುದು ಎಂದರು. ಇದೇ ವೇಳೆ ರಾಜ್ಯದಲ್ಲಿ ಶಾಂತಿಯುತವಾಗಿ ಬಂದ್ ನಡೆದಿದೆ. ಇದಕ್ಕೆ ಸಹಕರಿಸಿದ ಸಾರ್ವಜನಿಕರು, ಸಂಘ ಸಂಸ್ಥೆಗಳಿಗೆ ಹಾಗೂ ಎಲ್ಲಿಯೂ ಅಹಿತಕರ ಘಟನೆ ನಡೆಯದಂತೆ ಕಾನೂನು ಸುವ್ಯವಸ್ಥೆ ಕಾಪಾಡಿದ ಅಧಿಕಾರಿಗಳಿಗೆ ಅಭಿನಂದನೆ ತಿಳಿಸಿದರು.

ಪರಿಣಿತರ ಸಲಹಾ ಸಮಿತಿ: ಮುಖ್ಯವಾಗಿ ರಾಜ್ಯದ ನೀರಾವರಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪರಿಣಿತರ ಸಲಹಾ ಸಮಿತಿಯನ್ನು ರಚಿಸಿ, ಡಾಟಾ ಸಂಗ್ರಹ, ಸಲಹೆ ನೀಡುವ ಕಾರ್ಯವನ್ನು ಮಾಡಬೇಕು. ಅಂತಾರಾಜ್ಯ ಜಲವಿವಾದಗಳ ಬಗ್ಗೆ ಸರ್ಕಾರಕ್ಕೆ ಸಲಹೆ ಸೂಚನೆ, ಕಾನೂನು ತಂಡಕ್ಕೆ ಮಾಹಿತಿ ನೀಡುವ ನಿಟ್ಟಿನಲ್ಲೂ ಸಮಿತಿ ಅಗತ್ಯ ಎನ್ನುವ ಸಲಹೆ ಬಂದಿದೆ. ಇದರಂತೆ ಕ್ರಮ ವಹಿಸಲಾಗುವುದು. ತಮಿಳುನಾಡಿಗೆ 3000 ಕ್ಯೂಸೆಕ್ ನೀರು ಬಿಡುವ ಆದೇಶದ ಬಗ್ಗೆ ಎರಡೂ ಸಮಿತಿಗಳ ಮುಂದೆ ನಮ್ಮಲ್ಲಿ ನೀರು ಇಲ್ಲ ಹಾಗಾಗಿ ನೀರು ಬಿಡಲು ಸಾಧ್ಯವಿಲ್ಲ ಎಂದು ವಾದ ಮಂಡಿಸಲಾಗಿದೆ. ಆದರೆ ಹಳೇ ಬಾಕಿ ಸರಿದೂಗಿಸಬೇಕು ಎಂದು 3000 ಕ್ಯೂಸೆಕ್ ನೀಡಲು ಸೂಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಿರ್ವಹಣಾ ಮಂಡಳಿ ಹಾಗೂ ಸುಪ್ರೀಂಕೋರ್ಟ್ ಮುಂದೆ ಮರು ಪರಿಶೀಲನಾ ಅರ್ಜಿ ಹಾಕುವಂತೆಯೂ ಸೂಚಿಸಿದ್ದಾರೆ ಎಂದರು.

❝ ಸಂದರ್ಭ ಬಂದರೆ ವಿಶೇಷ ಅಧಿವೇಶನ ಕರೆಯಲಾಗುವುದು. ಉದ್ದೇಶಪೂರ್ವಕವಾಗಿ ಆದೇಶ ಪಾಲನೆಯಾಗದಿದ್ದಾಗ ಮಾತ್ರ ನ್ಯಾಯಾಂಗ ನಿಂದನೆಯಾಗುತ್ತದೆ.

– ಮುಖ್ಯಮಂತ್ರಿ ಸಿದ್ದರಾಮಯ್ಯ

ಮೇಕೆದಾಟು ಯೋಜನೆಗೆ ಒತ್ತಾಯ: ಮೇಕೆದಾಟು ಯೋಜನೆಯ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಪ್ರಸ್ತಾಪ ಮಾಡಬೇಕು. ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೆ ತೊಂದರೆ ಇಲ್ಲ. ಹಾಗಾಗಿ ಇದನ್ನು ತೀವ್ರವಾಗಿ ಮಂಡಿಸಬೇಕು ಎಂದು ಸಲಹೆ ನೀಡಿದ್ದಾರೆ. ಮೇಕೆದಾಟು ಬ್ಯಾಲೆನ್ಸಿಂಗ್ ಜಲಾಶಯವಾಗಿ 67 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ. ವಿದ್ಯುತ್ ಹಾಗೂ ಕುಡಿಯುವ ನೀರಿಗೆ ಅದನ್ನು ಬಳಸಲಾಗುವುದು. ಸಂಕಷ್ಟ ಬಂದಾಗ ತಮಿಳುನಾಡಿಗೆ ನೀರು ಬಿಡಬಹುದು ಎಂದು ಸಲಹೆ ನೀಡಿದ್ದಾರೆ ಎಂದರು.

ಪ್ರತಿಕಾಗೋಷ್ಠಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ. ಜಿ.ಪರಮೇಶ್ವರ್, ಕಾನೂನು ಸಚಿವ ಹೆಚ್.ಕೆ.ಪಾಟೀಲ್, ಕೃಷಿ ಸಚಿವ ಚೆಲುವರಾಯಸ್ವಾಮಿ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದ ರಾಜು, ರಾಜಕೀಯ ಸಲಹೆಗಾರರಾದ ನಸೀರ್ ಅಹಮದ್, ಕಾನೂನು ಸಲಹೆಗಾರರಾದ ಪೊನ್ನಣ್ಣ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಂಘ-ಸಂಸ್ಥೆಗಳು, ಉದ್ಯಮಿಗಳು, ನಿವಾಸಿಗಳ ಅಭೂತ ಪೂರ್ವ ಬೆಂಬಲ


ಕಾವೇರಿ ಕ್ರಿಯಾ ಸಮಿತಿ ವತಿಯಿಂದ ನಗರದ ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗ ಪ್ರತಿಭಟನೆ


ಬಿಜೆಪಿ ಸೇರಿದಂತೆ ವಿವಿಧ ಸಂಘಟನೆಗಳಿಂದ ಬೈಕ್ ರ್‍ಯಾಲಿ


ಮೈಸೂರು ಡಿಸ್ಟ್ರಿಕ್ಟ್ ಫೋಟೋಗ್ರಾಫರ್ಸ್ ಅಂಡ್ ವಿಡಿಯೋಗ್ರಾಫರ್ಸ್ ಅಸೋಸಿಯೇಷನ್‌ನ ಭಾಗಿ

ಮೈಸೂರು, ಸೆ.29(ಜಿಎ)-ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ವಿರೋಧಿಸಿ ವಿವಿಧ ಸಂಘಟನೆಗಳು ಶುಕ್ರವಾರ ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ನಗರದಾದ್ಯಂತ ಸಾರ್ವಜನಿಕರು ಮತ್ತು ವಿವಿಧ ಸಂಘ- ಸಂಸ್ಥೆಗಳಿಂದ ಪ್ರತಿಭಟನೆ, ಬೈಕ್ ರ್‍ಯಾಲಿ ಮೂಲಕ ಒಗ್ಗಟ್ಟು ಪ್ರದರ್ಶಿಸಿ, ಕರ್ನಾಟಕ ಬಂದ್‌ಗೆ ಅಭೂತ ಪೂರ್ವ ಬೆಂಬಲ ನೀಡಿದವು.

ಮೈಸೂರಲ್ಲಿ ಬೆಳಗ್ಗೆ 6 ಗಂಟೆಯಿಂದಲೇ ರಸ್ತೆಗಿಳಿದ ರೈತ ಮುಖಂಡರು, ಕನ್ನಡ ಪರ ಸಂಘಟನೆಗಳು ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳು ನಗರದ ನ್ಯಾಯಾಲಯದ ಮುಂಭಾಗ, ಗ್ರಾಮಾಂತರ ಬಸ್ ನಿಲ್ದಾಣ, ಅಗ್ರಹಾರ, ಜಿಲ್ಲಾ ಪಂಚಾಯಿತ್ ಕಚೇರಿ ಮುಂಭಾಗ, ಗಾಂಧಿ ಚೌಕ ಮತ್ತು ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಸೇರಿದಂತೆ ನಗರದ ನಾನಾ ಸ್ಥಳಗಳಲ್ಲಿ ಪ್ರತಿಭಟನೆ ನಡೆಸಿದವು.

ಕಾವೇರಿ ಕ್ರಿಯಾ ಸಮಿತಿ : ರೈತ ಮುಖಂಡರು, ಕನ್ನಡಪರ ಸಂಘಟನೆಗಳು ಕಾವೇರಿ ಕ್ರಿಯಾ ಸಮಿತಿ ಹೆಸರಿನಲ್ಲಿ ಒಗ್ಗೂಡಿ ನಗರದ ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗ ಬೆಳ್ಳಂಬೆಳಗ್ಗೆ ಪ್ರತಿಭಟನೆಗಿಳಿದು, ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು. ಈ ವೇಳೆ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಉಪಾಧ್ಯಕ್ಷ ಸುರೇಶ್ ಗೌಡ, ಕನ್ನಡ ಹೋರಾಟಗಾರ ಮೂಗೂರು ನಂಜುಂಡ ಸ್ವಾಮಿ, ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ರೈತ ಮುಖಂಡರಾದ ಹೊಸಕೋಟೆ ಬಸವ ರಾಜು, ಮರಂಕಯ್ಯ, ಕರ್ನಾಟಕ ಕಾವಲು ಪಡೆಯ ಮೋಹನ್ ಕುಮಾರ್ ಗೌಡ, ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ ಸೇರಿ ವಿವಿಧ ಕನ್ನಡ ಪರ ಸಂಘಟನೆಯ ಮುಖಂಡರು ಪಾಲ್ಗೊಂಡಿದ್ದರು.

ಖಾಲಿ ಚೊಂಬು ಪ್ರತಿಭಟನೆ: ನಗರದ ಅಗ್ರಹಾರದ ವೃತ್ತದಲ್ಲಿ ಕರ್ನಾಟಕ ನ್ಯಾಯಪರ ವೇದಿಕೆಯ ಪದಾಧಿಕಾರಿಗಳೂ ಖಾಲಿ ಚೊಂಬುಗಳನ್ನು ಹಿಡಿದು ತಮಿಳುನಾಡು ಮತ್ತು ರಾಜ್ಯ ಸರ್ಕಾರದ ವಿರುದ್ಧ ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ವೇದಿಕೆ ರಾಜ್ಯಾಧ್ಯಕ್ಷ ಗಿರೀಶ್ ಶಿವಾರ್ಚಕ ಭಜರಂಗಿ ಸಿ ಉಮೇಶ್, ಶರತ್, ಶಿವು, ಶಿವಕುಮಾರ್, ಕೃಷ್ಣಮೂರ್ತಿ, ಪುಷ್ಪಲತ, ದೀಪ, ಶಾಂತಮ್ಮ ಮತ್ತು ಕಸ್ತೂರಿ ಪಾಲ್ಗೊಂಡಿದ್ದರು.


ಹೋಟೆಲ್ ಮಾಲೀಕರ ಸಂಘದ ಮನವಿ


ಮೈಸೂರು ವಿಜಯನಗರ ನಿವಾಸಿಗಳ ಬೆಂಬಲ

ಕಣ್ಣಿಗೆ ಕಪ್ಪು ಪಟ್ಟಿ : ನಗರದ ನ್ಯಾಯಾಲಯದ ಮುಂಭಾಗವಿರುವ ಗಾಂಧಿ ಪುತ್ಥಳಿ ಬಳಿ ಕನ್ನಡಾಂಬೆ ರಕ್ಷಣಾ ವೇದಿಕೆ ಮತ್ತು ಮೈಸೂರು ನಾಗರಿಕರ ಸಾಂಸ್ಕೃತಿಕ ವೇದಿಕೆ ವತಿಯಿಂದ ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ತಮಿಳುನಾಡು ಮತ್ತು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡಾಂಬೆ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ರಾಜಶೇಖರ್, ಮೈಸೂರು ನಾಗರಿಕರ ಸಾಂಸ್ಕೃತಿಕ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೆ.ಎಸ್.ನಾಗರಾಜು ಮತ್ತು ಚಂದ್ರಶೇಖರ್ ಭಾಗವಹಿಸಿದ್ದರು.

ಬೈಕ್ ರ್‍ಯಾಲಿಗಳು : ಬಿಜೆಪಿ ನಗರಾಧ್ಯಕ್ಷರೂ ಆದ ಶಾಸಕ ಟಿ.ಎಸ್.ಶ್ರೀವತ್ಸ ನೇತೃತ್ವದಲ್ಲಿ ನಗರ ಬಿಜೆಪಿಯ ಪದಾಧಿಕಾರಿಗಳು ನಗರದ ಬಿಜೆಪಿ ಕಚೇರಿಯಿಂದ ಬೈಕ್ ರ್‍ಯಾಲಿ ಆರಂಭಿಸಿ, ವಿವಿಧ ಪ್ರಮುಖ ರಸ್ತೆಗಳಲ್ಲಿ ಸಾಗಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯ ಕಬ್ಬು ಬೆಳೆಗಾರರ ಸಂಘ ಮತ್ತು ಆಮ್ ಆದ್ಮಿ ಪಕ್ಷದ ಮುಖಂಡರು ನಗರದ ಗನ್ ಹೌಸ್ ವೃತ್ತದಿಂದ ಬೈಕ್ ರ್‍ಯಾಲಿ ಹೊರಟು ನಗರದಾದ್ಯಂತ ಸಂಚರಿಸಿ, ನಂತರ ಕಬಿನಿ ಡ್ಯಾಂ ಮುತ್ತಿಗೆ ಹಾಕಲು ತೆರಳಿದರು. ಅನ್ವೇಷಣಾ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು ಸಹ ಬೈಕ್ ರ್‍ಯಾಲಿ ನಡೆಸುವ ಮೂಲಕ ಕರ್ನಾಟಕ ಬಂದ್‌ನಲ್ಲಿ ಪಾಲ್ಗೊಂಡಿದರು.

ಸ್ಟಾಲಿನ್ ಪ್ರತಿಕೃತಿ ಮುಂದೆ ಆಕ್ರೋಶ : ನಗರದ ಅಗ್ರಹಾರ ವೃತ್ತದಲ್ಲಿ ಕನ್ನಡ ವೇದಿಕೆ ಸಂಘಟನೆಯೂ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಪ್ರತಿಕೃತಿ ರೂಪಿಸಿ, ಸ್ಟಾಲಿನ್ ವಿರುದ್ಧ, ಕಾವೇರಿ ನಮ್ಮದು ಘೋಷಣೆ ಕೂಗಿ ಯಾವುದೇ ಕಾರಣಕ್ಕೂ ನೀರು ಹರಿಸದಂತೆ ಒತ್ತಾಯಿಸಿದರು. ಈ ವೇಳೆ ವೇದಿಕೆ ಅಧ್ಯಕ್ಷ ಬಾಲಕೃಷ್ಣ, ನಾಲಾಬೀದಿ ರವಿ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಹೋಟೆಲ್ ಮಾಲೀಕರ ಮನವಿ : ನಗರದ ಅರಮನೆ ಮುಂಭಾಗವಿರುವ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಜಮಾಯಿಸಿದ ಮೈಸೂರು ಹೋಟೆಲ್ ಮಾಲೀಕರ ಸಂಘದ ಸದಸ್ಯರು ಕರ್ನಾಟಕ ಬಂದ್‌ಗೆ ಬೆಂಬಲ ಸೂಚಿಸಿ, ನಂತರ ನಗರದ ಸಿದ್ಧಾರ್ಥ ಬಡಾವಣೆಯಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ರಾಜ್ಯದ ಜನತೆ ಹಿತದೃಷ್ಟಿಯಿಂದ ತಮಿಳು ನಾಡಿಗೆ ಹರಿಸುತ್ತಿರುವ ಕಾವೇರಿ ನೀರನ್ನು ತಕ್ಷಣ ನಿಲ್ಲಿಸುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ನಿವಾಸಿಗಳ ಬೆಂಬಲ : ಇಂದಿನ ಕರ್ನಾಟಕ ಬಂದ್‌ಗೆ ವಿವಿಧ ಸಂಘ-ಸಂಸ್ಥೆಗಳಂತೆ ನಗರದ ನಿವಾಸಿಗಳು ಸಾಥ್ ನೀಡಿದ್ದು, ಅದರಂತೆ ವಿಜಯನಗರ ಒಂದನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘವೂ ಶಾಂತಿಯುತವಾಗಿ ಪ್ರತಿಭಟನೆ ನಡೆಸಿ, ಕಾವೇರಿ ವಿಚಾರವಾಗಿ ಕೇಂದ್ರ ಸರ್ಕಾರವು ಮಧ್ಯಸ್ಥಿಕೆ ವಹಿಸಿ ಕರ್ನಾಟಕಕ್ಕೆ ನ್ಯಾಯ ದೊರಕಿಸಿಕೊಡಬೇಕು ಹಾಗೂ ಕರ್ನಾಟಕ ಸರ್ಕಾರವು ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು. ಕರ್ನಾಟಕದ ಜನರಿಗೆ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದರು. ಈ ವೇಳೆ ಪಾಲಿಕೆ ಸದಸ್ಯ ಸುಬ್ಬಯ್ಯ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಎ.ರವಿ ಸೇರಿದಂತೆ ವಿಜಯನಗರ ನಿವಾಸಿಗಳು ಪಾಲ್ಗೊಂಡಿದ್ದರು.

ಬ್ಯಾಂಕ್ ಸಿಬ್ಬಂದಿಗೆ ಮನವಿ : ಕರ್ನಾಟಕ ಬಂದ್‌ಗೆ ನಗರದ ಬಹುತೇಕ ಎಲ್ಲಾ ವ್ಯಾಪಾರಿಗಳು ಸಾಥ್ ನೀಡಿದ್ದರು.ಆದರೆ, ಎಸ್‌ಬಿಐ, ಐಡಿಎಫ್‌ಸಿ ಮತ್ತು ಐಸಿಐಸಿಐ ಬ್ಯಾಂಕ್‌ಗಳು ಎಂದಿನಂತೆ ಕಾರ್ಯನಿರ್ವಹಿಸುತ್ತಿದ್ದವು. ಕಾವೇರಿ ಕ್ರಿಯಾ ಸಮಿತಿ ಮತ್ತು ಕನ್ನಡ ಪರ ಸಂಘಟನೆಗಳು ಕಾರ್ಯನಿರ್ವಹಿಸುತ್ತಿದ್ದ ಬ್ಯಾಂಕ್‌ಗಳಿಗೆ ತೆರಳಿ ಕಾವೇರಿ ನೀರು ಎಲ್ಲರಿಗೂ ಅವಶ್ಯವಿದ್ದು, ನೀವು ಬಂದ್‌ಗೆ ಸಹಕಾರ ನೀಡಿ ಎಂದು ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ನಗರದ ಅಗ್ರಹಾರದಲ್ಲಿರುವ ಎಸ್‌ಬಿಐ ಬ್ಯಾಂಕ್, ದಿವಾನ್ಸ್ ರಸ್ತೆ ಮತ್ತು ಕಾಳಿದಾಸ ರಸ್ತೆಯಲ್ಲಿ ರುವ ಐಸಿಐಸಿಐ ಬ್ಯಾಂಕ್ ಹಾಗೂ ಅರಸು ರಸ್ತೆಯಲ್ಲಿರುವ ಐಡಿಎಫ್‌ಸಿ ಸೇರಿದಂತೆ ನಗರದ ಎಲ್ಲಾ ಬ್ಯಾಂಕ್ ಸಿಬ್ಬಂದಿ ನಂತರ ಬಂದ್‌ಗೆ ಸಹಕಾರ ನೀಡಿದರು.


ಕರ್ನಾಟಕ ನ್ಯಾಯಪರ ವೇದಿಕೆ ಸದಸ್ಯರು ಖಾಲಿ ಚೊಂಬು ಹಿಡಿದು ಪ್ರತಿಭಟಿಸಿದರು.


ಸ್ಟಾಲಿನ್ ಪ್ರತಿಕೃತಿ ಮುಂದಿಟ್ಟುಕೊಂಡು ಕನ್ನಡ ವೇದಿಕೆ ಸಂಘಟನೆ ಆಕ್ರೋಶ


ಕನ್ನಡಾಂಬೆ ರಕ್ಷಣಾ ವೇದಿಕೆ ಮತ್ತು ಮೈಸೂರು ನಾಗರಿಕರ ಸಾಂಸ್ಕೃತಿಕ ವೇದಿಕೆಯಿಂದ ಬಂದ್‌ಗೆ ಬೆಂಬಲ



ಕನ್ನಡ ಪರ ಸಂಘಟನೆಗಳ ಮನವಿಗೆ ಬ್ಯಾಂಕ್ ಬಂದ್



ಆರ್ಯವೈಶ್ಯ ರಾಜಕೀಯ ಸಮಿತಿ ವತಿಯಿಂದ ಪ್ರತಿಭಟನೆ

ಜೈನ ಸಮುದಾಯದಿಂದ ಕಾವೇರಿ ಪರ ಹೋರಾಟ

ಪ್ರತಿಭಟನಾ ರ್‍ಯಾಲಿ ಮೂಲಕ ಡಿಸಿ ಕಚೇರಿಗೆ ಮನವಿ ಸಲ್ಲಿಕೆ



ಮೈಸೂರು, ಸೆ.29(ಎಸ್‌ಬಿಡಿ)- ಮೈಸೂರಿನಲ್ಲಿ ಜೈನ ಸಮುದಾಯದ ನೂರಾರು ಮಂದಿ ಬೃಹತ್ ಪ್ರತಿಭಟನಾ ರ್‍ಯಾಲಿ ಮೂಲಕ ಕರ್ನಾಟಕ ಬಂದ್‌ಗೆ ಬೆಂಬಲ ನೀಡಿದರು.

ಕರ್ನಾಟಕ ರಾಜಸ್ತಾನಿ ವ್ಯಾಪಾರಿಗಳ ಸಂಘ ಹಾಗೂ ಮೈಸೂರು ಶ್ರೀ ಜೈನ ಸಮಾಜದ ಸಹಯೋಗದಲ್ಲಿ ನಗರದ ಗಾಂಧಿ ವೃತ್ತದಲ್ಲಿ ನೂರಾರು ಮಂದಿ ಒಗ್ಗೂಡಿ, 'ಕಾವೇರಿ ನಮ್ಮದು, ರಕ್ತ ಕೊಟ್ಟೇವು ನೀರು ಬಿಡೆವು, ಕಾವೇರಿ ನಮ್ಮ ಜೀವನಾಡಿ' ಘೋಷಣೆ ಮೊಳಗಿಸಿದರು. ಕರ್ನಾಟಕ ಬಾವುಟ ಹಿಡಿದು, ತಮಿಳುನಾಡು ಸಿಎಂ ಸ್ಟಾಲಿನ್ ಫೋಟೋಗೆ ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಸಿದ್ಧಾರ್ಥನಗರದ ಜಿಲ್ಲಾ ಮಟ್ಟದ ಅಧಿಕಾರಿಗಳ ಕಚೇರಿ ಸಂಕೀರ್ಣ(ನೂತನ ಡಿಸಿ ಕಚೇರಿ)ದವರೆಗೆ ಜಾಥಾ ನಡೆಸಿ ಮನವಿ ಸಲ್ಲಿಸುವ ಮೂಲಕ ತಮಿಳುನಾಡಿಗೆ ನೀರು ಹರಿಸದಂತೆ ಆಗ್ರಹಿಸಿದರು. ನಮಗೆ ಬದುಕು ನೀಡಿರುವ ಕರ್ನಾಟಕದ ನೆಲ, ಜಲ, ಭಾಷೆಗಾಗಿ ಹೋರಾಟಕ್ಕೆ ಸದಾ ಸಜ್ಜಾಗಿರುತ್ತೇವೆ ಎಂಬ ಸಂದೇಶ ಸಾರಿದರು.

ಭೆರುಮಾಳ್, ಶಾಂತಿಲಾಲ್, ಪ್ರಕಾಶ್ ಚಂದ್, ಬುದ್ಮಲ್, ಪೃಥ್ವಿಸಿಂಗ್ ಸೇರಿದಂತೆ ವಿವಿಧ ಜೈನ ಸಂಘದ ಪದಾಧಿಕಾರಿಗಳು ಹಾಗೂ ಸಮುದಾಯದ ಸಾವಿರಾರು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು ಎಂದು ಜೈನ ಸಮಾಜದ ಮುಖಂಡರೊಬ್ಬರು ತಿಳಿಸಿದರು.

ವ್ಯಕ್ತಿಯ ಹೊಟ್ಟೆಯಲ್ಲಿತ್ತು 100 ವಸ್ತುಗಳು!

ಚಂಡೀಗಢ: ಹೊಟ್ಟೆನೋವು ಎಂದು ಆಸ್ಪತ್ರೆಗೆ ದಾಖಲಾಗಿದ್ದ ರೋಗಿಗೆ ಶಸ್ತ್ರಚಿಕಿತ್ಸೆ ನಡೆಸಿದ್ದ ವೈದ್ಯರೇ ಆತನ ಹೊಟ್ಟೆಯಲ್ಲಿದ್ದ ವಸ್ತುಗಳನ್ನು ನೋಡಿ ಹೌಹಾರಿದ್ದು, ಆತನ ಹೊಟ್ಟೆಯಲ್ಲಿ ರಾಖಿ, ಇಯರ್ ಫೋನ್, ಕೀ ಸೇರಿ 100 ವಸ್ತುಗಳು ಪತ್ತೆಯಾಗಿವೆ.

ಪಂಜಾಬ್‌ನ ಮೊಗಾದ 40 ವರ್ಷದ ವ್ಯಕ್ತಿಯೊಬ್ಬರು ಕಳೆದ ಎರಡು ದಿನಗಳಿಂದ ತುಂಬಾ ಹೊಟ್ಟೆನೋವು ಬರುತ್ತಿದೆ ಎಂದು ವೈದ್ಯರ ಬಳಿಗೆ ಬಂದಿದ್ದರು, ವೈದ್ಯರು ಎಕ್ಸ್-ರೇ ಮಾಡಿ ನೋಡಿದಾಗ ಅವರ ಹೊಟ್ಟೆಯಲ್ಲಿ ಹಲವು ವಸ್ತುಗಳಿರುವುದು ಕಂಡುಬಂದಿದೆ. ಹಾಗಾಗಿ ಕೂಡಲೇ ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಸುಮಾರು ಮೂರು ಗಂಟೆಗಳ ಶಸ್ತ್ರ ಚಿಕಿತ್ಸೆ ಬಳಿಕ ವೈದ್ಯರಿಗೆ ಕಾದಿತ್ತು ಅಚ್ಚರಿ, ರಾಖಿ, ಇಯರ್‌ಫೋನ್, ಬೀಗ, ಕೀ ಸೇರಿ ವ್ಯಕ್ತಿಯ ಹೊಟ್ಟೆಯಿಂದ ಬರೋಬ್ಬರಿ 100ಕ್ಕೂ ಅಧಿಕ ವಸ್ತುಗಳನ್ನು ವೈದ್ಯರು ಹೊರತೆಗೆದಿದ್ದರು. ಈ ಬಗ್ಗೆ ಮೆಡಿಸಿಟಿ ನಿರ್ದೇಶಕ ಡಾ ಅಜ್ಮೀರ್ ಕಲ್ರಾ ಅವರು ಮಾತನಾಡಿ, ತಮ್ಮ ವೃತ್ತಿಜೀವನದಲ್ಲಿ ಇದು ಮೊದಲ ಪ್ರಕರಣವಾಗಿದೆ, ಆದರೆ ವೈದ್ಯರು ಈ ಎಲ್ಲಾ ವಸ್ತುಗಳನ್ನು ಯಶಸ್ವಿಯಾಗಿ ತೆಗೆದುಹಾಕಿದ್ದಾರೆ ಎಂದಿದ್ದಾರೆ.

ಆದರೆ, ಈ ವಸ್ತುಗಳು ಹೊಟ್ಟೆಯಲ್ಲಿ ಬಹಳ ಸಮಯ ಇದ್ದ ಕಾರಣ ರೋಗಿಯ ಸ್ಥಿತಿ ಇನ್ನೂ ಸ್ಥಿರವಾಗಿಲ್ಲ ಎಂದು ಅವರು ಹೇಳಿದರು. ಇದೇ ವಿಚಾರವಾಗಿ ರೋಗಲಕ್ಷಣಗಳು ಉಲ್ಬಣಗೊಂಡ ನಂತರ ಮತ್ತು ಅವರು ನಿದ್ರಿಸಲು ಸಹ ಸಾಧ್ಯವಾಗಲಿಲ್ಲ, ನಾವು ವೈದ್ಯರನ್ನು ಸಂಪರ್ಕಿಸಿದ್ದೇವೆ ಎಂದು ಕುಟುಂಬದವರು ಹೇಳಿದ್ದಾರೆ.

ಸಾರಿಗೆ ಬಸ್ ಸಂಚಾರ ಸ್ಥಗಿತ: ಪ್ರಯಾಣಿಕರ ಪರದಾಟ

● ಮಧ್ಯಾಹ್ನ 3.15ರಿಂದ ಬಸ್ ಸಂಚಾರ ಪುನರಾರಂಭ ● ಭಣಗುಟ್ಟಿದ ಬಸ್ ನಿಲ್ದಾಣಗಳು; ಡಿಪೋದಿಂದ ಹೊರ ಬರದ ಬಸ್‌ಗಳು





ಮೈಸೂರು,ಸೆ.29(ಎಂಟಿವೈ)- ತಮಿಳುನಾಡಿಗೆ ಕಾವೇರಿ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿ ನೀಡಿರುವ ಆದೇಶ ಖಂಡಿಸಿ ಕನ್ನಡಪರ, ರೈತಪರ ಸಂಘಟನೆಗಳು ಕರೆ ನೀಡಿದ್ದ 'ಕರ್ನಾಟಕ ಬಂದ್' ಹಿನ್ನೆಲೆಯಲ್ಲಿ ಮೈಸೂರಲ್ಲಿ ಶುಕ್ರವಾರ ಬೆಳಗ್ಗಿನಿಂದಲೇ ಸಾರಿಗೆ ಬಸ್‌ಗಳ ಸಂಚಾರ ಸ್ಥಗಿತಗೊಂಡಿತ್ತು.

ಪರಿಸ್ಥಿತಿ ಅವಲೋಕಿಸಿ ಬಸ್ ಸಂಚಾರ ನಿರ್ಧರಿಸುವುದಾಗಿ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದರಾದರೂ, ಪ್ರತಿಭಟನೆ ವೇಳೆ ಬಸ್‌ಗಳಿಗೆ ಹಾನಿಯಾಗಬಹುದೆಂಬ ಮುನ್ನೆಚ್ಚರಿಕೆಯಿಂದ ಬಸ್ ಸಂಚಾರಕ್ಕೆ ಹಿಂದೇಟು ಹಾಕಿದರು. ಅಲ್ಲದೆ, ಶುಕ್ರವಾರ ಬೆಳಗ್ಗೆ ಕಾವೇರಿ ಕ್ರಿಯಾ ಸಮಿತಿ ಕಾರ್ಯಕರ್ತರು ಬಸ್ ನಿಲ್ದಾಣದ ಬಳಿ ಪ್ರತಿಭಟನೆ ನಡೆಸಲಿದ್ದಾರೆ ಎಂಬ ಮಾಹಿತಿಯಂತೆ ಗ್ರಾಮಾಂತರ ಬಸ್ ನಿಲ್ದಾಣದ ಮುಂದೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರಿಂದ ಚಾಲಕರು ಬಸ್ ಓಡಿಸಲು ಹಿಂದೇಟು ಹಾಕಿದರು. ಇದರಿಂದ ಬೆಳಗ್ಗಿನಿಂದಲೇ ಸಾರಿಗೆ ಬಸ್‌ಗಳ ಸಂಚಾರ ಸ್ಥಗಿತಗೊಂಡಿತು.

ಹಾಲ್ಟ್ ಬಸ್‌ಗಳು ಡಿಪೋ ಸೇರಿದವು: ಗುರುವಾರ ರಾತ್ರಿ ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಗೆ ತೆರಳಿದ್ದ ಬಸ್‌ಗಳು ಇಂದು ಬೆಳಗ್ಗೆ ಬೆರಳೆಣಿಕೆಯಷ್ಟು ಪ್ರಯಾಣಿಕರೊಂದಿಗೆ ನಿಲ್ದಾಣಕ್ಕೆ ಆಗಮಿಸಿ, ಪ್ರಯಾಣಿಕರ ಇಳಿಸಿ, ಡಿಪೋಗಳಿಗೆ ತೆರಳಿದವು. ಬೆಳಗ್ಗೆ 7.30ರಿಂದ 8 ಗಂಟೆಯೊಳಗೆ ಬಹುತೇಕ ಎಲ್ಲಾ ಬಸ್‌ಗಳು ಡಿಪೋ ಸೇರಿದವು. ಕೇರಳ ಸೇರಿದಂತೆ ಕೆಲವು ಅಂತರರಾಜ್ಯ ಹಾಗೂ ಹೊರ ಜಿಲ್ಲೆಗಳ ಬಸ್‌ಗಳನ್ನು ಸುರಕ್ಷಿತವಾಗಿ ಡಿಪೋಗಳಲ್ಲಿ ನಿಲ್ಲಿಸಲು ಸೂಚನೆ ನೀಡಲಾಯಿತು. ವಿವಿಧೆಡೆ ಪ್ರಯಾಣಿಸಲು ಮುಂಜಾನೆ ಡಿಪೋಗಳಿಂದ ಹೊರ ಬಂದ ಕೆಲವು ಬಸ್‌ಗಳನ್ನು ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ನಿಂತಿದ್ದವು. ಆದರೆ, ಪ್ರತಿಭಟನಾಕಾರರು ಬಸ್ ನಿಲ್ದಾಣಕ್ಕೆ ಮುತ್ತಿಗೆ ಹಾಕಬಹುದೆಂಬ ಮುಂದಾಲೋಚನೆಯಿಂದ ಆ ಬಸ್‌ಗಳನ್ನು ಮತ್ತೆ ಡಿಪೋಗಳಿಗೆ ಕೊಂಡೊಯ್ಯಲಾಯಿತು.

ಬಿಕೋ ಎಂದ ಬಸ್ ನಿಲ್ದಾಣಗಳು: ಪ್ರತಿದಿನ ನೂರಾರು ಬಸ್ಸು ಹಾಗೂ ಸಾವಿರಾರು ಪ್ರಯಾಣಿಕರಿಂದ ತುಂಬಿ ತುಳುಕುತ್ತಿದ್ದ ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣಗಳು ಬೆಳಗ್ಗೆ 10 ಗಂಟೆ ವೇಳೆಗೆ ಭಣಗುಡಲಾರಂಭಿಸಿದ್ದವು. ಸಾರಿಗೆ ಸಂಸ್ಥೆಯ ಕೆಲವು ಸಿಬ್ಬಂದಿ ಹಾಗೂ ಭದ್ರತೆಗಾಗಿ ನಿಯೋಜಿಸಿದ್ದ ಪೊಲೀಸ್ ಸಿಬ್ಬಂದಿ ಮಾತ್ರ ನಿಲ್ದಾಣದಲ್ಲಿದ್ದುದ್ದರಿಂದ ಬಸ್ ನಿಲ್ದಾಣಗಳಲ್ಲಿ ನೀರವ ಮೌನದ ವಾತಾವರಣ ನೆಲೆಸಿತ್ತು.

ಮೈಸೂರು ವಿಭಾಗದಲ್ಲಿ

ಮೈಸೂರು ವಿಭಾಗದಲ್ಲಿ ಪ್ರಸ್ತುತ 871 ಬಸ್‌ಗಳನ್ನು ಪ್ರಯಾಣಿಕರ ಸೇವೆಗಾಗಿ ಬಳಕೆ ಮಾಡಲಾಗುತ್ತಿದೆ. ಅವುಗಳಲ್ಲಿ 248 ಬಸ್ ನಗರ ಪ್ರದೇಶದಲ್ಲೂ, 246 ಬಸ್‌ಗಳು ಜಿಲ್ಲಾ ಭಾಗಕ್ಕೆ ಸಂಚರಿಸಲಿವೆ. 372 ಬಸ್‌ಗಳು ಎಕ್ಸ್‌ಪ್ರೆಸ್ ಬಸ್‌ಗಳಾಗಿದ್ದರೆ, 72 ಬಸ್‌ಗಳು ಅಂತರ ರಾಜ್ಯ ಬಸ್‌ಗಳಾಗಿವೆ. ಇವುಗಳು ಪ್ರತಿದಿನ 976 ಷೆಡ್ಯೂಲ್‌ನಲ್ಲಿ 7911 ಟ್ರಿಪ್ ಸಂಚರಿಸಲಿವೆ.

ನಿದ್ದೆಗೆ ಜಾರಿದ ಪ್ರಯಾಣಿಕರು: ವಿವಿಧೆಡೆ ತೆರಳಲು ಕುಟುಂಬ ಸದಸ್ಯರು, ಮಕ್ಕಳೊಂದಿಗೆ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಬಂದಿದ್ದ ಕೆಲವು ಪ್ರಯಾಣಿಕರು ಬಸ್ ಇಲ್ಲದ ಕಾರಣ ಗ್ರಾಮಾಂತರ ಬಸ್ ನಿಲ್ದಾಣದಲ್ಲಿಯೇ ನಿದ್ರೆಗೆ ಜಾರಿದರು. ಮಕ್ಕಳು, ಹಿರಿಯ ನಾಗರಿಕರು, ಮಹಿಳೆಯರು ಬಸ್ ನಿಲ್ದಾಣದ ಆವರಣದಲ್ಲಿಯೇ ಗೋಡೆಗೆ ಒರಗಿ ನಿದ್ರೆ ಹೋದರೆ, ಪುರುಷರು ಚೇರ್‌ಗಳ ಮೇಲೆ ತೂಕಡಿಸುತ್ತಾ ಕುಳಿತಿದ್ದ ದೃಶ್ಯ ಕಂಡು ಬಂದಿತು.

ಬಸ್ ನಿಲ್ದಾಣದಲ್ಲಿ ಸ್ವಚ್ಛತೆ: ಬಸ್‌ಗಳ ಸಂಚಾರ ಸ್ಥಗಿತಗೊಂಡು, ಪ್ರಯಾಣಿಕರ ಸಂಖ್ಯೆ ವಿರಳವಾಗಿದ್ದ ಹಿನ್ನೆಲೆಯಲ್ಲಿ ಗ್ರಾಮಾಂತರ ಬಸ್ ನಿಲ್ದಾಣದ ಅಂಕಣಗಳನ್ನು ಸ್ವಚ್ಛಗೊಳಿಸಲಾಯಿತು. ಬಸ್ ನಿಲ್ದಾಣದ ಸ್ವಚ್ಛತಾ ಸಿಬ್ಬಂದಿ ಪ್ರಯಾಣಿಕರು ಕೂರುವ ಸ್ಥಳ, ಬಸ್-ಬೇ ಸೇರಿದಂತೆ ನಿಲ್ದಾಣದ ಆವರಣವನ್ನೆಲ್ಲಾ ಸ್ವಚ್ಛಗೊಳಿಸಿದರು.

ಮಧ್ಯಾಹ್ನ 3.15ಕ್ಕೆ ಮೊದಲ ಬಸ್ ಸಂಚಾರ: 'ಕರ್ನಾಟಕ ಬಂದ್' ಯಶಸ್ವಿಯಾಯಿತು ಎಂಬ ಮಾಹಿತಿ ಲಭ್ಯವಾಗುತ್ತಿದ್ದಂತೆ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಆಗಮಿಸುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಯಿತು. ಬೆಳಗ್ಗಿನಿಂದ ಸರ್ಕಾರಿ ಬಸ್ ಒಳಗೊಂಡಂತೆ ಯಾವುದೇ ಖಾಸಗಿ ವಾಹನಗಳ ಸಂಚಾರವೂ ಇಲ್ಲದ ಕಾರಣ ಪ್ರಯಾಣಿಕರು ಸಾರಿಗೆ ಬಸ್‌ಗಳನ್ನೇ ಅವಲಂಭಿಸಿದ್ದರು. ಮಧ್ಯಾಹ್ನ 2 ಗಂಟೆ ವೇಳೆಗೆ ಬಸ್ ನಿಲ್ದಾಣಕ್ಕೆ ಪ್ರಯಾಣಿಕರು ಬರುತ್ತಿದ್ದನ್ನು ಗಮನಿಸಿದ ಅಧಿಕಾರಿಗಳು, ಪೊಲೀಸರಿಂದ ಮಾಹಿತಿ ಪಡೆದು ಡಿಪೋಗಳಿಂದ ಬಸ್‌ಗಳನ್ನು ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಕರೆಸಿಕೊಂಡರು. ಬೆಂಗಳೂರಿಗೆ ತೆರಳುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಮಧ್ಯಾಹ್ನ 3.15ಕ್ಕೆ ಮೊದಲ ಬಸ್ ಬೆಂಗಳೂರಿನತ್ತ ಪ್ರಯಾಣ ಆರಂಭಿಸಿತು. ಇದಾದ ಬಳಿಕ ವಿರಾಜ ಪೇಟೆ, ನಂಜನಗೂಡು, ಚಾಮರಾಜನರ, ಗುಂಡ್ಲುಪೇಟೆ, ಮಳವಳ್ಳಿ, ಮಂಡ್ಯ, ಮಂಗಳೂರು, ಶಿವಮೊಗ್ಗ, ಹಾಸನದ ಕಡೆ ತೆರಳುವ ಬಸ್ ಪ್ರಯಾಣಿಕರನ್ನು ಕರೆದೊಯ್ದವು. ಸಂಜೆ 4 ಗಂಟೆ ಬಳಿಕ ಕೇರಳದ ವಿವಿಧ ನಗರಗಳಿಗೆ ಅಂತರಾಜ್ಯ ಬಸ್‌ಗಳು ಪ್ರಯಾಣ ಆರಂಭಿಸಿದವು. ಸಂಜೆ 5 ಗಂಟೆಗೆ ವೇಳೆ ನಗರ ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್‌ಗಳ ಪ್ರಯಾಣ ಆರಂಭವಾಯಿತು.











'ಕಾವೇರಿ'ಗಾಗಿ ಮಂಡ್ಯ ಸಂಪೂರ್ಣ ಸ್ತಬ್ಧ

- ಸಂಘಟನೆಗಳು, ವಿವಿಧ ಗ್ರಾಮಸ್ಥರು, ಸಾರ್ವಜನಿಕರು ಸೇರಿ ಸಾವಿರಾರು ಮಂದಿ ಪ್ರತಿಭಟನೆಯಲ್ಲಿ ಭಾಗಿ
- ಸಣ್ಣಪುಟ್ಟ ಅಹಿತಕರ ಘಟನೆ ಹೊರತುಪಡಿಸಿ, ಮಂಡ್ಯ ನಗರ ಸೇರಿ ಜಿಲ್ಲಾದ್ಯಂತ ಬಂದ್‌ಗೆ ಭಾರೀ ಬೆಂಬಲ
- ಸ್ವಯಂ ಪ್ರೇರಿತವಾಗಿ ಬಂದ್‌ಗೊಳಿಸಿ ಹೋರಾಟಕ್ಕಿಳಿದ ಜನರು, ಭದ್ರತೆಗಾಗಿ 1 ಸಾವಿರ ಪೊಲೀಸರ ನಿಂಯೋಜನೆ

ಮಂಡ್ಯ, ಸೆ.29– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಕರೆ ನೀಡಿದ್ದ ಕರ್ನಾಟಕ ಬಂದ್ ಮಂಡ್ಯ ಜಿಲ್ಲೆಯಲ್ಲಿ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದ್ದು, ಮಂಡ್ಯ ನಗರ ಸೇರಿದಂತೆ ಇಡೀ ಜಿಲ್ಲೆ ಶುಕ್ರವಾರ ಕಾವೇರಿಗಾಗಿ ಸಂಪೂರ್ಣ ಸ್ತಬ್ಧವಾಯಿತು. ರೈತ ಹಿತರಕ್ಷಣಾ ಸಮಿತಿ ಕರೆ ನೀಡಿದ್ದ ಮಂಡ್ಯ ಬಂದ್‌ಗೆ 30ಕ್ಕೂ ಹೆಚ್ಚು ರೈತ, ಪ್ರಗತಿಪರ, ಕನ್ನಡಪರ ಸಂಘಟನೆಗಳು, ವಿವಿಧ ರಾಜಕೀಯ ಪಕ್ಷಗಳು, ಅನೇಕ ಗ್ರಾಮಸ್ಥರು, ವರ್ತಕರು ಹಾಗೂ ಸಾರ್ವಜನಿಕರು ಅಭೂತಪೂರ್ವ ಬೆಂಬಲ ನೀಡಿದ್ದರಿಂದ ಬಂದ್ ಯಶಸ್ವಿಯಾಯಿತು.



ಬೀದಿಗಿಳಿದ ಸಂಘಟನೆಗಳು: ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಕನ್ನಡಪರ ಸಂಘಟನೆಗಳ ಒಕ್ಕೂಟ ಕರೆ ನೀಡಿದ್ದ ಕರ್ನಾಟಕ ಬಂದ್ ಬೆಂಬಲಿಸಿ ಹಲವು ಸಂಘಟನೆಗಳು ಬೆಳ್ಳಂಬೆಳಗ್ಗೆ ಬೀದಿಗಿಳಿದು ಹೋರಾಟ ನಡೆಸಿದವು.

ಜಿಲ್ಲಾ ರೈತ ಹಿತರಕ್ಷಣ ಸಮಿತಿ ಜೊತೆಗೂಡಿದ ಕಸ್ತೂರಿ ಕರ್ನಾಟಕ ಜನಪರ ವೇದಿಕೆ, ಕನ್ನಡ ಸೇನೆ ಕಾರ್ಯಕರ್ತರು ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಮುಂಜಾನೆ 7 ಗಂಟೆಗೆ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಭಾವಚಿತ್ರ ಹಿಡಿದು ಧಿಕ್ಕಾರ ಕೂಗುತ್ತಾ, ಕರ್ನಾಟಕದ ರೈತರ ಪಾಲಿಗೆ ಮರಣ ಶಾಸನ ಬರೆಯಲು ಮುಂದಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದ ಸಂಸದರ ಭಾವಚಿತ್ರ ಹಿಡಿದು ಪ್ರತಿಭಟಿಸಿ ಕಾವೇರಿ ಹೋರಾಟಕ್ಕೆ ಬಾರದ ಬೇಜವಾಬ್ದಾರಿ ಸಂಸದರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಸಂಸದರಿಗೆ ಹಿಡಿ ಶಾಪ ಹಾಕಿದರು. ಉರುಳು ಸೇವೆ ಮಾಡಿ ಆಳುವ ಸರ್ಕಾರಗಳ ವಿರುದ್ಧ ಧಿಕ್ಕಾರ ಕೂಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಾ ತಮಿಳುನಾಡಿಗೆ ಹರಿಸುತ್ತಿರುವ ನೀರು ನಿಲ್ಲಿಸಿ ಎಂದು ಒತ್ತಾಯಿಸಿದರು. ನಂತರ ನಗರದಾದ್ಯಂತ ಪ್ರತಿಭಟನಾಕಾರರು ಬೈಕ್ ರ‍್ಯಾಲಿ ನಡೆಸಿದರು.

ಬಂದ್ ಸಂಪೂರ್ಣ ಯಶಸ್ವಿ: ಜಿಲ್ಲಾ ಕೇಂದ್ರ ಮಂಡ್ಯ ನಗರದಲ್ಲಿ ಬಂದ್‌ಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ತುರ್ತು ಸೇವೆ ಹೊರತುಪಡಿಸಿ, ವರ್ತಕರು ಸ್ವಯಂ ಪ್ರೇರಿತರಾಗಿ ಅಂಗಡಿ, ಮುಂಗಟ್ಟು ಮುಚ್ಚಿದ್ದರಿಂದ ವ್ಯಾಪಾರ, ವಹಿವಾಟು ಸ್ಥಗಿತವಾಗಿತ್ತು. ಮಾಲ್‌ಗಳು, ಹೋಟೆಲ್, ಚಿತ್ರಮಂದಿರ, ಶಾಲಾ– ಕಾಲೇಜು, ಬೃಹತ್ ಕಾಂಪ್ಲೆಕ್ಸ್‌ಗಳು, ಪೆಟ್ರೋಲ್ ಬಂಕ್‌ಗಳು, ಅಂಗಡಿಗಳು ಬಾಗಿಲು ಮುಚ್ಚಿದ್ದರಿಂದ ಬೆಂಗಳೂರು– ಮೈಸೂರು ಹೆದ್ದಾರಿ, ವಿ.ವಿ. ರಸ್ತೆ, ಆರ್.ಪಿ.ರಸ್ತೆ, ಪೇಟೆ ಬೀದಿ, ಜೈನ್ ಸ್ಟ್ರೀಟ್, ನೂರಡಿ ರಸ್ತೆ, ಬನ್ನೂರು ರಸ್ತೆ, ಗುತ್ತಲು ರಸ್ತೆಗಳು ಜನರಿಲ್ಲದೇ ಬಿಕೋ ಎನ್ನುತ್ತಿದ್ದವು.

ಸರ್ಕಾರಿ, ಖಾಸಗಿ ಬಸ್, ಟೆಂಪೋ ಸಂಚಾರ ಇಲ್ಲದ ಪರಿಣಾಮ ಪ್ರಯಾಣಿಕರು ಪರದಾಡುವ ಸ್ಥಿತಿ ಎದುರಾಗಿತ್ತು. ಸರಕು ಸಾಗಾಣಿಕೆ ವಾಹನಗಳು ಸಹ ಸಂಚಾರ ಸ್ಥಗಿತಗೊಳಿಸಿದ್ದವು. ಆಟೋ ಸಂಚಾರ ವಿರಳವಾಗಿತ್ತು. ಸಾರ್ವಜನಿಕರು ಪ್ರಯಾಣಕ್ಕೆ ಬೈಕ್, ಸ್ಕೂಟರ್‌ಗಳನ್ನು ಅವಲಂಬಿಸಿದ್ದು ಕಂಡು ಬಂತು. ಬೆಂಗಳೂರು–ಮೈಸೂರಿನ ನಡುವೆ ಪ್ರಯಾಣ ಮಾಡುವವರು ರೈಲಿನಲ್ಲಿ ಪ್ರಯಾಣಿಸಿದರು. ರೈಲು ಸಂಚಾರಕ್ಕೆ ಯಾವುದೇ ಅಡೆತಡೆ ಉಂಟಾಗದ ಹಿನ್ನಲೆಯಲ್ಲಿ ಎಂದಿನಂತೆ ರೈಲುಗಳು ಸಂಚಾರ ಮಾಡಿದವು. ಸರ್ಕಾರಿ ಕಚೇರಿ, ಬ್ಯಾಂಕ್‌ಗಳು ಎಂದಿನಂತೆ ಕಾರ್ಯ ನಿರ್ವಹಿಸಿದವು. ಆದರೆ ಕಚೇರಿಗಳಲ್ಲಿ ಸಾರ್ವಜನಿಕರ ಸಂಖ್ಯೆ ಕಡಿಮೆ ಇತ್ತು. ಮುಂಜಾಗ್ರತಾ ಕ್ರಮವಾಗಿ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಚಲನಚಿತ್ರ ಮಂದಿರಗಳಲ್ಲಿ ಚಿತ್ರ ಪ್ರದರ್ಶನ ರದ್ದು ಮಾಡಲಾಗಿತ್ತು. ಕೆಲವೆಡೆ ಪೆಟ್ರೋಲ್ ಬಂಕ್‌ಗಳು ಗ್ರಾಹಕರಿಗೆ ಪೆಟ್ರೋಲ್ ಒದಗಿಸಿದವು.

ಸರ್ಕಾರಿ ಬಸ್ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದರಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಸಂಪೂರ್ಣ ಬಿಕೋ ಎನ್ನುತ್ತಿತ್ತು. ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಪೊಲೀಸರು ಕಟ್ಟೆಚ್ಚರ ವಹಿಸಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಬಂದೋಬಸ್ತ್ ಕೈಗೊಂಡಿದ್ದರು. ಎಸ್‌ಪಿ ಎನ್. ಯತೀಶ್ ನೇತೃತ್ವದಲ್ಲಿ ಭದ್ರತೆಗೆ 12 ಡಿಎಆರ್, 8 ಕೆಎಸ್‌ಆರ್‌ಪಿ ಸೇರಿ 1 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ನಿಯೋಜಿಸಲಾಗಿತ್ತು.

ಲ್ಯಾಪ್‌ಟಾಪ್ ಕಳ್ಳತನ: ಬಂದ್ ಹಿನ್ನೆಲೆಯಲ್ಲಿ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ರೈತರು ಹಾಗೂ ಸಂಘಟನೆಗಳ ಹೋರಾಟ ಮತ್ತು ಬಂದ್ ವರದಿ ಮಾಡಲು ತೆರಳಿದ್ದ ಖಾಸಗಿ ಟಿವಿ ವರದಿಗಾರನ ಲ್ಯಾಪ್‌ಟಾಪ್ ಕಳ್ಳತನವಾಗಿದೆ. ವೃತ್ತದ ಬಳಿ ಧರಣಿ ನಡೆಯುವಾಗ ಪಕ್ಕದಲ್ಲೇ ಇಟ್ಟಿದ್ದ ಲ್ಯಾಪ್‌ಟಾಪ್ ಅನ್ನು ಕಳ್ಳನೋರ್ವ ಕದ್ದೊಯ್ದಿದ್ದಾನೆ.

ಹೋರಾಟಗಾರನಿಂದ ಸ್ಟಾಲಿನ್ ಭಾವಚಿತ್ರಕ್ಕೆ ರಕ್ತಾಭಿಷೇಕ

ಮಂಡ್ಯ: ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಶುಕ್ರವಾರ ಮುಂಜಾನೆ ಕನ್ನಡಪರ ಸಂಘಟನೆಗಳ ಪ್ರತಿಭಟನೆ ವೇಳೆ ಹೋರಾಟಗಾರನೋರ್ವ ಕೈ ಕುಯ್ದುಕೊಂಡು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಭಾವಚಿತ್ರಕ್ಕೆ ರಕ್ತಾಭಿಷೇಕ ಮಾಡಿದ್ದಾನೆ. ಇದನ್ನು ಗಮನಿಸಿದ ಪೊಲೀಸರು ಸ್ಟಾಲಿನ್ ಭಾವಚಿತ್ರ ಕಿತ್ತುಕೊಂಡು ಹೋರಾಟಗಾರನಿಗೆ ಪ್ರಥಮ ಚಿಕಿತ್ಸೆ ನೀಡಿದರು. ಬಳಿಕ ಪೊಲೀಸರು ಆತನಿಗೆ ಬುದ್ಧಿ ಹೇಳಿ ಪ್ರತಿಭಟನೆ ಮುಂದುವರೆಸಲು ಸಲಹೆ ನೀಡಿದರು.

ಇದಾದ ಬಳಿಕ ವಿವಿಧ ಸಂಘಟನೆಗಳ ಕಾರ್ಯಕರ್ತರು ಜೊತೆಗೂಡಿ ಜೆಸಿ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಕಾವೇರಿ ವಿಚಾರವಾಗಿ ನಿರ್ಲಕ್ಷ್ಯ ತೋರಿರುವ ಕೇಂದ್ರ –ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಕನ್ನಡ ಸೇನೆ ಕಾರ್ಯಕರ್ತರು ತಲೆ ಮೇಲೆ ಕಲ್ಲು ಹೊತ್ತು ಪ್ರತಿಭಟಿಸಿ ಕಾವೇರಿ ವಿಚಾರದಲ್ಲಿ ಕನ್ನಡಿಗರು ಮತ್ತು ರೈತರಿಗೆ ನ್ಯಾಯ ದೊರಕಿಸಿ ಕೊಡುವಂತೆ ಒತ್ತಾಯಿಸಿದರು. ಕಸ್ತೂರಿ ಕರ್ನಾಟಕ ಜನಪರ ವೇದಿಕೆಯಿಂದ ಉರುಳು ಸೇವೆ ಮಾಡಿ, ಕಾವೇರಿ ಉಳಿವಿಗೆ ಪ್ರಾರ್ಥನೆ ಮಾಡಿದರು.

ಕರ್ನಾಟಕ ಬಂದ್‌ಗೆ ಪ್ರೇಮ್, ಚಕ್ರವರ್ತಿ ಸೂಲಿಬೆಲೆ ಬೆಂಬಲ



ಮಂಡ್ಯ, ಸೆ.29– ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್ ಬೆಂಬಲಿಸಿ ನಗರದ ಸರ್‌ಎಂವಿ ಪ್ರತಿಮೆ ಎದುರು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಹಮ್ಮಿಕೊಂಡಿದ್ದ ಧರಣಿಯಲ್ಲಿ ಅನೇಕ ಸಂಘಟನೆಗಳು ಹಾಗೂ ಸಾವಿರಾರು ಮಂದಿ ಭಾಗವಹಿಸಿ ಬೆಂಬಲ ಸೂಚಿಸಿದರು.

ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ದರ್ಶನ್ ಸೇನಾ ಸಮಿತಿ ಆಶ್ರಯದಲ್ಲಿ ಮೆರವಣಿಗೆ ಹೊರಟ ದರ್ಶನ್ ಅಭಿಮಾನಿಗಳು ಬೆಂಗಳೂರು–ಮೈಸೂರು ಹೆದ್ದಾರಿ ಮೂಲಕ ಸಾಗಿ ನಾವು ಎಂದೆಂದಿಗೂ ರೈತಪರ ಎಂದರು.

ಇನ್ನು ಶಂಖ, ಜಾಗಟೆ ಹೊಡೆಯುತ್ತಾ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಬಿಜೆಪಿ ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ವಿರುದ್ಧ ಧಿಕ್ಕಾರ ಕೂಗಿ ಜೊತೆಗೆ ಗೋವಿಂದ ಗೋವಿಂದ ಕೆಆರ್ ಎಸ್‌ನಲ್ಲಿ ನೀರಿಲ್ಲ ಖಾಲಿ ಗೋವಿಂದ ಎಂದು ಕೂಗಿದರು. ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕಕ್ಕೆ ಆಗುತ್ತಿರುವ ನಿರಂತರ ಅನ್ಯಾಯ ವಿರೋಧಿಸಿ ರಾಜಸ್ಥಾನ ಸಮಾಜದ ಸದಸ್ಯರು ಪ್ರತಿಭಟನಾ ಮೆರವಣಿಗೆ ನಡೆಸಿದರು. ಅಂಗಡಿ ಮುಂಗಟ್ಟು ಮುಚ್ಚಿ ಪೇಟೆ ಬೀದಿಯಿಂದ ಮೆರವಣಿಗೆ ಹೊರಟು ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಮಂಗಳಮುಖಿಯರು ಕಾವೇರಿ ಹೋರಾಟ ಬೆಂಬಲಿಸಿ ಖಾಲಿ ಬಿಂದಿಗೆ ಪ್ರದರ್ಶಿಸಿ, ರೈತರಿಗೆ ಆಗಿರುವ ಅನ್ಯಾಯ ಖಂಡಿಸಿದರು.

ಎಸ್‌ಡಿಪಿಐ ಕಾರ್ಯಕರ್ತರು ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಜಮಾಯಿಸಿ ಹಲವು ತಾಸು ಪ್ರತಿಭಟನೆ ನಡೆಸಿದರು. ಕಾವೇರಿ ನಮ್ಮದು, ರೈತರಿಗೆ ಆಗುತ್ತಿರುವ ಅನ್ಯಾಯ ಸರ್ಕಾರ ಮಾಡುತ್ತಿರುವ ದ್ರೋಹವಾಗಿದೆ ಎಂದು ಕಿಡಿಕಾರಿದರು.

ಮಂಡ್ಯ ಜಿಲ್ಲಾ ವಿಶ್ವಕರ್ಮ ಸಮಾಜದ ಆಶ್ರಯದಲ್ಲಿ ಚಿನ್ನದಂಗಡಿಯ ಕೆಲಸಗಾರರು ಪೇಟೆ ಬೀದಿಯಿಂದ ಬೈಕ್ ಜಾಥಾ ನಡೆಸಿ ಕಾವೇರಿ ಹೋರಾಟ ಬೆಂಬಲಿಸಿದರು. ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ನಾಮ ತಮಿಳುನಾಡಿಗೆ ಲಡ್ಡು ಸಿಹಿ ಎಂದು ಆಕ್ರೋಶಿಸಿ ಕೇಂದ್ರ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಪ್ರತಿಭಟನೆಯಲ್ಲಿ ನಟ, ನಿರ್ದೇಶಕ ಜೋಗಿ ಪ್ರೇಮ್, ವಿಚಾರವಾದಿ ಚಕ್ರವರ್ತಿ ಸೂಲಿಬೆಲೆ, ವಿಶ್ವಕರ್ಮ ಸಮುದಾಯದ ತಿರುಮಲಾಚಾರ್, ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ, ಕೆ.ಬೋರಯ್ಯ, ಚಂದ್ರಶೇಖರ್, ಜಿ.ಬಿ.ಶಿವಕುಮಾರ್, ಶಿವಕುಮಾರ್ ಆರಾಧ್ಯ, ಸಿ.ಟಿ.ಮಂಜುನಾಥ್, ಕನ್ನಡಸೇನೆ ಮಂಜು, ದಸಂಸ ಕೃಷ್ಣ, ಎಸ್‌ಡಿಪಿಐನ ಮಹಮ್ಮದ್ ತಾಹೀರ್ ಸೇರಿದಂತೆ ಸಾವಿರಾರು ಮಂದಿ ಭಾಗವಹಿಸಿದ್ದರು.

ಪ್ರಾಧಿಕಾರದ ಆದೇಶ ಖಂಡಿಸಿ ರೈತರಿಂದ ರಸ್ತೆತಡೆ

ಮಂಡ್ಯ: ತಮಿಳುನಾಡಿಗೆ ನೀರು ಬಿಡುವಂತೆ ಸಿಡಬ್ಲ್ಯೂಆರ್‌ಸಿ ಆದೇಶವನ್ನು ಸಿಡಬ್ಲ್ಯೂಎಂಎ ಎತ್ತಿ ಹಿಡಿದಿರುವುದನ್ನು ಖಂಡಿಸಿ ರೈತ ಹಿತರಕ್ಷಣಾ ಸಮಿತಿ ನಗರದ ಸರ್‌ಎಂವಿ ಪುತ್ಥಳಿ ಬಳಿ ಬೆಂಗಳೂರು–ಮೈಸೂರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.



ಬಾಯಿ ಬಡಿದುಕೊಂಡು ಆಕ್ರೋಶ ವ್ಯಕ್ತಪಡಿಸಿದ ಹೋರಾಟಗಾರರು, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ರದ್ದಿಗೆ ಆಗ್ರಹಿಸಿ, ಹಸಿರು ಮೆಣಸಿನಕಾಯಿ ತಿಂದು ವಿನೂತನವಾಗಿ ಪ್ರತಿಭಟಿಸಿ, ರೈತರ ಹೊಟ್ಟೆ ಮೇಲೆ ಪ್ರಾಧಿಕಾರ ಹಸಿರು ಮೆಣಸಿನಕಾಯಿ ಹಾಕಿದೆ ಎಂದು ಕಿಡಿಕಾರಿದರು.

ಗೌರಿಪುರ ಬಳಿ ಮೈಸೂರು– ಬೆಂಗಳೂರು ಎಕ್ಸ್‌ಪ್ರೆಸ್‌ವೇ ಬಂದ್

150ಕ್ಕೂ ಹೆಚ್ಚು ರೈತರ ಬಂಧನ; ರೈಲು ತಡೆಗೂ ಮುಂದಾದವರು ಪೊಲೀಸರ ವಶಕ್ಕೆ

ಶ್ರೀರಂಗಪಟ್ಟಣ, ಸೆ.29(ಮೋಹನ್‌ರಾಜ್)– ಕಾವೇರಿ ವಿಚಾರದಲ್ಲಿ ರಾಜ್ಯದ ಹಿತ ಕಾಯದ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ವಿರುದ್ಧ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಗೌರಿಪುರದ ಬಳಿ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಬಂದ್ ಮಾಡಿ ರೈತರು ಶುಕ್ರವಾರ ಪ್ರತಿಭಟನೆ ನಡೆಸಿದರು.



ಶಾಸಕ ದರ್ಶನ್ ಪುಟ್ಟಣ್ಣಯ್ಯ, ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಹಾಗೂ ಜಿಲ್ಲಾಧ್ಯಕ್ಷ ಕೆಂಪೂಗೌಡರ ನೇತೃತ್ವದಲ್ಲಿ ಜಮಾಯಿಸಿದ ನೂರಾರು ರೈತರು ಹೆದ್ದಾರಿ ತಡೆ ನಡೆಸಿ, ಸರ್ಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಹೆದ್ದಾರಿ ತಡೆಯಿಂದಾಗಿ ವಾಹನ ಸವಾರರು ಪರದಾಡುವಂತಾಯಿತು. ಈ ವೇಳೆ 150ಕ್ಕೂ ಹೆಚ್ಚು ರೈತರನ್ನು ಪೊಲೀಸರು ಬಂಧಿಸಿ, ಶ್ರೀರಂಗಪಟ್ಟಣದ ರಂಗನಾಥ ಕಲ್ಯಾಣ ಮಂಟಪಕ್ಕೆ ಕರೆ ತಂದರು. ಹೆದ್ದಾರಿ ತಡೆದ ಹಲವು ರೈತರ ಮೇಲೆ ಪೊಲೀಸರು ಪ್ರಕರಣ ದಾಖಲಿಸಿದ್ದು, ರೈತರಿಗೆ ಕಲ್ಯಾಣ ಮಂಟಪದ ಬಳಿಯೇ ಊಟದ ವ್ಯವಸ್ಥೆ ಕಲ್ಪಿಸಿದ್ದರು.

ರೈತರಿಂದ ರೈತರ ಪರಿಹಾರ ಸಾಧ್ಯ: ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ರೈತರ ಸಮಸ್ಯೆಗಳನ್ನು ರೈತರಿಂದ ಮಾತ್ರ ಬಗೆಹರಿಸಲು ಸಾಧ್ಯ. ಕಾವೇರಿ ಹಾಗೂ ಕಬಿನಿ ಆಶ್ರಯದಲ್ಲಿ ನೆರೆ ರಾಜ್ಯಗಳ ರೈತರ ಶಿಬಿರ ಆಯೋಜಿಸಿ ಸಮಸ್ಯೆ ಬಗೆಹರಿಸುವ ಗುರಿ ಹೊಂದಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೆಲ, ಜಲ ಮತ್ತು ಭಾಷೆಗೆ ಧಕ್ಕೆಯಾದಾಗ ಮಧ್ಯೆ ಪ್ರವೇಶಿಸುವ ಸಂವಿಧಾನ ಬದ್ಧ ಅಧಿಕಾರ ಬಳಸಿಕೊಳ್ಳಬೇಕೆಂದರು. ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಕುಡಿಯುವ ನೀರಿಗೆ ತೊಂದರೆ ಇರುವಾಗ ತಮಿಳುನಾಡು ವ್ಯವಸಾಯಕ್ಕೆ ನೀರು ಕೇಳುವುದು ಸರಿಯಲ್ಲ. ಹೀಗೆ ಮುಂದುವರಿದರೆ ಹೋರಾಟದ ತೀವ್ರತೆ ಬದಲಾಗಲಿದೆ ಎಂದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕೆಂಪೂಗೌಡ ಮಾತನಾಡಿ, ಕಳೆದ ವರ್ಷ ಜೂನ್, ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ 250 ಟಿಎಂಸಿ ನೀರು ಲಭ್ಯವಿತ್ತು. ಈ ಬಾರಿ ಕೇವಲ 52 ಟಿಎಂಸಿ ಲಭ್ಯವಿದ್ದು 198 ಟಿಎಂಸಿ ಕೊರತೆಯಿದೆ. ಚಳವಳಿಗಳು ರಚನಾತ್ಮಕ ವಿರೋಧ ಪಕ್ಷಗಳಾಗಿ ಕರ್ತವ್ಯ ನಿರ್ವಹಿಸುತ್ತಿವೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಪ್ರಸನ್ನಗೌಡ, ಮರಳಗಾಲ ಕೃಷ್ಣೇಗೌಡ, ಮಂಜುನಾಥ್, ಕೂಡಲಕುಪ್ಪೆ ಗೋಪಾಲಗೌಡ, ಕಿರಣ್, ಪಾಂಡು, ಜಯರಾಮು, ರುಕ್ಮಾಂಗದ, ಮೋಹನ್ ಕುಮಾರ್, ನೆಲಮನೆ ಶಂಭುಗೌಡ, ಮಹೇಶ್, ಗುರು, ರವಿಚಂದ್ರ, ಹೊನ್ನಪ್ಪ, ಪ್ರಿಯಾ ರಮೇಶ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ರೈಲು ತಡೆಗೆ ಯತ್ನ; ರೈತರ ಬಂಧನ: ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ರೈಲು ತಡೆಯಲು ಯತ್ನಿಸಿದ ರೈತರನ್ನು ಮದ್ದೂರು ತಾಲೂಕಿನ ಗೆಜ್ಜಲಗೆರೆಯಲ್ಲಿ ಪೊಲೀಸರು ಬಂಧಿಸಿದರು. ರೈತ ಸಂಘದ ಆಶ್ರಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ವಂದೇ ಭಾರತ್ ರೈಲು ತಡೆಗೆ ಸಿದ್ಧತೆ ನಡೆಸಿ ಹಳಿ ಮೇಲೆ ಓಡಿದ ರೈತರನ್ನು ಪೊಲೀಸರು ಬಂಧಿಸಿ ಎರಡು ಬಸ್‌ಗಳಲ್ಲಿ ಕರೆದೊಯ್ದರು. ಇದಕ್ಕೂ ಮುನ್ನಾ, ರೈಲು ತಡೆ ಚಳವಳಿಗೆ ಮುಂದಾಗಿದ್ದ ರೈತರನ್ನು ತಡೆಯಲು ನೂರು ಮೀಟರ್ ದೂರದಲ್ಲೇ ಪೊಲೀಸರು ಬ್ಯಾರಿಕೇಡ್ ಹಾಕಿದ್ದರು. ಈ ವೇಳೆ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ರೈತರು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾನಿರತ ರೈತರನ್ನು ತಡೆದ ಪೊಲೀಸರ ವಿರುದ್ಧವು ಧಿಕ್ಕಾರ ಕೂಗಲಾಯಿತು.

ರೈಲ್ವೆ ಹಳಿ ಬಳಿ ಪ್ರತಿಭಟನೆಗೆ ಅವಕಾಶ ಕಲ್ಪಿಸುವಂತೆ ರೈತರು ಕೋರಿದಾಗ ನೂರಾರು ರೈತರನ್ನು ಬ್ಯಾರಿಕೇಡ್ ಬಳಿ ತಡೆದು ಎಲ್ಲರಿಗೂ ಅವಕಾಶ ಕಲ್ಪಿಸುವುದಿಲ್ಲ ಎಂದು ಹೇಳಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಏಳು ಮಂದಿಗೆ ಅವಕಾಶ ಮಾಡಿಕೊಟ್ಟರು.

ರೈತರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಪ್ರತಿಭಟನಾನಿರತ ರೈತರನ್ನು ನಿಯಂತ್ರಣ ಮಾಡಲು ಪೊಲೀಸರು ಹರ ಸಾಹಸಪಟ್ಟರು. ಕೆಲವು ರೈತರು ಒಳ ನುಗ್ಗಿ ಹಳಿಗಳ ಮೇಲೆ ಓಡಿದರು. ಪೊಲೀಸರು ಹಿಡಿದು ಎಲ್ಲಾ ರೈತರನ್ನು ಬಂಧಿಸಿದರು. ರೈಲು ಹಳಿಗಳ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

ಬಂದ್ ಹಿನ್ನಲೆ: ಎಕ್ಸ್‌ಪ್ರೆಸ್‌ವೇ ಖಾಲಿ ಖಾಲಿ

ಮಂಡ್ಯ: ಕರ್ನಾಟಕ ಬಂದ್ ಜೊತೆಗೆ ರೈತ ಮುಖಂಡರು ಎಕ್ಸ್‌ಪ್ರೆಸ್ ವೇ ಬಂದ್ ಮಾಡುವ ಎಚ್ಚರಿಕೆ ನೀಡಿದ್ದರಿಂದ ವಾಹನ ಚಾಲಕರು, ಮಾಲೀಕರು ಎಚ್ಚೆತ್ತಿದ್ದರಿಂದ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ವಾಹನ ಸಂಚಾರವಿಲ್ಲದೇ ಬಿಕೋ ಎನ್ನುತಿತ್ತು.


ರೈತ ಮುಖಂಡರು ಮಂಡ್ಯದಲ್ಲಿ ಹೆದ್ದಾರಿ ಬಂದ್‌ಗೆ ಕರೆ ಕೊಟ್ಟು, ಅತ್ತ ಬೆಂಗಳೂರಿನಲ್ಲಿಯೂ ಪ್ರತಿಭಟನೆ ಜೋರಾಗಿದ್ದ ಕಾರಣ ಬೆರಳೆಣಿಕೆಯಷ್ಟು ವಾಹನಗಳು ಸಂಚರಿಸಿದವು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಬಂದ್ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲಾದ್ಯಂತ ಪೊಲೀಸ್ ಬಂದೋಬಸ್ತ್ ಮಾಡಿಕೊಂಡಿದ್ದೆವು. ಎಸ್ಪಿಯವರೊಂದಿಗೆ ಹಲವೆಡೆ ಸ್ಥಳ ಪರಿಶೀಲನೆ ಮಾಡಿದ್ದೇನೆ. ಮುಂಜಾಗೃತಾ ಕ್ರಮವಾಗಿ 144 ಸೆಕ್ಷನ್ ಜಾರಿ ಮಾಡಲಾಗಿತ್ತು. ಶಾಲಾ–ಕಾಲೇಜಿಗೆ ರಜೆ ನೀಡಿದ್ದೇವು. ಶಾಂತಿಯುತ ಪ್ರತಿಭಟನೆಗೆ ಮನವಿ ಮಾಡಿದ್ದೆವು. ಸಣ್ಣಪುಟ್ಟ ಘಟನೆಗಳು ಹೊರತುಪಡಿಸಿ ಶಾಂತಿಯುತವಾಗಿ ಬಂದ್ ನಡೆದಿದೆ ಎಂದರು.

ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ ಮಾತನಾಡಿ, ಮೈಸೂರು–ಬೆಂಗಳೂರು ಹೈವೇ ತಡೆಯದಂತೆ ಸೂಚಿಸಿದ್ದೆವು. ಆದರೆ ರೈತರು ಹೆದ್ದಾರಿಗೆ ನುಗ್ಗಿ ರಸ್ತೆ ತಡೆಯುವ ಪ್ರಯತ್ನ ಮಾಡಿದರು. ಈ ವೇಳೆ ಪ್ರತಿಭಟನಾಕಾರರನ್ನು ವಶಕ್ಕೆ ಪಡೆದಿದ್ದೇವೆ. ಸುಮಾರು 500 ಜನ ಪ್ರತಿಭಟನಾಕಾರರ ಪೈಕಿ ಹೈವೇಗೆ ನುಗ್ಗಿದ 150ಕ್ಕೂ ಹೆಚ್ಚು ಮಂದಿಯನ್ನು ವಶಕ್ಕೆ ಪಡೆದಿದ್ದೇವೆ. ದಕ್ಷಿಣ ವಲಯದ 5 ಜಿಲ್ಲೆಗಳಲ್ಲಿ ವಾಣಿಜ್ಯ ಚಟುವಟಿಕೆಗಳು ಬಂದ್ ಆಗಿದ್ದವು. ಯಾವುದೇ ಅಹಿತಕರ ಘಟನೆ ನಡೆದಿಲ್ಲ. ವಾಹನ ಸಂಚಾರ ವಿರಳವಾಗಿತ್ತು ಎಂದರು.

ಸುಭಾಷ್ ನಿಧನ

ಪಾಂಡವಪುರ, ಸೆ.29– ಮೂಲತಃ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲೂಕಿನ ನಿವಾಸಿ ಹಾಗೂ ಪಟ್ಟಣದ ಶ್ರೀಕೃಷ್ಣ ಭವನ ಹೋಟೆಲ್ ಮಾಲೀಕ ಆರ್. ಸುಭಾಷ್ (75) ಗುರುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ತಾಲೂಕಿನ ಹಲವು ಗಣ್ಯರು ಮೃತರ ಅಂತಿಮ ದರ್ಶನ ಪಡೆದರು.



ಮಂಡ್ಯ ಜಿಲ್ಲೆಯಾದ್ಯಂತ ಬಂದ್ ಯಶಸ್ವಿ



ಮಂಡ್ಯ, ಸೆ.29– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಉತ್ತಮ ಬೆಂಬಲ ವ್ಯಕ್ತವಾಗಿ, ಬಂದ್ ಯಶಸ್ವಿಯಾಯಿತು.

ಮಳವಳ್ಳಿ: ಪಟ್ಟಣದಲ್ಲಿ ರೈತ ಸಂಘ, ಜೆಡಿಎಸ್, ಬಿಜೆಪಿ, ಜಯಕರ್ನಾಟಕ ಸಂಘಟನೆ, ಕಾವೇರಿ ನೀರು ಹಿತರಕ್ಷಣಾ ಸಮಿತಿ, ವರ್ತಕರು ಸೇರಿದಂತೆ ವಿವಿಧ ಜನಪರ ಸಂಘಟನೆಗಳ ಕಾರ್ಯಕರ್ತರು ಎತ್ತಿನಗಾಡಿ ಮೂಲಕ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ಅನಂತರಾಂ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಕೂಡಲೇ ನೀರು ನಿಲ್ಲಿಸಬೇಕೆಂದು ಆಗ್ರಹಿಸಿದರು.

ಮಾಜಿ ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ಪ್ರಸಕ್ತ ವರ್ಷ ಸರಿಯಾಗಿ ಮಳೆಯಾಗದೇ ಕೆಆರ್‌ಎಸ್ ಭರ್ತಿಯಾಗದ ಪರಿಣಾಮ ಇಲ್ಲಿನ ಜನರು ಕುಡಿಯಲು ಹಾಗೂ ವ್ಯವಸಾಯಕ್ಕೆ ನೀರಿಲ್ಲದೇ ಪರಿತಪಿಸುವಂತಹ ಸಂದರ್ಭ ತಮಿಳುನಾಡಿಗೆ ನೀರು ಹರಿಸುವ ಮೂಲಕ ರಾಜ್ಯ ಸರ್ಕಾರ ರೈತರಿಗೆ ದ್ರೋಹ ಬಗೆಯುತ್ತಿದೆ ಎಂದು ಕಿಡಿಕಾರಿದರು. ಪ್ರತಿಭಟನೆಯಲ್ಲಿ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಬೋರೇಗೌಡ, ತಾಲೂಕು ಅಧ್ಯಕ್ಷ ಬಸವರಾಜು, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಹೇಶ್, ಮುಖಂಡರಾದ ಕೆಂಪಯ್ಯ, ಚಿಕ್ಕರಾಜು, ಪುರಸಭೆ ಸದಸ್ಯರಾದ ಪ್ರಶಾಂತ್‌ಕುಮಾರ್, ನಂದಕುಮಾರ್, ನಾಗೇಶ್, ಜಯರಾಮು, ಮಹೇಶ್ ಬಸವರಾಜು, ಅನಂತು ಸೇರಿದಂತೆ ಇನ್ನಿತರರಿದ್ದರು.

ಶ್ರೀರಂಗಪಟ್ಟಣ: ಪಟ್ಟಣದಲ್ಲಿ ತಾಲೂಕು ರೈತ ಹಿತರಕ್ಷಣಾ ಸಮಿತಿ, ಕಸಾಪ, ದಲಿತ ಸಂಘಟನೆಗಳು ಸೇರಿದಂತೆ 50ಕ್ಕೂ ಹೆಚ್ಚು ಸಂಘಟನೆಗಳ ನೇತೃತ್ವದಲ್ಲಿ 2 ಸಾವಿರಕ್ಕೂ ಹೆಚ್ಚು ಮಂದಿ ಪ್ರತಿಭಟನೆ ನಡೆಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಕುವೆಂಪು ವೃತ್ತದಲ್ಲಿ ಜಮಾಯಿಸಿದ ಸಾವಿರಾರು ಪ್ರತಿಭಟನಾಕಾರರು, ಪಟ್ಟಣದ ಮುಖ್ಯರಸ್ತೆಯಲ್ಲಿ ಮೆರವಣಿಗೆ ನಡೆಸಿ ಘೋಷಣೆ ಕೂಗಿದರು. ನಂತರ ತಾಲೂಕು ಕಚೇರಿಗೆ ತೆರಳಿ 2 ಗಂಟೆಗೂ ಹೆಚ್ಚು ಕಾಲ ಮುತ್ತಿಗೆ ಹಾಕಿದರು.

ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಪಟ್ಟಣದ ಎಲ್ಲಾ ವ್ಯಾಪಾರಿಗಳು ಅಂಗಡಿ ಮುಂಗಟ್ಟು ಬಂದ್ ಮಾಡಿ ಅಭೂತಪೂರ್ವ ಬೆಂಬಲ ವ್ಯಕ್ತಪಡಿಸಿದರು. ಸ್ವಯಂ ಪ್ರೇರಿತರಾಗಿ ಶಾಂತಿಯುತ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಭಾರತೀನಗರ: ತಮಿಳುನಾಡಿಗೆ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ಭಾರತೀನಗರದಲ್ಲಿ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಪದಾಧಿಕಾರಿಗಳು ಹಮ್ಮಿಕೊಂಡಿದ್ದ ಪ್ರತಿಭಟನೆಗೆ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಸಾಥ್ ನೀಡಿದರು.

ಭಾರತೀನಗರದ ಮದ್ದೂರು–ಮಳವಳ್ಳಿ ಹೆದ್ದಾರಿಯ ವಿಶ್ವೇಶ್ವರಯ್ಯ ವೃತ್ತದಲ್ಲಿ ಶ್ರೀ ಚಾಮುಂಡೇಶ್ವರಿ ಆಟೋ ಚಾಲಕರು ಮತ್ತು ಮಾಲೀಕರ ಸಂಘ ಹಾಗೂ ಜೈ ಭುವನೇಶ್ವರಿ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಪದಾಧಿಕಾರಿಗಳು ಜಮಾಯಿಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಆಟೋ ಸಂಘದ ಅಧ್ಯಕ್ಷ ರವಿ, ಕಾರ್ಯದರ್ಶಿ ವೆಂಕಟೇಶ್, ಪದಾಧಿಕಾರಿಗಳಾದ ಸಿದ್ದರಾಮು, ಹರೀಶ್, ಲಕ್ಷ್ಮಣ, ಚಂದ್ರು, ನರಸಿಂಹ, ಜಗದೀಶ್, ಪುಟ್ಟಸ್ವಾಮಿ, ಸಿದ್ದಪ್ಪಾಜಿ, ವಿನುಕುಮಾರ್ ಸೇರಿದಂತೆ ಹಲವರಿದ್ದರು.

ಮೇಲುಕೋಟೆ: ತಮಿಳುನಾಡಿಗೆ ನೀರು ಹರಿಸುತ್ತಿರುವ ಕ್ರಮ ವಿರೋಧಿಸಿ ರೈತ ಸಂಘದ ಕಾರ್ಯಕರ್ತರು ಇಲ್ಲಿಗೆ ಸಮೀಪದ ಜಕ್ಕನಹಳ್ಳಿ ವೃತ್ತದಲ್ಲಿ ಜೇವರ್ಗಿ–ಶ್ರೀರಂಗಪಟ್ಟಣ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ರಾಜಶೇಖರ್, ಬಳಘಟ್ಟ ಗ್ರಾಪಂ ಅಧ್ಯಕ್ಷೆ ಜ್ಯೋತಿ, ಕೋಕಿಲ, ಸತೀಶ್, ರವಿ, ಯೋಗಣ್ಣ, ರಾಮು, ಮಹೇಶ್, ಯೋಗರಾಜು, ಉಮೇಶ, ಜೋಗಿ, ರಾಜೇಗೌಡ, ನಾಗರಾಜು, ಮತ್ತಿತರರಿದ್ದರು.

ಪಾಂಡವಪುರ: ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ವಿವಿಧ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್ ಪಾಂಡವಪುರದಲ್ಲಿ ಯಶಸ್ವಿಯಾಯಿತು.

ಬಂದ್ ಹಿನ್ನೆಲೆಯಲ್ಲಿ ಪಟ್ಟಣದ ಎಲ್ಲಾ ಅಂಗಡಿ ಮುಂಗಟ್ಟು, ಸರ್ಕಾರಿ ಕಚೇರಿ, ಹೋಟೆಲ್, ಬೇಕರಿ, ಚಿತ್ರಮಂದಿರ ಬ್ಯಾಂಕ್‌ಗಳು ಸ್ವಯಂಪ್ರೇರಿತರಾಗಿ ಬಾಗಿಲು ಮುಚ್ಚಿ ಬಂದ್‌ಗೆ ಬೆಂಬಲ ನೀಡಿದರು. ಶಾಲಾ ಕಾಲೇಜಿಗೆ ರಜೆ ಘೋಷಿಸಲಾಗಿತ್ತು. ಪಟ್ಟಣದಲ್ಲಿ ಸರ್ಕಾರಿ, ಖಾಸಗಿ ಬಸ್ ಸಂಚಾರವೂ ಸ್ಥಗಿತಗೊಂಡಿತ್ತು. ಅಲ್ಲದೇ ರಸ್ತೆಗಳು ಜನರಿಲ್ಲದೇ ಬಿಕೋ ಎನ್ನುತ್ತಿದ್ದವು.



ಪ್ರತಿಭಟನೆ: ಪಟ್ಟಣದಲ್ಲಿ ಕನ್ನಡ ಸೇನೆ, ಜೈನ್ ಸಮಾಜದ, ವಿಷ್ಣುಸೇವೆ ಸಂಘಟನೆಯ ಮುಖಂಡರು ಪಟ್ಟಣದ ಐದು ದೀಪದ ವೃತ್ತದಲ್ಲಿ ಶ್ರೀರಂಗಪಟ್ಟಣ–ಜೇವರ್ಗಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಬಳಿಕ ಮಂಡ್ಯ ಸರ್ಕಲ್ ಬಳಿ ಮಾನವ ಸರಪಳಿ ರಚಿಸಿ ಉರುಳು ಸೇವೆ ಮಾಡಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ತಾಲೂಕು ಕಚೇರಿಗೆ ತೆರಳಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಈ ವೇಳೆ ಕನ್ನಡ ಸೇನೆ ಜಿಲ್ಲಾ ಉಪಾಧ್ಯಕ್ಷ ಮಂಜುನಾಥ್, ಬಿಜೆಪಿ ಮುಖಂಡ ಎಚ್.ಎನ್.ಮಂಜುನಾಥ್, ಕನ್ನಡ ಸೇನೆ ತಾಲೂಕು ಅಧ್ಯಕ್ಷ ದೇವು, ಮುಖಂಡರಾದ ವಿಷ್ಣುವಿಠಲ್, ಶ್ರೀಕಂಠ, ಪ್ರದೀಪ್, ನಂದಿನಿ, ಇಂದ್ರಮ್ಮ, ಅಶೋಕ್ ಮೇತ, ಪಿಂಟು, ಮಹೇಶ್, ಅಶೋಕ್ ಸೇರಿದಂತೆ ಹಲವರಿದ್ದರು. ಉಳಿದಂತೆ ನಾಗಮಂಗಲದಲ್ಲೂ ಬಂದ್ ಯಶಸ್ವಿಯಾಯಿತು.

ಕೆ.ಆರ್.ಪೇಟೆಯಲ್ಲಿ ಬಂದ್‌ಗೆ ಬೆಂಬಲ: ಪ್ರತಿಭಟನೆ



ಕೆಆರ್.ಪೇಟೆ: ಪಟ್ಟಣದಲ್ಲಿ ಕರ್ನಾಟಕ ಬಂದ್‌ಗೆ ಬೆಂಬಲ ಸೂಚಿಸಿದ ವಿವಿಧ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಬಂಡಿಹೊಳೆ ಸಮೀಪದ ಹೇಮಾವತಿ ಅಣೆಕಟ್ಟೆ ಬಳಿ ಧರಣಿ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು.

ಬಳಿಕ ತಾಲೂಕು ಕಚೇರಿವರೆಗೆ ಬೈಕ್ ರ‍್ಯಾಲಿ ನಡೆಸಿ ತಹಸೀಲ್ದಾರ್ ನಿಸರ್ಗಪ್ರಿಯ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ತಾಲೂಕು ಕರವೇ ಸ್ವಾಭಿಮಾನಿ ಸೇನೆ ಅಧ್ಯಕ್ಷ ಸಮೀರ್, ಜಿಲ್ಲಾ ಉಪಾಧ್ಯಕ್ಷ ಎ.ಸಿ.ಕಾಂತರಾಜು, ಕಾನೂನು ಘಟಕದ ಅಧ್ಯಕ್ಷ ಆರ್.ಎಂ.ದೇವಾನಂದ್, ಮಹಿಳಾಧ್ಯಕ್ಷೆ ಮಧುಶ್ರೀ, ಪದವೀಧರ ವಿದ್ಯಾರ್ಥಿ ಘಟಕದ ಅಧ್ಯಕ್ಷ ಸೋಮು, ಆಟೋ ಘಟಕದ ಜಾವಿದ್, ಕಾರ್ಮಿಕ ಘಟಕದ ದಯಾನಂದರಾವ್, ತಾಲೂಕು ಕರ್ನಾಟಕ ರಕ್ಷಣಾ ಸೇನೆಯ ಅಧ್ಯಕ್ಷ ಪ್ರಶಾಂತ್, ಉಪಾಧ್ಯಕ್ಷ ವೃದ್ಧಿ, ತಾಲೂಕು ಯುವ ಘಟಕದ ಅಧ್ಯಕ್ಷ ಹೆಚ್.ಎನ್.ಅರವಿಂದ್, ಉಪಾಧ್ಯಕ್ಷ ಅಭಿಷೇಕ್, ಕಾರ್ಯದರ್ಶಿ ಪವನ್, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಆರ್. ಶ್ರೀನಿವಾಸ್ ಸೇರಿದಂತೆ ವಿವಿಧ ಸಂಘಟನೆಯ ನೂರಾರು ಮುಖಂಡರು ಭಾಗವಹಿಸಿದ್ದರು.

ಸೈನಿಕರಿಗೆ ಸಿರಿಧಾನ್ಯಗಳ ಪೌಷ್ಟಿಕ ಆಹಾರ ಪೂರೈಕೆ

ಮೈಸೂರಲ್ಲಿ ಆರಂಭವಾದ 'ಮಿಲಿಟರಿ ಪಡಿತರ ಮತ್ತು ನಿರ್ದಿಷ್ಟ ಪೌಷ್ಟಿಕಾಂಶಗಳ ಅವಶ್ಯಕತೆಗಳಿಗಾಗಿ ಸಿರಿಧಾನ್ಯಗಳು' ಕುರಿತ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಕೇಂದ್ರ ರಕ್ಷಣಾ ಮತ್ತು ಪ್ರವಾಸೋದ್ಯಮ ಸಚಿವ ಅಜಯ್ ಭಟ್ ಘೋಷಣೆ





ಮೈಸೂರು, ಸೆ. 29(ಆರ್‌ಕೆ)– ದೇಶದ ರಕ್ಷಣಾ ಕಾರ್ಯದಲ್ಲಿ ನಿರತರಾದ ಸೇನಾ ಪಡೆಗೆ ಪೌಷ್ಟಿಕಾಂಶವುಳ್ಳ ಸಿರಿಧಾನ್ಯ ಪೂರೈಸಲಾಗುತ್ತಿದೆ ಎಂದು ಕೇಂದ್ರ ರಕ್ಷಣಾ ಮತ್ತು ಪ್ರವಾಸೋದ್ಯಮ ಸಚಿವ ಅಜಯ್ ಭಟ್ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಎಸ್‌ಡಿಎಂ–ಐಎಂಡಿ ಕಾಲೇಜು ಸಭಾಂಗಣದಲ್ಲಿ ಏರ್ಪಡಿಸಿದ್ದ "ಮಿಲಿಟರಿ ಪಡಿತರ ಮತ್ತು ನಿರ್ದಿಷ್ಟ ಪೌಷ್ಟಿಕಾಂಶಗಳ ಅವಶ್ಯಕತೆಗಳಿಗಾಗಿ ಸಿರಿಧಾನ್ಯಗಳು" ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಸೈನಿಕರ ಆರೋಗ್ಯದ ಹಿನ್ನೆಲೆಯಲ್ಲಿ ರಕ್ಷಣಾ ಇಲಾಖೆಯು ಪೂರೈಸುತ್ತಿರುವ ಆಹಾರದ ಪೈಕಿ ಶೇ. 25ರಷ್ಟು ಸಿರಿಧಾನ್ಯಗಳಿಂದ ಕೂಡಿದ ಪೌಷ್ಟಿಕಾಂಶಯುಕ್ತ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲಾಗುತ್ತಿದೆ. ಎಲ್ಲಾ ಬಗೆಯ ವಾತಾವರಣಕ್ಕೂ ದೇಹವೊಡ್ಡಿ ಕರ್ತವ್ಯ ನಿರ್ವಹಿಸುತ್ತಿರುವ ಮಿಲಿಟರಿ ಪಡೆ ಸಮರ್ಥವಾಗಿ ಸವಾಲುಗಳನ್ನು ಎದುರಿಸುವಂತಾಗಲು ಸಿರಿಧಾನ್ಯ ಪಡಿತರ ಅತ್ಯವಶ್ಯ ಎಂದು ಸಚಿವರು ಅಭಿಪ್ರಾಯಪಟ್ಟರು.

ಸಿರಿಧಾನ್ಯಗಳು 'ಸೂಪರ್ ಫುಡ್'. ನಮ್ಮ ಹಳೆಯ ತಲೆಮಾರಿನವರು ಈ ಆಹಾರ ಪದ್ಧತಿಯನ್ನು ಅಳವಡಿಸಿಕೊಂಡಿದ್ದರಿಂದಲೇ ಸುದೀರ್ಘ ಕಾಲದವರೆಗೆ ಆರೋಗ್ಯದಿಂದ ಜೀವಿಸುತ್ತಿದ್ದರು. ರೋಗ ಮುಕ್ತ ಜೀವನಕ್ಕೆ ಸಿರಿಧಾನ್ಯವೇ ಪ್ರಮುಖ ಕಾರಣವಾಗಿತ್ತು. ಇದೀಗ ಆರೋಗ್ಯದ ಬಗ್ಗೆ ಜನರು ಹೆಚ್ಚು ಕಾಳಜಿ ವಹಿಸುತ್ತಿದ್ದು, ಸ್ಟಾರ್ ಹೋಟೆಲ್‌ಗಳಲ್ಲೂ ತಮ್ಮ ಅತಿಥಿಗಳಿಗೆ ಸಿರಿಧಾನ್ಯಗಳಿಂದ ತಯಾರಿಸಿದ ಆಹಾರವನ್ನೇ ಪೂರೈಸಲಾಗುತ್ತಿದೆ ಅಂದಮೇಲೆ ಈಗ ಮಿಲ್ಲೆಟ್ ಆಧಾರಿತ ಆಹಾರ ಎಷ್ಟು ಮುಖ್ಯ ಎಂದು ಅಜಯ್ ಭಟ್ ತಿಳಿಸಿದರು.

> ಸಿರಿಧಾನ್ಯಗಳು ಈಗ ಎಲ್ಲಾ ವರ್ಗದ ಜನರ ನಿತ್ಯ ಜೀವನದಲ್ಲಿ ಮೈಕ್ರೋ ನ್ಯೂಟ್ರಿಂಯೆಂಟ್ ಮತ್ತು ಬಯೋ–ಆಕ್ಟಿವ್ ಕಾಂಪೌಂಡ್ಸ್ ಹೊಂದಿರುವುದರಿಂದ ಸೈನ್ಯ ಪಡೆಗೆ ಮಿಲ್ಲೆಟ್‌ಯುಕ್ತ ಆಹಾರವನ್ನು ಉತ್ತೇಜಿಸಲು ರಕ್ಷಣಾ ಸಚಿವಾಲಯ ಮುಂದಾಗಿದೆ ಎಂದ ಸಚಿವರು, ನ್ಯೂಟ್ರಿಷನಲ್ ವ್ಯಾಲ್ಯೂ ಮತ್ತು ಆರೋಗ್ಯದ ಅನುಕೂಲಕ್ಕಾಗಿ ಮಿಲಿಟರಿ ಪಡಿತರ ಪೂರೈಕೆಯಲ್ಲಿ ಈ ಮಾರ್ಪಾಡು ಮಾಡಲಾಗಿದೆ.
> – **ಅಜಯ್ ಭಟ್**, ಕೇಂದ್ರ ರಕ್ಷಣಾ ಮತ್ತು ಪ್ರವಾಸೋದ್ಯಮ ಸಚಿವ

ಇದೇ ವೇಳೆ ಮಾತನಾಡಿದ ಮಿಲ್ಲೆಟ್ ಮ್ಯಾನ್ ಆಫ್ ಇಂಡಿಯಾ ಮತ್ತು ಪದ್ಮಶ್ರೀ ಪುರಸ್ಕೃತ ಡಾ. ಖಾದರ್ ವಲ್ಲಿ ದುದೇಕುಲ, ರೋಗಮುಕ್ತ ಆರೋಗ್ಯಕರ ಜೀವನಕ್ಕೆ ಸಿರಿಧಾನ್ಯಗಳು ಎಷ್ಟು ಪ್ರಮುಖವಾದುದು ಎಂಬುದರ ಬಗ್ಗೆ ವಿವರಿಸಿದರು. ಅಕ್ಕಿ, ಗೋಧಿ ಮತ್ತು ಸಕ್ಕರೆ ಮನುಷ್ಯನ ದೇಹದ ಗ್ಲೂಕೋಸ್ ಇಂಬ್ಯಾಲನ್ಸ್‌ಗೆ ಕಾರಣವಾಗುತ್ತವೆ. ಸಿರಿಧಾನ್ಯ ಸೇವಿಸುವುದರಿಂದ ಸಕ್ಕರೆ ಖಾಯಿಲೆ, ರಕ್ತದೊತ್ತಡ ಮತ್ತು ಇತರ ಸಮಸ್ಯೆಗಳು ಪರಿಹಾರವಾಗುತ್ತವೆ ಎಂದರು.

ಶತಮಾನಗಳಿಂದ ಸಿರಿಧಾನ್ಯಗಳನ್ನು ಜನರು ಸೇವಿಸುತ್ತಾ ಬಂದಿದ್ದರೂ, ಈವರೆಗೆ ಅದರ ಬಗ್ಗೆ ಸಮಗ್ರ ಸಂಶೋಧನೆಗಳಾಗಿಲ್ಲ. ಎಲ್ಲರೂ ಆಹಾರ ಸುರಕ್ಷತೆ ಬಗ್ಗೆ ಮಾತನಾಡುತ್ತಾರಾದರೂ, ದೇಶದಲ್ಲಿರುವ ಸುಮಾರು 200ಕ್ಕೂ ಹೆಚ್ಚು ಬಗೆಯ ಫೈಬರ್ ರಿಚ್ ಮಿಲ್ಲೆಟ್ಸ್ ಕುರಿತಂತೆ ಅನ್ವೇಷಣೆಗಳಾಗದಿರುವುದು ನೋವಿನ ಸಂಗತಿ ಎಂದು ಅವರು ನುಡಿದರು.

ನವದೆಹಲಿಯ ಡಿಆರ್‌ಡಿಓ ಮಹಾ ನಿರ್ದೇಶಕ (ಜೀವ ವಿಜ್ಞಾನ) ಡಾ. ಉಪೇಂದ್ರ ಕುಮಾರ್ ಸಿಂಗ್, ರಕ್ಷಣಾ ಇಲಾಖೆ ಕಾರ್ಯದರ್ಶಿ ಡಿಆರ್‌ಡಿಓ ಅಧ್ಯಕ್ಷ ಡಾ. ಸಮೀರ ವಿ. ಕಾಮತ್, ಸೇನಾ ಪ್ರಧಾನ ಕಚೇರಿಯ ಮೇಜರ್ ಜನರಲ್ ಎಸ್.ಎಸ್. ಅಹ್ಲಾವತ್, ಡಿಎಫ್‌ಆರ್‌ಎಲ್ ನಿರ್ದೇಶಕ ಡಾ. ಅನಿಲ್ ದತ್ ಸೆಮ್ವಾಲ್ ಹಾಗೂ ವಿಜ್ಞಾನಿ ಡಾ. ಡಿ.ಡಿ. ವಾಡಿಕರ್ ಅವರು ಸಮ್ಮೇಳನದಲ್ಲಿ ಪಾಲ್ಗೊಂಡು, ಮಾತನಾಡಿದರು.

ಡಿಎಫ್‌ಆರ್‌ಎಲ್ ಹೊರತಂದಿರುವ ಸ್ಮರಣ ಸಂಚಿಕೆ ಹಾಗೂ ಪ್ರಯೋಗಾಲಯ ಅಭಿವೃದ್ಧಿಪಡಿಸಿರುವ ಬಯೋ–ಡಿಗ್ರೇಡಬಲ್ ಕುಡಿಯುವ ನೀರಿನ ಬಾಟಲಿಯನ್ನು ಬಿಡುಗಡೆಗೊಳಿಸಿದ ಸಚಿವರು, ಸಿರಿಧಾನ್ಯ ವಸ್ತುಪ್ರದರ್ಶನವನ್ನು ಇದೇ ವೇಳೆ ಉದ್ಘಾಟಿಸಿದರು.

ದೇಶದ ವಿವಿಧ ಭಾಗಗಳಿಂದ ಆಹಾರ ತಜ್ಞರು, ಸಿರಿಧಾನ್ಯ ಸಂಶೋಧಕರು, ರೈತ ಮುಖಂಡರು, ವಿದ್ಯಾರ್ಥಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ನಂತರ "ಮಿಲ್ಲೆಟ್ಸ್ ಇನ್ ಮಿಲಿಟರಿ ರೇಷನ್ಃ ಇಷ್ಯೂಸ್, ಚಾಲೆಂಜಸ್ ಅಂಡ್ ಆಪರ್ಚುನಿಟೀಸ್", "ನ್ಯೂಟ್ರಿಷನ್ ಅಂಡ್ ಹೆಲ್ತ್ ಬೆನಿಫಿಟ್ಸ್ ಆಫ್ ಮಿಲ್ಲೆಟ್ಸ್" ಹಾಗೂ "ರೀಸೆಂಟ್ ಅಡ್ವಾನ್ಸಸ್ ಇನ್ ಮಿಲ್ಲೆಟ್ ಪ್ರೊಸೆಸಿಂಗ್ ಅಂಡ್ ವ್ಯಾಲ್ಯೂ–ಆಡೆಡ್ ಪ್ರಾಡಕ್ಟ್ಸ್" ವಿಷಯಗಳ ಕುರಿತು ಗೋಷ್ಠಿಗಳು ನಡೆದವು.

ಭಗತ್‌ಸಿಂಗ್ ಜಯಂತಿ ಆಚರಣೆ



ಮೈಸೂರು, ಸೆ.29–ನಾಡಿನ ಪ್ರತಿಯೊಬ್ಬರು ಜಲ, ನೆಲ, ಭಾಷೆಯ ಪ್ರೇಮದ ಜತೆಗೆ ದೇಶಾಭಿಮಾನ ಬೆಳೆಸಿಕೊಳ್ಳುವಂತೆ ಮಾಜಿ ಸೈನಿಕ ವಿ.ಮಹೇಶ್ ಸಲಹೆ ನೀಡಿದರು. ಮೈಸೂರಿನ ಸಾತಗಳ್ಳಿ 'ಬಿ' ವಲಯದಲ್ಲಿರುವ ಭಗತ್‌ಸಿಂಗ್ ವೃತ್ತದಲ್ಲಿ ಭಗತ್‌ಸಿಂಗ್ ಅವರ 116ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಲಿಯನ್ ವಾಲಾ ಬಾಗ್‌ನ ಘಟನೆಯ ಬಗ್ಗೆ ಹೇಳುವಾಗ 12 ವರ್ಷದ ಬಾಲಕ ರೊಚ್ಚಿಗೆದ್ದು, ಅದಕ್ಕೆ ಸೇಡು ತೀರಿಸಿಕೊಳ್ಳುವ ಶಪಥ ಮಾಡುವುದು, ನೇಣುಗಂಬದಲ್ಲಿ ಹಗ್ಗಕ್ಕೆ ಮುತ್ತಿಟ್ಟು ಪ್ರಾಣ ತ್ಯಾಗ ಮಾಡಿದ ವ್ಯಕ್ತಿಯ ಜಯಂತಿ ಆಚರಿಸುವುದು ನಮ್ಮೆಲ್ಲರ ಕರ್ತವ್ಯವೆಂದು ಹೇಳಿದರು.

ಸಾತಗಳ್ಳಿ ರೆಸಿಡೆನ್ಸಿ, ವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಚೆಲುವೇಗೌಡ, ಉಪಾಧ್ಯಕ್ಷ ತಿರುಮಲ ಆಚಾರ್, ಕಾರ್ಯದರ್ಶಿ ಗಂಗಾಧರ್, ಪ್ರಸನ್ನ, ದಿನೇಶ್, ಜಯಸ್ವಾಮಿ, ಉಪಾಧ್ಯಕ್ಷ ವಿವೇಕಾನಂದ, ಪದಾಧಿಕಾರಿಗಳು, ಸದಸ್ಯರು, ಬಡಾವಣೆಯ ಪ್ರತಿಭಾ ಪಾಟೀಲ್ ಸ್ವಸಹಾಯ ಸ್ತ್ರೀ ಶಕ್ತಿ ಸಂಘದ ಸದಸ್ಯರು, ಸರ್ಕಾರಿ ಕಾನೂನು ಸಲಹೆಗಾರ ಆನಂದ್, ಕಲಾವಿದರ ರಾಜ್ಯಾಧ್ಯಕ್ಷ ಪುಟ್ಟಸ್ವಾಮಿ ಉಪಸ್ಥಿತರಿದ್ದರು. ಮೈಸೂರು ಎಕ್ಸ್‌ಸರ್ವಿಸ್‌ಮನ್ ಮೂವ್‌ಮೆಂಟ್‌ನ 40 ಮಾಜಿ ಸೈನಿಕರಿಂದ ಪುಷ್ಪಾರ್ಚನೆ, ಬಡಾವಣೆಯ ಪ್ರತಿಭಾ ಪಾಟೀಲ್ ಸ್ವಸಹಾಯ ಸ್ತ್ರೀಶಕ್ತಿ ಸಂಘದವರಿಂದ ಮಾಜಿ ಸೈನಿಕರಿಗೆ ಸನ್ಮಾನ, ಬಡಾವಣೆ ಮಕ್ಕಳಿಗೆ ಭಗತ್ ಸಿಂಗ್ ಫ್ಯಾನ್ಸಿ ಡ್ರೆಸ್, ಪುಟ್ಟು ಆರ್ಕೆಸ್ಟ್ರಾ ತಂಡದಿಂದ ದೇಶಭಕ್ತಿ ಗೀತೆ ಏರ್ಪಡಿಸಲಾಗಿತ್ತು.

ವಿದ್ಯಾನಿಧಿಯಿಂದ ಸಹಾಯಕ್ಕೆ ಅರ್ಜಿ ಆಹ್ವಾನ

ಮೈಸೂರು,ಸೆ.29(ಪಿಎಂ)– ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ವಿದ್ಯಾನಿಧಿಯಿಂದ ಸಹಾಯ ಪಡೆಯಲಿಚ್ಛಿಸುವ ಸದಸ್ಯರು ಸೆ.27ರಿಂದ ಅ.25ರವರೆಗೆ ಬ್ಯಾಂಕಿನ ಮುಖ್ಯ ಕಚೇರಿ ಮತ್ತು ಶಾಖೆಯಲ್ಲಿ ಕಚೇರಿ ವೇಳೆಯಲ್ಲಿ ಅರ್ಜಿಗಳನ್ನು ಪಡೆಯಬಹುದು. ಸ್ಕೂಲ್, ಕಾಲೇಜು ಶುಲ್ಕ ಹಾಗೂ ಪಠ್ಯ ಪುಸ್ತಕಗಳನ್ನು ಖರೀದಿಸಲು ಮಾತ್ರ ಹಾಲಿ ಅರ್ಜಿಗಳನ್ನು ಕೊಡಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಸೂಕ್ತ ದಾಖಲಾತಿಗೊಡನೆ ಅ.25ರ ಸಂಜೆ 6 ಗಂಟೆಯೊಳಗೆ ಬ್ಯಾಂಕಿನ ಮುಖ್ಯ ಕಚೇರಿಗೆ ತಲುಪಿಸಬೇಕು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಪಿಯುಸಿ, ಡಿಪ್ಲೋಮಾ, ಐಟಿಐವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಇದು ಅನ್ವಯಿಸಲಿದೆ. ಈ ಸೌಲಭ್ಯ ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಗಳಿಗೆ ಮಾತ್ರವಾಗಿದೆ. ಅರ್ಜಿದಾರರ (ಸದಸ್ಯರ) ಆಶ್ರಯದಲ್ಲಿರುವ ಮಗ, ಮಗಳು, ಮದುವೆಯಾಗದ ತಂಗಿ, ತಮ್ಮ ಅವರಲ್ಲಿ ಒಬ್ಬರು ಮಾತ್ರ ಈ ಸೌಲಭ್ಯ ಪಡಯಬಹುದು ಎಂದು ಬ್ಯಾಂಕಿನ ಪ್ರಕಟಣೆ ತಿಳಿಸಿದೆ.

ಭಾರತದ ಅಂಧರ ಮಹಿಳಾ ಕ್ರಿಕೆಟ್ ತಂಡವನ್ನು ಅಭಿನಂದಿಸಿದ ಸಿಎಂ



ಬೆಂಗಳೂರು, ಸೆ.29– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಕಚೇರಿ ಕೃಷ್ಣಾದಲ್ಲಿ ಶುಕ್ರವಾರ ಭಾರತದ ಅಂಧರ ಮಹಿಳಾ ಕ್ರಿಕೆಟ್ ತಂಡ ಹಾಗೂ ಕರ್ನಾಟಕದ ಅಂಧ ಪುರುಷರ ಕ್ರಿಕೆಟ್ ತಂಡದ ಸದಸ್ಯರನ್ನು ಸನ್ಮಾನಿಸಿದರು.

ಐಬಿಎಸ್‌ಎ ವಿಶ್ವ ಕ್ರಿಕೆಟ್ ಪಂದ್ಯಾವಳಿಯಲ್ಲಿ (ಕ್ರಿಕೆಟ್ ಫಾರ್ ಬ್ಲೈಂಡ್) ಭಾರತೀಯ ಅಂಧ ಮಹಿಳಾ ಕ್ರಿಕೆಟ್ ತಂಡ ಚಿನ್ನದ ಪದಕ ಗೆದ್ದಿದ್ದು, ಅಂಧ ಪುರುಷರ ಕ್ರಿಕೆಟ್ ತಂಡ ಬೆಳ್ಳಿ ಪದಕವನ್ನು ಗೆದ್ದುಕೊಂಡಿದೆ.

ಭಾರತದ ಅಂಧ ಮಹಿಳಾ ಕ್ರಿಕೆಟ್ ತಂಡದ ನಾಯಕಿ ವರ್ಷಾ ಮತ್ತು ತಂಡದ ಆಟಗಾರ್ತಿಯರಾದ ದೀಪಿಕಾ, ಗಂಗವ್ವ ಮತ್ತು ಕರ್ನಾಟಕದ ಪುರುಷರ ತಂಡದ ಪ್ರಕಾಶ್ ಜೆ, ಸುನೀಲ್ ಕುಮಾರ್, ಬಸಪ್ಪ ವಡ್ಡಗೋಳ ಅವರನ್ನು ಮುಖ್ಯಮಂತ್ರಿಗಳು ಅಭಿನಂದಿಸಿದರು.

ಕಳೆದ ಆಗಸ್ಟ್‌ನಲ್ಲಿ ಐಬಿಎಸ್‌ಎ ವರ್ಲ್ಡ್ ಗೇಮ್ಸ್‌ನಲ್ಲಿ ಆಸ್ಟ್ರೇಲಿಯಾವನ್ನು ಒಂಬತ್ತು ವಿಕೆಟ್‌ಗಳಿಂದ ಸೋಲಿಸುವ ಮೂಲಕ ಭಾರತೀಯ ಅಂಧ ಮಹಿಳಾ ಕ್ರಿಕೆಟ್ ತಂಡ ಚಿನ್ನದ ಪದಕವನ್ನು ಗೆದ್ದು ಇತಿಹಾಸ ಸೃಷ್ಟಿಸಿದೆ.

ಕರ್ನಾಟಕ ರಾಜ್ಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ನೇತೃತ್ವದ ಪದಕ ವಿಜೇತ ಆಟಗಾರರ ತಂಡ ಇಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ತಮ್ಮ ಬೇಡಿಕೆಗಳನ್ನು ಸಲ್ಲಿಸಿದರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಮುಖ್ಯಮಂತ್ರಿಗಳು, ಗೋವಿಂದರಾಜು ಅವರೊಂದಿಗೆ ಪ್ರತ್ಯೇಕ ಚರ್ಚೆ ನಡೆಸಿ ಅವರ ಬೇಡಿಕೆಗಳ ಈಡೇರಿಕೆಗೆ ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಟಗಾರರೊಂದಿಗೆ ಸಂವಾದ ನಡೆಸಿ, ಆಟಗಾರರು ಪಡೆಯುವ ತರಬೇತಿ, ಚೆಂಡನ್ನು ಹೇಗೆ ಗುರುತಿಸುತ್ತಾರೆ, ಎಷ್ಟು ಪಂದ್ಯಗಳನ್ನು ಆಡಿದ್ದಾರೆ ಎಂಬಿತ್ಯಾದಿ ಕುತೂಹಲಕಾರಿ ಪ್ರಶ್ನೆಗಳನ್ನು ಕೇಳಿದರು.

ಉದಯಗಿರಿ ಠಾಣಾ ವ್ಯಾಪ್ತಿಯಲ್ಲಿ ನಾಲ್ವರು ನಾಪತ್ತೆ

ಮೈಸೂರು, ಸೆ.29–ಮೈಸೂರಿನ ಉದಯಗಿರಿ ಠಾಣಾ ವ್ಯಾಪ್ತಿಯಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ನಾಲ್ವರು ಕಾಣೆಯಾಗಿರುವ ಬಗ್ಗೆ ವರದಿಯಾಗಿದೆ.



ಅರ್ಬಾಜ್ ಖಾನ್ (26)

ಆ. 27ರಂದು ಬೆಳಗ್ಗೆ 8 ಗಂಟೆ ಸಮಯದಲ್ಲಿ ಮನೆಯಿಂದ ಹೊರಗೆ ಹೋದವನು ಇದುವರೆಗೂ ವಾಪಸ್ ಮನೆಗೆ ಬಂದಿಲ್ಲ ಎಂದು ಆತನ ತಂದೆ ದೂರಿನಲ್ಲಿ ತಿಳಿಸಿದ್ದಾರೆ.



ಲಿಂಗಮ್ಮ (82)

ಸೆ. 17 ರಂದು ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದವರು ವಾಪಸ್ಸು ಮನೆಗೆ ಬಂದಿಲ್ಲ ಎಂದು ದೂರು ದಾಖಲಾಗಿದೆ. ಸುಮಾರು 5.2 ಅಡಿ ಎತ್ತರ, ಚೆಕ್ಸ್ ಸೀರೆ, ಕೆಂಪು ಬಣ್ಣದ ರವಿಕೆ ಧರಿಸಿರುತ್ತಾರೆ. ದುಂಡು ಮುಖ ಸಾಧಾರಣ ಮೈಕಟ್ಟು, ಗೋಧಿ ಮೈಬಣ್ಣ, ಬಿಳಿ ತಲೆಕೂದಲು, ಕನ್ನಡ ಮಾತನಾಡುತ್ತಾರೆ.



ಸವಿತಾ (27)

ಆ. 28 ರಂದು ಬೆಳಗ್ಗೆ 10.30ರ ಸಮಯದಲ್ಲಿ ಮನೆಯಿಂದ ಹೊರ ಹೋದವರು ವಾಪಸ್ಸು ಮನೆಗೆ ಬಂದಿಲ್ಲ ಎಂದು ಆಕೆಯ ತಾಯಿ ಲಕ್ಷ್ಮಿ ದೂರು ದಾಖಲಿಸಿದ್ದಾರೆ. ಕೆಂಪು ಬಣ್ಣದ ಚೂಡಿದಾರ್ ಧರಿಸಿರುತ್ತಾರೆ. ಕೋಲು ಮುಖ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಹೊಂದಿದ್ದು, ಮಾತು ಬರುವುದಿಲ್ಲ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಉದಯಗಿರಿ ಪೊಲೀಸ್ ಠಾಣೆಗೆ ತಿಳಿಸಬೇಕಾಗಿ ಕೋರಲಾಗಿದೆ.



ಟಿ.ಪಿ.ಅನುಷಾ (21)

ಸರಗೂರು ತಾಲೂಕಿನ ತೆರಣಿಮುಂಟಿ ಗ್ರಾಮದ ನಿವಾಸಿ ಪ್ರಭುಸ್ವಾಮಿ ಗೌರಮ್ಮ ಅವರ ಪುತ್ರಿ ಟಿ.ಪಿ.ಅನುಷಾ (21) ಸೆ. 9 ರಂದು ಬೆಳಗ್ಗೆ 6 ಗಂಟೆ ಸಮಯದಲ್ಲಿ ಮೈಸೂರಿನ ಮಹಾರಾಣಿ ಕಾಲೇಜಿಗೆ ಪರೀಕ್ಷೆಗೆ ಹೋಗಿ ಬರುತ್ತೇನೆಂದು ಹೋದವರು ಇದುವರೆಗೆ ಮನೆಗೆ ವಾಪಸ್ ಬಂದಿಲ್ಲ ಎಂದು ಸರಗೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಠಾಣೆ ದೂ. 08228–265542, 9480805064 ಅನ್ನು ಸಂಪರ್ಕಿಸಲು ಕೋರಲಾಗಿದೆ.



ವಿಶ್ವಕರ್ಮ ಜಯಂತಿ ಅಂಗವಾಗಿ ಮೈಸೂರಿನ ಶ್ರೀ ವಿಶ್ವಕರ್ಮ ಜಯಂತಿ ಪೂಜಾ ಮಹೋತ್ಸವ ಸಮಿತಿ ವತಿಯಿಂದ ನಗರದ ಕೆ.ಟಿ.ಸ್ಟ್ರೀಟ್‌ನಲ್ಲಿರುವ ಶ್ರೀ ಕಾಳಿಕಾಂಬ ಕಮಟೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗ ಏರ್ಪಡಿಸಿದ್ದ ಶ್ರೀ ಭಗವಾನ್ ವಿಶ್ವಕರ್ಮ ಉತ್ಸವ ಮೂರ್ತಿ ಮೆರವಣಿಗೆಯನ್ನು ಶಾಸಕ ಹರೀಶ್‌ಗೌಡ ಉದ್ಘಾಟಿಸಿದರು. ಮಾಜಿ ಕಾರ್ಪೊರೇಟರ್ ಶಿವಣ್ಣ ಸೇರಿದಂತೆ ವಿಶ್ವಕರ್ಮ ಸಮುದಾಯದ ಮುಖಂಡರು ಈ ವೇಳೆ ಉಪಸ್ಥಿತರಿದ್ದರು.

ಮಹಿಷ ದಸರಾ ಆಚರಿಸಿದರೆ ಪ್ರತಿಭಟನೆ



ಮೈಸೂರು, ಸೆ.29(ಜಿಎ)– ಚಾಮುಂಡಿ ಬೆಟ್ಟದಲ್ಲಿ ಮಹಿಷ ದಸರಾ ಆಚರಣೆ ಮಾಡಿದರೆ, ರಾಷ್ಟ್ರೀಯ ಹಿಂದೂ ಸಮಿತಿ ಪ್ರತಿಭಟಿಸಲಿದೆ ಎಂದು ಅಧ್ಯಕ್ಷ ವಿಕಾಸ್ ಶಾಸ್ತ್ರಿ ಎಚ್ಚರಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವಾರು ದಿನಗಳಿಂದ ಮಹಿಷ ದಸರಾ ಆಚರಣೆ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಮಹಿಷ ದಸರಾ ಆಚರಣೆ ವೇಳೆ ಚಾಮುಂಡೇಶ್ವರಿಯನ್ನು ಕೆಟ್ಟದಾಗಿ ನಿಂದಿಸುವುದು ನಡೆದಿದೆ. ಮಹಿಷ ಓರ್ವ ಬೌದ್ಧ, ಆತನಿಗೂ ಚಾಮುಂಡೇಶ್ವರಿಗೂ ಸಂಬಂಧವೇ ಎನ್ನುತ್ತಾರೆ. ಈ ರೀತಿ ಧರ್ಮ–ಧರ್ಮದ ನಡುವೆ ಬೆಂಕಿ ಹಚ್ಚುವ ಕೆಲಸ ನಡೆಯುತ್ತಿದೆ ಎಂದು ವಿಷಾದಿಸಿದರು.

ನಾವು ಬುದ್ಧನನ್ನು ವಿರೋಧಿಸುತ್ತಿಲ್ಲ. ದಶಾವತಾರದಲ್ಲಿ ಬುದ್ಧನೂ ಒಬ್ಬನಾಗಿದ್ದಾನೆ. ಇನ್ನು, ಮಹಿಷನಿಂದಲೇ ಮೈಸೂರಿಗೆ ಈ ಹೆಸರು ಬಂತು ಎನ್ನುವುದು ಸರಿಯಲ್ಲ. ಇಲ್ಲಿ ಎಮ್ಮೆಗಳು ಹೆಚ್ಚಾಗಿದ್ದರಿಂದಾಗಿ ಮಹಿಷೂರು ಎಂಬ ಹೆಸರು ಬಂದಿದೆ ಎಂದು ವಾದಿಸುತ್ತಾರೆ. ಜೊತೆಗೆ, ಸರ್ಕಾರ ಸಹ ಕಾನೂನು–ಸುವ್ಯವಸ್ಥೆಗೆ ಅಡ್ಡಿಯುಂಟು ಮಾಡುವ ಮಹಿಷ ದಸರಾ ಆಚರಣೆಗೆ ಅನುಮತಿ ನೀಡಬಾರದೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಪ್ರದೀಪ್, ಗಗನ್ ಉಪಸ್ಥಿತರಿದ್ದರು.

ಕಾವೇರಿ ವಿವಾದ ಸೌಹಾರ್ದಯುತ ಪರಿಹಾರಕ್ಕೆ ಮನವಿ



ಮೈಸೂರು, ಸೆ29(ಜಿಎ)–ಕಾವೇರಿ ನೀರಿನ ವಿವಾದವನ್ನು ಉಭಯ ರಾಜ್ಯ ಗಳು ಶಾಂತಿ ಮತ್ತು ಸೌಹಾರ್ದತೆಯಿಂದ ಪರಿಹರಿಸಿಕೊಳ್ಳುವಂತೆ ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ಅಗತ್ಯ ಸೇವೆಗಳಲ್ಲಿ ಒಂದಾದ ಚಿಲ್ಲರೆ ಔಷಧಿ ವ್ಯಾಪಾರಿಗಳು ಕರ್ನಾಟಕ ಬಂದ್‌ಗೆ ಬೆಂಬಲ ಸೂಚಿಸಿ, ತಮ್ಮ ಕಾರ್ಯದ ನಡುವೆ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಕಾವೇರಿ ನೀರಿನ ವಿವಾದವನ್ನು ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಿ ಶೀಘ್ರವಾಗಿ ಬಗೆಹರಿಸುವಂತೆ ಮನವಿ ಮಾಡಿದರು. ಈ ವೇಳೆ ಅಧ್ಯಕ್ಷ ಎಂ.ರಾಜು, ಕಾರ್ಯಾಧ್ಯಕ್ಷ ರಾಜೇಶ್, ಕಾರ್ಯದರ್ಶಿ ಸಿ.ಕೆ.ಅರುಣ್ ಮತ್ತು ಖಜಾಂಚಿ ಮನ್ಸೂರ್ ಅಹ್ಮದ್ ಖಾನ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಇಂದು ತೃತೀಯ ಲಿಂಗಿಗಳಿಗೆ ಫ್ಯಾಷನ್ ಶೋ, ಮೇಕಪ್ ಸ್ಪರ್ಧೆ



ಮೈಸೂರು, ಸೆ.29(ಜಿಎ)– ಆಲ್ ಇಂಡಿಯಾ ಹೇರ್ ಅಂಡ್ ಬ್ಯೂಟಿ ಅಸೋಸಿಯೇಷನ್ ವತಿಯಿಂದ ಸೆ.30ರಂದು ತೃತೀಯ ಲಿಂಗಿಗಳಿಗೆ ಫ್ಯಾಷನ್ ಶೋ ಹಾಗೂ ರಾಜ್ಯ ಮಟ್ಟದ ಬ್ರೈಡ್ ಮತ್ತು ಕ್ರಿಯೇಟಿವ್ ಮೇಕಪ್ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷೆ ಉಮಾ ಜಾದವ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಮಾತನಾಡಿದ ಅವರು, ಅಂದು ನಗರದ ಹೋಟೆಲ್ ಕಿಂಗ್ಸ್ ಕೋರ್ಟ್‌ನಲ್ಲಿ ಮಧ್ಯಾಹ್ನ 2ರಿಂದ ಸಂಜೆ 6ರವರಗೆ ಫ್ಯಾಷನ್ ಶೋ ಹಾಗೂ ರಾಜ್ಯ ಮಟ್ಟದ ಬ್ರೈಡ್ ಮತ್ತು ಕ್ರಿಯೇಟಿವ್ ಮೇಕಪ್ ಸ್ಪರ್ಧೆ ಏರ್ಪಡಿಸಿದ್ದು, ಇದು ತೃತೀಯ ಲಿಂಗಿಗಳಲ್ಲಿರುವ ಪ್ರತಿಭೆಯನ್ನು ಹೊರತರುವ ಉದ್ದೇಶವಾಗಿದೆ ಎಂದರು.

ಆಡಿಷನ್‌ನಲ್ಲಿ ರಾಜ್ಯದ ಯಾವುದೇ ಭಾಗದ ತೃತೀಯ ಲಿಂಗಿಗಳು ಭಾಗವಹಿಸಬಹುದು. ಈಗಾಗಲೇ ಹುಬ್ಬಳ್ಳಿ ಸೇರಿದಂತೆ ಕೆಲವು ಭಾಗದಲ್ಲಿ ಆಡಿಷನ್ ನಡೆದಿದ್ದು, ಅದರಲ್ಲಿ ಭಾಗವಹಿಸಿ ಆಯ್ಕೆಯಾದವರು ಅ.28 ರಂದು ಚಿಕ್ಕಮಗಳೂರಿನಲ್ಲಿ ನಡೆಯಲಿರುವ ಗ್ರಾಂಡ್ ಫಿನಾಲೆಯಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅರ್ಪಣಾ, ಸಂಗೀತಾ, ಐರಾ, ಗಾಯಿತ್ರಿ, ಪ್ರಣತಿ ಪ್ರಕಾಶ್, ಕಲಿಯುಗ್ ಫೌಂಡೇಶನ್ ದೀಪು ಶಾಸ್ತ ಉಪಸ್ಥಿತರಿದ್ದರು.

ಇಂದು ಹೂಡಿಕೆದಾರರ ಮುಖಾಮುಖಿ



ಮೈಸೂರು, ಸೆ.29(ಜಿಎ)– ಬಿಯಾಂಡ್ ಬ್ರೈನ್ ಸಂಸ್ಥೆ ವತಿಯಿಂದ ಸೆ.30 ರಂದು ನಗರದ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಸ್ಟಾರ್ಟ್ ಅಪ್ ಹಾಗೂ ಹೂಡಿಕೆದಾರರ ಮುಖಾಮುಖಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸಿಇಒ ಸಾಗರ್ ಮಲ್ಲು ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30 ರಿಂದ ಸಂಜೆ 6.30 ರವರೆಗೆ ಕಾರ್ಯಕ್ರಮ ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ 40 ಮಂದಿ ಹೂಡಿಕೆದಾರರು 20ಕ್ಕೂ ಅಧಿಕ ಸ್ಟಾರ್ಟ್ ಅಪ್ ನಡೆಸುತ್ತಿರುವವರು ಆಗಮಿಸುತ್ತಿದ್ದಾರೆ. ನೂತನ ಸ್ಟಾರ್ಟ್ ಅಪ್‌ಗಳಿಗೆ ಹೂಡಿಕೆ ದೊರಕಿಸಿಕೊಡುವ ಪ್ರಯತ್ನ ಇದಾಗಿದ್ದು, ಜೊತೆಗೆ ಸ್ಟಾರ್ಟ್ ಅಪ್‌ಗಳಿಗೆ ಅಗತ್ಯವಾದ ಮಾಹಿತಿಯನ್ನು ತಜ್ಞರು ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗೆ ದೂ. 79756 36049 ಅನ್ನು ಸಂಪರ್ಕಿಸಿ ಎಂದರು ಸುದ್ದಿಗೋಷ್ಠಿಯಲ್ಲಿ ನಿತಿನ್, ರಾಹುಲ್ ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದ ಮೆಟ್ಟಿಲು ಸ್ವಚ್ಛಗೊಳಿಸಿದ ವಿದ್ಯಾರ್ಥಿಗಳು

ಕೇಂದ್ರ ರಕ್ಷಣಾ ಮತ್ತು ಪ್ರವಾಸೋದ್ಯಮ ಸಚಿವ ಅಜಯ್ ಭಟ್ ಅವರಿಂದ ಸ್ವಚ್ಛತಾ ಕಾರ್ಯನಿರತ ವಿದ್ಯಾರ್ಥಿಗಳಿಗೆ ಶುಭ ಹಾರೈಕೆ



ಮೈಸೂರು, ಸೆ. 29(ಆರ್‌ಕೆ)– ಪ್ರವಾಸೋದ್ಯಮ ಇಲಾಖೆ ಆಶ್ರಯದಲ್ಲಿ ಮೈಸೂರಿನ ಚಾಮುಂಡಿಬೆಟ್ಟದ ಮೆಟ್ಟಿಲುಗಳನ್ನು ಇಂದು ಸ್ವಚ್ಛಗೊಳಿಸಲಾಯಿತು.

ಮೈಸೂರು ಮಹಾನಗರ ಪಾಲಿಕೆ ಹಾಗೂ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಸ್ವಚ್ಛ ಭಾರತ ಮಿಷನ್ ಮತ್ತು ವಿಶ್ವ ಪ್ರವಾಸೋದ್ಯಮ ದಿನಾಚರಣೆ–2023 ಅಂಗವಾಗಿ ಏರ್ಪಡಿಸಲಾಗಿದ್ದ ಸ್ವಚ್ಛತಾ ಪಕ್ವಾಡ ಕಾರ್ಯಕ್ರಮದಲ್ಲಿ ಕೇಂದ್ರ ಪ್ರವಾಸೋದ್ಯಮ ಸಚಿವ ಅಜಯ್ ಭಟ್ ಪಾಲ್ಗೊಂಡು ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ಚಾಮುಂಡಿಬೆಟ್ಟದ ಪಾದದಿಂದ ಮೆಟ್ಟಿಲುಗಳನ್ನು ಸ್ವಚ್ಛಗೊಳಿಸಿದ ಅವರು, ಬೆಟ್ಟದ ಮೇಲೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಆವರಣವನ್ನೂ ಸ್ವಚ್ಛಗೊಳಿಸಿ, ತ್ಯಾಜ್ಯ ವಿಲೇವಾರಿ ಮಾಡಿದರು. ಪಾಲಿಕೆ ಪೌರಕಾರ್ಮಿಕರು ಸ್ವಯಂ ಸೇವಕರಿಗೆ ಈ ಸಂದರ್ಭ ಸಾಥ್ ನೀಡಿದರು.

ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ. ಸವಿತಾ, ಸಹಾಯಕ ನಿರ್ದೇಶಕ ರಾಘವೇಂದ್ರ, ಕೆಎಸ್‌ಟಿಡಿಸಿ ವ್ಯವಸ್ಥಾಪಕ ದಾಸ್, ಮೈಸೂರು ಪ್ರವಾಸಿ ಮಾರ್ಗದರ್ಶಿಗಳ ಸಂಘದ ಅಧ್ಯಕ್ಷ ಅಶೋಕ್, ಪಾಲಿಕೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮೃತ್ಯುಂಜಯ, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಾದ ಶಿವಪ್ರಸಾದ್, ಪ್ರೀತಿ, ವಿದ್ಯಾವರ್ಧಕ ಪದವಿ ಕಾಲೇಜಿನ ಡಾ. ಬಿ.ಎಸ್. ಶ್ರೀಹರ್ಷ, ಪ್ರೊ. ಸಿದ್ದರಾಜು, ವಿ. ರಮೇಶ್, ಮಿಲಿಟರಿ ಅಧಿಕಾರಿ ಸುಬೇದಾರ ಬಾಲವತ್ ಸಿಂಗ್, ಎನ್‌ಸಿಸಿ 13 ಕರ್ನಾಟಕ ಬೆಟಾಲಿಯನ್ ಕೆಡೆಟ್‌ಗಳು, ವಿದ್ಯಾವರ್ಧಕ ಪದವಿ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ 150ಕ್ಕೂ ಹೆಚ್ಚು ಮಂದಿ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಬೆಳಗ್ಗೆ 7.30ರಿಂದ 9.30 ಗಂಟೆವರೆಗೆ ನಡೆದ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡವರಿಗೆ ಚಾಮುಂಡಿಬೆಟ್ಟದಲ್ಲಿ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ಇದೇ ವೇಳೆ ಕೇಂದ್ರ ಪ್ರವಾಸೋದ್ಯಮ ಸಚಿವ ಅಜಯ್ ಭಟ್ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದರು.

ಅ.4ರಂದು ಯಕ್ಷಗಾನ ಪ್ರದರ್ಶನ



ಮೈಸೂರು, ಸೆ. 29(ಆರ್‌ಕೆ)– ಬಂಟರ ಸಂಘ, ಡಿ. ಚಂದ್ರಶೇಖರ ಶೆಟ್ಟಿ ಹಾಗೂ ಯಕ್ಷಗಾನ ಕಲಾಭಿಮಾನಿ ಸ್ನೇಹ ಬಳಗದ ಪ್ರಾಯೋಜಕತ್ವದಲ್ಲಿ ಅಕ್ಟೋಬರ್ 4ರಂದು ಸಂಜೆ 4.30 ಗಂಟೆಗೆ ಮೈಸೂರಿನ ವಿಜಯನಗರ 3ನೇ ಹಂತದ ಆಶಾ ಪ್ರಕಾಶ್ ಶೆಟ್ಟಿ ಬಂಟರ ಭವನದಲ್ಲಿ "ಕೀಚಕ ವಧೆ ಮತ್ತು ಬರ್ಬರೀಕ" ಬಡಗುತಿಟ್ಟು ಯಕ್ಷಗಾನ ಪ್ರದರ್ಶನ ನಡೆಯಲಿದೆ.


ಜಲವಳ್ಳಿ ಯಕ್ಷ ಬಳಗದ ಪ್ರಸ್ತುತಪಡಿಸುವ ಯಕ್ಷಗಾನದ ಹಿಮ್ಮೇಳದಲ್ಲಿ ವಿ. ಚಂದ್ರಕಾಂತರಾವ್ (ಭಾಗವತರು), ಅನಿರುದ್ಧ ಹೆಗಡೆ (ಮದ್ದಳೆ) ಹಾಗೂ ಸುಜನ್‌ಕುಮಾರ್ ಹಾಲಾಡಿ (ಚಂಡೆ) ಪಾಲ್ಗೊಳ್ಳುವರು.

ಕಾವೇರಿ ತವರಲ್ಲಿ ಕರ್ನಾಟಕ ಬಂದ್ ನೀರಸ

ಗುಡ್ಡೆಹೊಸೂರು, ಕುಶಾಲನಗರದಲ್ಲಿ ಬಿಜೆಪಿ ಪ್ರತಿಭಟನೆ

ವ್ಯಾಪಾರ ವಹಿವಾಟು ಎಂದಿನಂತೆಯೇ, ಜನಜೀವನ ಸಹಜ ಸ್ಥಿತಿಯಲ್ಲಿ





ಮಡಿಕೇರಿ, ಸೆ.29– ರಾಜ್ಯದ ರೈತರು ಮತ್ತು ಜನತೆಯ ಹಿತವನ್ನೂ ಮರೆತು ತಮಿಳುನಾಡಿಗೆ 'ಕಾವೇರಿ' ನೀರು ಹರಿಸುತ್ತಿರುವುದನ್ನು ಖಂಡಿಸಿ ವಿವಿಧ ಕನ್ನಡ ಪರ ಸಂಘಟನೆಗಳು ಕರೆ ನೀಡಿದ್ದ 'ಕರ್ನಾಟಕ ಬಂದ್'ಗೆ ಕಾವೇರಿ ತವರು ಕೊಡಗು ಜಿಲ್ಲೆಯಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಜಿಲ್ಲೆಯ ವಿವಿಧ ಭಾಗಗಳಲ್ಲಿ ಕೆಲ ಬೆರಳೆಣಿಕೆ ಸಂಘಟನೆಗಳು ಮತ್ತು ಗುಡ್ಡೆಹೊಸೂರಿನಲ್ಲಿ ಅಲ್ಲಿನ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಹಾಗೂ ಕುಶಾಲನಗರದಲ್ಲಿ ಬಿಜೆಪಿ ಪ್ರಮುಖರು ಪ್ರತಿಭಟನೆ ನಡೆಸಿ ರಾಜ್ಯ ಕಾಂಗ್ರೆಸ್ ಸರಕಾರ ಮತ್ತು ತಮಿಳುನಾಡು ಸರಕಾರ ಹಾಗೂ ಅಲ್ಲಿನ ಮುಖ್ಯಮಂತ್ರಿ ಸ್ಟ್ಯಾಲಿನ್ ವಿರುದ್ಧ ತೀವ್ರ ಆಕ್ರೋಷ ವ್ಯಕ್ತಪಡಿಸಿದರು. ಇದನ್ನು ಹೊರತುಪಡಿಸಿದಂತೆ ಕಾವೇರಿ ತವರಿಗೆ ಕರ್ನಾಟಕ ಬಂದ್‌ನ ಯಾವುದೇ ಬಿಸಿ ತಟ್ಟಲಿಲ್ಲ. ಮಡಿಕೇರಿ, ಸೋಮವಾರಪೇಟೆ, ಕುಶಾಲನಗರ, ವಿರಾಜಪೇಟೆ ಮತ್ತು ಪೊನ್ನಂಪೇಟೆ ತಾಲೂಕುಗಳಲ್ಲಿ ಜನಜೀವನ, ವ್ಯಾಪಾರ ವಹಿವಾಟು ಮತ್ತು ವಾಹನ ಸಂಚಾರ ಯಥಾಸ್ಥಿತಿಯಲ್ಲಿ ಮುಂದುವರೆದಿತ್ತು.

ಮಡಿಕೇರಿ ವರದಿ: ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಕರ್ನಾಟಕ ಬಂದ್‌ನ ಯಾವುದೇ ಪರಿಣಾಮ ಉಂಟಾಗಿಲ್ಲ. ಜಿಲ್ಲಾ ಕೇಂದ್ರದಿಂದ ಸಂಚರಿಸುವ ಕೆಎಸ್‌ಆರ್‌ಟಿಸಿ ಸಹಿತ ಖಾಸಗಿ ಬಸ್‌ಗಳು ಎಂದಿನಂತೆ ಸೇವೆ ನೀಡಿದವು. ಆದರೆ ಮೈಸೂರು ಕಡೆಯಿಂದ ಯಾವುದೇ ಬಸ್‌ಗಳು ಬರದಿರುವ ಕಾರಣ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ಕಡಿಮೆ ಇತ್ತು. ಇನ್ನುಳಿದಂತೆ ಹಾಸನ, ಸುಳ್ಯ, ಮಂಗಳೂರು ಹಾಗೂ ನೆರೆಯ ಕೇರಳ ರಾಜ್ಯ ಸಂಪರ್ಕಿಸುವ ಎಲ್ಲಾ ಬಸ್‌ಗಳ ಸಂಚಾರ ಯಥಾಸ್ಥಿತಿಯಲ್ಲಿ ಮುಂದುವರೆದಿತ್ತು. ಮಾತ್ರವಲ್ಲದೇ ಜಿಲ್ಲೆಯಲ್ಲಿ ಎಲ್ಲಾ ರೀತಿಯ ವಾಹನ ಸಂಚಾರ ಎಂದಿನಂತಿತ್ತು. ಶುಕ್ರವಾರ ಮಡಿಕೇರಿ ಸಂತೆಯೂ ನಿರ್ವಿಘ್ನವಾಗಿ ಸಾಗಿತ್ತು. ಪಕ್ಕದ ಹಾಸನ, ಕೊಣನೂರು, ರಾಮನಾಥಪುರ, ಪಿರಿಯಾಪಟ್ಟಣ ಮತ್ತು ಜಿಲ್ಲೆಯ ಕೆಲವು ಕಡೆಗಳಿಂದ ವಾರದ ಸಂತೆಗೆ ಆಗಮಿಸುವ ವ್ಯಾಪಾರಿಗಳು ಎಂದಿನಂತೆ ಆಗಮಿಸಿ, ವಹಿವಾಟು ನಡೆಸಿದರು. ಜಿಲ್ಲೆಯ ಎಲ್ಲಾ ಸರಕಾರಿ ಖಾಸಗಿ ಶಾಲಾ ಕಾಲೇಜುಗಳು, ಸರಕಾರಿ ಕಚೇರಿಗಳು ಬ್ಯಾಂಕ್‌ಗಳು, ಉದ್ದಿಮೆಗಳು ಪ್ರತಿ ದಿನದಂತೆ ಕಾರ್ಯ ನಿರ್ವಹಿಸಿದವು.

ಕುಶಾಲನಗರ ವರದಿ: ಕರ್ನಾಟಕದಿಂದ ತಮಿಳುನಾಡಿಗೆ ನೀರು ಬಿಡುಗಡೆ ಖಂಡಿಸಿ ಕರ್ನಾಟಕ ಕಾವಲುಪಡೆ ವತಿಯಿಂದ ಕುಶಾಲನಗರದಲ್ಲಿ ಪ್ರತಿಭಟನೆ ನಡೆಯಿತು. ಕೊಡಗು–ಮೈಸೂರು ಗಡಿ ಭಾಗದ ಕಾವೇರಿ ಸೇತುವೆ ಸಮೀಪದ ಅರಣ್ಯ ತಪಾಸಣಾ ಗೇಟ್ ಬಳಿಯಿಂದ ಪ್ರತಿಭಟನೆ ಆರಂಭಿಸಿ ಕಾವೇರಿ ಮಾತೆ ಪ್ರತಿಮೆವರೆಗೆ ಮೆರವಣಿಗೆ ನಡೆಸಲಾಯಿತು. ಕಾವೇರಿ ಮಾತೆಗೆ ಪೂಜೆ ಸಲ್ಲಿಸಿ ಅರುಣಿಕೆಯಾಗಿ ನದಿಗಿಳಿದು ಪ್ರತಿಭಟಿಸಲು ಮುಂದಾದ ಸಂದರ್ಭ ಕುಶಾಲನಗರ ಮತ್ತು ಬೈಲುಕೊಪ್ಪ ಠಾಣೆ ಪೊಲೀಸರು ಪ್ರತಿಭಟನಾಕಾರರನ್ನು ತಡೆ ಹಿಡಿದರು. ಅರುಣಿಕೆಯಾಗಿ ಕೆಲಕಾಲ ಪ್ರತಿಭಟಿಸಿದ ಕಾವಲು ಪಡೆ ಕಾರ್ಯಕರ್ತರು ತಮಿಳುನಾಡು ಹಾಗೂ ಕರ್ನಾಟಕ ಸರಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕಾವಲು ಪಡೆ ಜಿಲ್ಲಾಧ್ಯಕ್ಷ ಎಂ.ಕೃಷ್ಣ ಪಿರಿಯಾಪಟ್ಟಣ ತಾಲೂಕು ಅಧ್ಯಕ್ಷ ಸುಬ್ರಮಣಿ, ಕಾವಲುಪಡೆ ಪ್ರಮುಖರಾದ ಅಭಿಲಾಷ್, ಅರುಣ್, ಗಣೇಶ್, ಅಜೀಜ್, ಬಾಬು, ಕುಮಾರ್, ನರೇಂದ್ರ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಬಿಜೆಪಿ ಪ್ರತಿಭಟನೆ: ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಕುಶಾಲನಗರದಲ್ಲಿ ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಯಿತು. ಕುಶಾಲನಗರದ ಗಣಪತಿ ದೇವಾಲಯ ಮುಂಭಾಗ ಪ್ರತಿಭಟಿಸಿದ ಬಿಜೆಪಿ ಕಾರ್ಯಕರ್ತರು, ತಮಿಳುನಾಡು ಹಾಗೂ ಕರ್ನಾಟಕ ಸರಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಮಾನವ ಸರಪಳಿ ರಚಿಸಿ, ಎರಡೂ ಸರಕಾರಗಳ ವಿರುದ್ಧ ಘೋಷಣೆಗಳನ್ನು ಕೂಗಲಾಯಿತು. ಈ ಸಂದರ್ಭ ಮಾತನಾಡಿದ ನಗರ ಬಿಜೆಪಿ ಅಧ್ಯಕ್ಷ ಉಮಾಶಂಕರ್, ರೈತರ ಹೋರಾಟಕ್ಕೆ ಜಯಸಿಗಲು ಬಿಜೆಪಿ ಕಾರ್ಯಕರ್ತರು ಹೋರಾಟದಲ್ಲಿ ಕೈಜೋಡಿಸಿದ್ದಾರೆ. ಕಾವೇರಿ ನೀರಿನ ಪಾಲಿನಲ್ಲಿ ರಾಜ್ಯದ ರೈತರಿಗೆ ಮೊದಲ ಆದ್ಯತೆ ದೊರೆಯಬೇಕಿದೆ ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಬಿಜೆಪಿ ಪ್ರಮುಖರಾದ ಕೆ.ಜಿ.ಮನು, ಜೈವರ್ಧನ್, ಕುಮಾರಪ್ಪ, ರೂಪಾ ಉಮಾಶಂಕರ್, ಎಂ.ಎಂ.ಚರಣ್, ನವನೀತ್, ದೇವರಾಜ್, ಮಣಿಕಂಠ, ಪ್ರಶಾಂತ್, ಪ್ರವೀಣ್, ನಾರಾಯಣ್, ಸೋಮಶೇಖರ್, ಚಂದ್ರಶೇಖರ್ ಹೆರೂರು, ಸುಮನ್, ಸದಾಶಿವ, ರಕ್ಷಣಾ ವೇದಿಕೆಯ ಜಗದೀಶ್, ಅಣ್ಣಪ್ಪ ಮತ್ತಿತರರಿದ್ದರು.

ಸಭೆ ಮುಂದೂಡಿ ಪ್ರತಿಭಟನೆ: ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಜನಪ್ರತಿನಿಧಿಗಳು ತಮ್ಮ ಮಾಸಿಕ ಸಭೆ ಮೊಟಕುಗೊಳಿಸಿ ಕಾವೇರಿ ನೀರಿನ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಭಟನೆ ನಡೆಸಿದ ಘಟನೆ ನಡೆಯಿತು. ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಪದಾಧಿಕಾರಿಗಳು, ಗ್ರಾಮಸ್ಥರು ಹಾಗೂ ಆಟೋ ಚಾಲಕರುಗಳೊಂದಿಗೆ ಗ್ರಾಮದ ಶಿವಕುಮಾರ ಸ್ವಾಮಿ ವೃತ್ತದಲ್ಲಿ ಮಾನವ ಸರಪಳಿ ರಚಿಸಿ, ಪ್ರತಿಭಟನೆ ನಡೆಸಿ ಕಾವೇರಿ ಪರ ಘೋಷಣೆ ಮೊಳಗಿಸಿದರು. ಈ ಸಂದರ್ಭ ಮಾತನಾಡಿದ ಗ್ರಾಮ ಪಂಚಾಯಿತಿ ಅಧ್ಯಕ್ಷೆ ರಶ್ಮಿ ಹಾಗೂ ಸದಸ್ಯ ಪ್ರವೀಣ್, ಜೀವಜಲಕ್ಕಾಗಿ ಹಮ್ಮಿಕೊಂಡಿರುವ ಈ ಹೋರಾಟಕ್ಕೆ ಬೆಂಬಲ ಸೂಚಿಸುವುದು ಕನ್ನಡಿಗರ ಜವಾಬ್ದಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಸಭೆಯನ್ನು ಮುಂದೂಡಿ ಹೋರಾಟದಲ್ಲಿ ಪಾಲ್ಗೊಳ್ಳಲಾಗಿದೆ ಎಂದು ತಿಳಿಸಿದರು. ಪ್ರತಿಭಟನೆಯಲ್ಲಿ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷ ಮಾದಪ್ಪ ಮತ್ತು ಸದಸ್ಯರು, ಗ್ರಾಮಸ್ಥರಾದ ಜಯಪ್ರಕಾಶ್, ಅಭಿಷೇಕ್ ಮತ್ತಿತರರು ಪಾಲ್ಗೊಂಡಿದ್ದರು.

ಕಾರು–ಬಸ್ಸು ನಡುವೆ ಡಿಕ್ಕಿ



ನಾಪೋಕ್ಲು, ಸೆ.29– ಸಮೀಪದ ಮರಂದೋಡ ಗ್ರಾಮದಲ್ಲಿ ಗುರುವಾರ ಸಂಜೆ ಕಾರು ಮತ್ತು ಖಾಸಗಿ ಬಸ್ಸು ನಡುವೆ ಡಿಕ್ಕಿ ಸಂಭವಿಸಿದೆ. ಮರಂದೋಡ ಕೇಕುಮಾನಿ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ಎರಡು ವಾಹನಗಳು ಮುಖಾಮುಖಿ ಡಿಕ್ಕಿಯಾಗಿ ವಾಹನಗಳು ಜಖಂಗೊಂಡಿದ್ದು ಸಣ್ಣ ಪುಟ್ಟ ಗಾಯಗಳಾಗಿ ಹೆಚ್ಚಿನ ಹಾನಿ ಸಂಭವಿಸಿಲ್ಲ. ಗ್ರಾಮಸ್ಥರು ಹಾಗೂ ನಾಪೋಕ್ಲು ಪೊಲೀಸರು ವಾಹನಗಳನ್ನು ರಸ್ತೆಯಿಂದ ತೆರವುಗೊಳಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹುಲಿ ದಾಳಿ: ಹಸುಗೆ ಗಾಯ

ಗೋಣಿಕೊಪ್ಪ, ಸೆ.29– ಮಾಯಮುಡಿ ಗ್ರಾಮದಲ್ಲಿ ಮೇಯುತ್ತಿದ್ದ ಹಸುವಿನ ಮೇಲೆ ಹುಲಿ ದಾಳಿ ನಡೆಸಿದ್ದು, ಹಸು ಪ್ರಾಣಾಪಾಯದಿಂದ ಪಾರಾಗಿದೆ. ಸ್ಥಳಕ್ಕೆ ತಿತಿಮತಿ ಅರಣ್ಯ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗ್ರಾಮದ ಮನೋಜ್ ಚನ್ನರಾಜ್ ಅವರಿಗೆ ಸೇರಿದ ಹಸುವನ್ನು ಗದ್ದೆಯಲ್ಲಿ ಮೇಯಲು ಬಿಟ್ಟಿದ್ದಾಗ ಬೆಳಗ್ಗೆ 9 ಗಂಟೆ ಸುಮಾರಿಗೆ ದಾಳಿ ನಡೆಸಿದೆ. ಹಸುವಿನ ಮೇಲೆ ಪರಚಿದ ಗಾಯವಿದ್ದು, ಕತ್ತಿನ ಭಾಗಕ್ಕೆ ಕೂಡ ಗಾಯವಾಗಿದೆ. ಗ್ರಾಮದಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ.



ಗಣೇಶ ವಿಸರ್ಜನೆ

ವಿರಾಜಪೇಟೆ, ಸೆ.29– ವಿರಾಜಪೇಟೆಯ ದೇವರಾಜ ಅರಸು ನಗರದ ಶ್ರೀವಿಘ್ನೇಶ್ವರ ಸೇವಾ ಸಮಿತಿಯಿಂದ 43ನೇ ವರ್ಷದ ಗೌರಿ ಗಣೇಶೋತ್ಸವನ್ನು ವಿಜೃಂಭಣೆಯಿಂದ ಆಚರಿಸಿ ನಗರದ ಮುಖ್ಯ ಬೀದಿಯಲ್ಲಿ ವಾದ್ಯಗೋಷ್ಠಿಯೊಂದಿಗೆ ಮೆರವಣಿಗೆ ನಡೆಸಿ ಪವಿತ್ರ ಗೌರಿಕೆರೆಯಲ್ಲಿ ವಿಸರ್ಜಿಸಲಾಯಿತು.

ಮಡಿಕೇರಿ ಹೊರವಲಯದಲ್ಲಿ ಮಗುವಿನ ಭ್ರೂಣ ಪತ್ತೆ

ಸ್ಥಳೀಯರ ಅಸಮಾಧಾನ, ಪೊಲೀಸರು ಭೇಟಿ

ಮಡಿಕೇರಿ, ಸೆ.29– ಮಡಿಕೇರಿ ನಗರದ ಹೊರವಲಯದಲ್ಲಿ ಮಗುವಿನ ಭ್ರೂಣವನ್ನು ರಸ್ತೆ ಬದಿ ಎಸೆದು ಹೋಗಿರುವ ಅಮಾನವೀಯ ಘಟನೆ ನಡೆದಿದೆ. ಮಡಿಕೇರಿಯಿಂದ ಭಾಗಮಂಡಲಕ್ಕೆ ತೆರಳುವ ತಾಳತ್‌ಮನೆ ಬಳಿ ಶುಕ್ರವಾರ ಬೆಳಗ್ಗೆ ಭ್ರೂಣ ಪತ್ತೆಯಾಗಿದೆ.

ಜನವಸತಿ ಪ್ರದೇಶದ ರಸ್ತೆ ಬದಿಯಲ್ಲಿ ಭ್ರೂಣ ಎಸೆದು ಹೋಗಿದ್ದು, ಸ್ಥಳೀಯರು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮಡಿಕೇರಿ ಗ್ರಾಮಾಂತರ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ಭ್ರೂಣವನ್ನು ವಶಕ್ಕೆ ಪಡೆದಿದ್ದಾರೆ. ಬಳಿಕ ಭ್ರೂಣದ ಮರಣೋತ್ತರ ಪರೀಕ್ಷೆ ನಡೆಸಲು ಮಡಿಕೇರಿ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸಿದರು.

ಮಕ್ಕಳೇ ಇಲ್ಲ ಎಂದು ಎಷ್ಟೋ ಬಂದಿ ಕೊರಗುವ ಈ ಕಾಲದಲ್ಲಿ ಹೀಗೆ ಅಮಾನವೀಯವಾಗಿ ಭ್ರೂಣವನ್ನು ರಸ್ತೆ ಬದಿ ಎಸೆದು ಹೋಗಿರುವುದಕ್ಕೆ ಸ್ಥಳೀಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಕಠಿಣ ಶಿಕ್ಷೆ ವಿಧಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಗೋಣಿಕೊಪ್ಪದಲ್ಲಿ ಮಾನವ ಸರಪಳಿ



ಮಡಿಕೇರಿ, ಸೆ.29– ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ರಾಜ್ಯ ಸರ್ಕಾರ ತಡೆ ಹಿಡಿಯಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಕೊಡಗು ಜಿಲ್ಲಾ ಘಟಕದ ವತಿಯಿಂದ ಗೋಣಿಕೊಪ್ಪಲು ಬಸ್ ನಿಲ್ದಾಣದ ಮುಂಭಾಗ ಮಾನವ ಸರಪಳಿ ರಚಿಸಿ, ಪ್ರತಿಭಟಿಸಲಾಯಿತು.

ಸುಮಾರು 15 ನಿಮಿಷ ರಸ್ತೆ ತಡೆ ನಡೆಸಿ, ರಾಜ್ಯ ಸರ್ಕಾರದ ನಿರ್ಧಾರವನ್ನು ಖಂಡಿಸಲಾಯಿತು. ರೈತ ಸಂಘದ ಸದಸ್ಯರು ಒಟ್ಟಾಗಿ ಹಸಿರು ಶಾಲು ಬೀಸುವ ಮೂಲಕ ಕಾವೇರಿ ನೀರು ಹೋರಾಟಕ್ಕೆ ಬೆಂಬಲ ಸೂಚಿಸಿದರು.

ರಾಜ್ಯ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳುವಲ್ಲಿ ಎಡವುತ್ತಿದೆ. ಅಭಿವೃದ್ಧಿ ಚಿಂತನೆಗಿಂತ ಪಕ್ಷದಿಂದ ಮತ ಪಡೆಯುವ ಯೋಜನೆಗೆ ಒತ್ತು ನೀಡಲಾಗಿದೆ. ಉಚಿತ ಯೋಜನೆಗಳ ಮೂಲಕ ಅನಾವಶ್ಯಕ ಗೊಂದಲ ಸೃಷ್ಟಿಸಿ, ಅಭಿವೃದ್ಧಿ ಕುಂಠಿತವಾಗುವಂತಾಗಿದೆ. ಜನರ ಕೂಗು ಸರ್ಕಾರಕ್ಕೆ ಕೇಳಿಸುತ್ತಿಲ್ಲ. ಕೊಡಗಿನ ಸಾಕಷ್ಟು ಜನರು ಮೈಸೂರು, ಬೆಂಗಳೂರು ನಗರಗಳಲ್ಲಿ ಕಾವೇರಿ ನೀರನ್ನು ಅವಲಂಭಿಸಿದ್ದಾರೆ. ಅವರ ಜೀವನ ವನ್ನು ಸರ್ಕಾರ ಕಡೆಗಣಿಸುತ್ತಿದೆ ಎಂಬ ಆರೋಪ ಪ್ರತಿಭಟನಾಕಾರರಿಂದ ವ್ಯಕ್ತವಾಯಿತು.

ರೈತ ಸಂಘದ ಪ್ರಧಾನ ಕಾರ್ಯದರ್ಶಿ ಚೆಟ್ರುಮಾಡ ಸುಜಯ್ ಬೋಪಯ್ಯ, ಸಂಚಾಲಕ ಪುಚ್ಚಿಮಾಡ ಸುಬಾಷ್, ಮುಖಂಡರಾದ ಚೆಪ್ಪುಡೀರ ಕಾರ್ಯಪ್ಪ, ಇಟ್ಟೀರ ಸಬಿತಾ, ಮೇಚಂಡ ಕಿಸಾ ಮಾಚಯ್ಯ, ಕಂಬ ಕಾರ್ಯಪ್ಪ, ಮಂಡೇಪಂಡ ಪ್ರವೀಣ್, ಪುಚ್ಚಿಮಾಡ ರಾಯ್ ಮಾದಪ್ಪ, ಚೊಟ್ಟೆಕಾಳಪಂಡ ಮನು, ತೀತರಮಾಡ ರಾಜಾ ಕರುಂಬಯ್ಯ, ಮಲಚೀರ ಅನಿಲ್, ತೀತಮಾಡ ಶರಣು, ತೀತರಮಾಡ ಸುನಿಲ್, ದಾದಾ, ಪುಳ್ಳಂಗಡ ವಿನೋದ್, ಚೇತನ್ ಪೊನ್ನಪ್ಪ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ ಬಂದ್‌ಗೆ ಗಡಿ ಜಿಲ್ಲೆ ಸ್ತಬ್ಧ



ಚಾಮರಾಜನಗರ, ಸೆ.29– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಕನ್ನಡಪರ, ರೈತ ಸಂಘಟನೆಗಳು ಶುಕ್ರವಾರ ಕರೆ ನೀಡಿದ್ದ ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಗಡಿ ಜಿಲ್ಲೆ ಚಾಮರಾಜನಗರ ಸಂಪೂರ್ಣ ಸ್ತಬ್ಧಗೊಂಡಿತ್ತು.

ಕಾವೇರಿ ಹೋರಾಟ ಕ್ರಿಯಾ ಸಮಿತಿಯಿಂದ ಜಿಲ್ಲೆಯಲ್ಲಿ ಕರೆ ನೀಡಿದ್ದ ಸ್ವಯಂ ಪ್ರೇರಿತ ಬಂದ್‌ಗೆ ಜಿಲ್ಲೆಯ 30ಕ್ಕೂ ಹೆಚ್ಚು ಸಂಘಟನೆಗಳು ಸೇರಿದಂತೆ ಸಾರ್ವಜನಿಕರಿಂದ ಭಾರೀ ಬೆಂಬಲ ವ್ಯಕ್ತವಾದ ಹಿನ್ನೆಲೆಯಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿತ್ತು.

ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ಸೇರಿದಂತೆ ಜಿಲ್ಲಾದ್ಯಂತ ಬಂದ್ ಯಶಸ್ವಿಯಾಯಿತು. ನರ್ಸಿಂಗ್ ಹೋಂ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಆಸ್ಪತ್ರೆ ಹಾಗೂ ಔಷಧಿ ಅಂಗಡಿಗಳನ್ನು ಹೊರತುಪಡಿಸಿ ಬೇರೆ ಯಾವ ಮಳಿಗೆಗಳೂ ತೆರೆದಿರಲಿಲ್ಲ. ಇದರಿಂದ ಜಿಲ್ಲಾದ್ಯಂತ ವ್ಯಾಪಾರ ವಹಿವಾಟು ಸ್ಥಗಿತಗೊಂಡಿತ್ತು.

ಜಿಲ್ಲಾ ಕೇಂದ್ರ ಸ್ತಬ್ಧ: ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಚಾಮರಾಜನಗರದ ದೊಡ್ಡಂಗಡಿ ಬೀದಿ, ಚಿಕ್ಕ ಅಂಗಡಿ ಬೀದಿ, ತರಕಾರಿ ಮಾರುಕಟ್ಟೆ ಸೇರಿದಂತೆ ಪ್ರಮುಖ ಬೀದಿ ಹಾಗೂ ರಸ್ತೆಗಳ ಅಂಗಡಿ– ಮುಂಗಟ್ಟು ಬಂದ್ ಆಗಿ ಸದಾ ಜನದಟ್ಟಣೆಯಿಂದ ಗಿಜುಗುಡುತ್ತಿದ್ದ ಬೀದಿಗಳು ಬಿಕೋ ಎನ್ನುತ್ತಿದ್ದವು. ಬಂದ್ ಅರಿವಿದ್ದರಿಂದ ಜನರು ಕೂಡ ಮನೆಯಿಂದ ಹೊರಬರಲಿಲ್ಲ.

ಬಸ್ ಸಂಚಾರ ಸ್ಥಗಿತ: ಬಂದ್‌ಗೆ ಖಾಸಗಿ ಬಸ್ ಮಾಲೀಕರು ಹಾಗೂ ಚಾಲಕರ ಸಂಘ, ಆಟೋ ಮಾಲೀಕರು ಹಾಗೂ ಚಾಲಕರ ಸಂಘ, ಟ್ಯಾಕ್ಸಿ ಮಾಲೀಕರು ಹಾಗೂ ಚಾಲಕರ ಸಂಘ ಬೆಂಬಲ ಸೂಚಿಸಿದ್ದರಿಂದ ಜಿಲ್ಲಾದ್ಯಂತ ಖಾಸಗಿ ಬಸ್‌ಗಳ ಸಂಚಾರ ಸಂಪೂರ್ಣ ಸ್ಥಗಿತವಾಗಿತ್ತು. ಉಳಿದಂತೆ ಬೆಳಗ್ಗಿನ ಜಾವ 4.30ರಿಂದ 8.30ರವರೆಗೆ ಒಂದೆರಡು ಕೆಎಸ್‌ಆರ್‌ಟಿಸಿ ಬಸ್‌ಗಳು ಜಿಲ್ಲೆಯಲ್ಲಿ ಸಂಚರಿಸಿದವು. ಬಳಿಕ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರ ಸ್ಥಗಿತಗೊಳಿಸಲಾಯಿತು. ಹೀಗಾಗಿ, ಪ್ರಯಾಣಿಕರು ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಹೋಟೆಲ್, ಚಿತ್ರಮಂದಿರ ಬಂದ್: ಬಂದ್ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಹೋಟೆಲ್, ಚಿತ್ರಮಂದಿರ, ಪೆಟ್ರೋಲ್ ಬಂಕ್‌ಗಳು ಸೇರಿದಂತೆ ಬೇಕರಿ, ಟೀ ಸ್ಟಾಲ್, ದಿನಸಿ ಅಂಗಡಿ ಹಾಗೂ ಇನ್ನಿತರ ಅಂಗಡಿ ಮುಂಗಟ್ಟು ಮಾಲೀಕರು ಬೆಂಬಲ ಸೂಚಿಸಿ ಸ್ವಯಂ ಪ್ರೇರಿತವಾಗಿ ಅಂಗಡಿ ಬಂದ್ ಮಾಡಿದ್ದರಿಂದ ಜನರ ಓಡಾಟ ವಿರಳವಾಗಿತ್ತು.

ಶಾಲಾ– ಕಾಲೇಜುಗಳಿಗೆ ರಜೆ: ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಜಿಲ್ಲಾಡಳಿತ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಿಗೆ ರಜೆ ಘೋಷಿತ್ತು. ಈ ರಜೆಯನ್ನು ಭಾನುವಾರ ಶಾಲಾ– ಕಾಲೇಜು ತೆರೆದು ಸರಿದೂಗಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪನಾಗ್ ಆದೇಶ ಹೊರಡಿಸಿದ್ದರು.

ಬಿಗಿ ಬಂದೋಬಸ್ತ್: ಜಿಲ್ಲೆಯ ಆಯಾಕಟ್ಟಿನ ಪ್ರದೇಶ ಹಾಗೂ ತಮಿಳುನಾಡಿನ ಗಡಿಯಂಚಿನ ಚೆಕ್‌ಪೋಸ್ಟ್‌ಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಚಾಮರಾಜನಗರ ತಾಲೂಕಿನ ಪುಣಜನೂರು, ಗುಂಡ್ಲುಪೇಟೆ ತಾಲೂಕಿನ ಕೆಕ್ಕನಹಳ್ಳ, ಹನೂರು ತಾಲೂಕಿನ ಅರ್ಧನಾರೀಪುರ, ನಾಲ್‌ರೋಡ್, ಪಾಲಾರ್ ಚೆಕ್‌ಪೋಸ್ಟ್‌ನಲ್ಲಿ ಮುಂಜಾಗ್ರತಾ ಕ್ರಮವಾಗಿ ಕೆಎಸ್‌ಆರ್‌ಪಿ ಹಾಗೂ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಭದ್ರತೆ ಕೈಗೊಳ್ಳಲಾಗಿತ್ತು ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಅವರು ಬೆಳಗ್ಗೆ ಪುಣಜನೂರು ಚೆಕ್‌ಪೋಸ್ಟ್‌ಗೆ ಭೇಟಿ ನೀಡಿ ಪರಿಶೀಲಿಸಿದರು. ಅಲ್ಲದೇ ಜಿಲ್ಲೆಯಿಂದ ತಮಿಳುನಾಡಿಗೆ ಬಸ್ ಸಂಚಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿತ್ತು. ಅಲ್ಲದೇ ತಮಿಳುನಾಡಿನಿಂದಲೂ ಜಿಲ್ಲೆಗೆ ಬಸ್ ಹಾಗೂ ವಾಹನಗಳ ಸಂಚಾರವಿರಲಿಲ್ಲ. ಜಿಲ್ಲಾದ್ಯಂತ ಎಸ್ಪಿ ಪದ್ಮಿನಿ ಸಾಹು ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಾಗಿತ್ತು.



ನಗರದಲ್ಲಿ ವಿವಿಧ ಸಂಘಟನೆಗಳಿಂದ ಪ್ರತಿಭಟನೆ



ಚಾಮರಾಜನಗರ, ಸೆ.29– ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ನಗರದ ಭುವನೇಶ್ವರಿ ವೃತ್ತದಲ್ಲಿ ಕಾವೇರಿ ಹೋರಾಟ ಕ್ರಿಯಾ ಸಮಿತಿ ನೇತೃತ್ವದಲ್ಲಿ ವಿವಿಧ ಸಂಘಟನೆಗಳು ಹಾಗೂ ರಾಜಕೀಯ ಪಕ್ಷಗಳ ಮುಖಂಡರು ರಸ್ತೆ ತಡೆ ನಡೆಸಿ ತಮಿಳುನಾಡು ಹಾಗೂ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ರೈತ ಮುಖಂಡ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಕನ್ನಡಪರ ಹೋರಾಟಗಾರ ಚಾ.ರಂ. ಶ್ರೀನಿವಾಸಗೌಡ ನೇತೃತ್ವದಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ತಮಟೆ ಚಳವಳಿ ನಡೆಸಲಾಯಿತು.

ಮೆರವಣಿಗೆ: ನಂತರ ರಸ್ತೆ ಮಧ್ಯ ಪ್ರತಿಭಟನಾಕಾರರು ಅರೆಬೆತ್ತಲೆಯಾಗಿ ಉರುಳು ಸೇವೆ ನಡೆಸಿ ಸರ್ಕಾರದ ವಿರುದ್ಧ ಕಿಡಿಕಾರಿದರು. ಕರ್ನಾಟಕ ಬಂದ್ ಎಂದು ತಮಟೆ ಬಾರಿಸಿ ರಾಷ್ಟ್ರೀಯ ಹೆದ್ದಾರಿಯಲ್ಲೇ ಪ್ರತಿಭಟನಾಕಾರರು ಧರಣಿ ನಡೆಸಿದರು. ಬಳಿಕ ಭುವನೇಶ್ವರಿ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಷರೀಫ್ ವೃತ್ತ, ಗುಂಡ್ಲುಪೇಟೆ ವೃತ್ತ, ಸಂತೇಮರಹಳ್ಳಿ ವೃತ್ತ, ಅಂಗಡಿ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಕುಣಿದು ಪ್ರತಿಭಟನೆ: ಗುಂಡ್ಲುಪೇಟೆ ವೃತ್ತದಲ್ಲಿ ಎಂಪಿಗಳು, ಶಾಸಕರು, ಸಚಿವರ ವಿರುದ್ಧ ಘೋಷಣೆ ಕೂಗಿ ಪ್ರತಿಭಟನಾಕಾರರು ಕುಣಿದು ಪ್ರತಿಭಟನೆ ನಡೆಸಿದರು.

ನಂತರ ಸಂತೇಮರಹಳ್ಳಿ ವೃತ್ತದಲ್ಲಿ ಕಿವಿ ಮೇಲೆ ಗುಲಾಬಿ ಹೂ ಇಟ್ಟುಕೊಂಡು ರೈತರ ಕಿವಿ ಮೇಲೆ ಹೂವಿಡುವ ಸರ್ಕಾರ ಎಂದು ಆಕ್ರೋಶ ಹೊರಹಾಕಿದರು. ಭುವನೇಶ್ವರಿ ವೃತ್ತದಲ್ಲಿ ತಮಗೆ ಕುಡಿಯಲು ನೀರಿಲ್ಲ ತಮಿಳುನಾಡು ಬೆಳೆಗೆ ನೀರು ಹರಿಸಲಾಗುತ್ತಿದೆ ಎಂದು ಬಿಸ್ಲೆರಿ ನೀರನ್ನು ಕುಡಿದು ಸರ್ಕಾರದ ವಿರುದ್ಧ ಕಿಡಿಕಾರಿದರು.

ಪ್ರತಿಭಟನೆಗೆ ಶ್ವಾನ ಸಾಥ್: ನಗರದ ಭುವನೇಶ್ವರಿ ವೃತ್ತದಲ್ಲಿ ಪ್ರತಿಭಟನೆ ನಡೆಯುತ್ತಿದ್ದ ಸಂದರ್ಭ ಶ್ವಾನವೊಂದು ಪ್ರತಿಭಟನಾಕಾರರ ನಡುವೆ ಕಾಣಿಸಿಕೊಂಡು ಸುಮಾರು 10 ನಿಮಿಷಗಳ ಕಾಲ ಹೊರಳಾಡಿತು.

ಇದನ್ನು ಕಂಡ ಪ್ರತಿಭಟನಾಕಾರರು ನಾಯಿಯು ಉರುಳುಸೇವೆ ಮಾಡುತ್ತಿದೆ. ತಮಿಳುನಾಡಿಗೆ ನೀರು ಬಿಡಬೇಡಿ ಎಂದು ಒತ್ತಾಯಿಸುತ್ತಿದೆ ಎಂದರು.

ಕಪ್ಪೆ ರೀತಿ ಕುಪ್ಪಳಿಸಿದ ಪ್ರತಿಭಟನಾಕಾರರು: ನಂತರ ಪ್ರತಿಭಟನೆ ತೀವ್ರಗೊಳಿಸಿದ ಪ್ರತಿಭಟನಾಕಾರರು ಭುವನೇಶ್ವರಿ ವೃತ್ತದಲ್ಲಿ ಕಪ್ಪೆ ರೀತಿ ಕುಪ್ಪಳಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಬಳಿಕ, ತಮಿಳುನಾಡು ಸರ್ಕಾರ, ರಾಜ್ಯ ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿಯನ್ನು ಒಂದು ರೂಪಾಯಿಗಳಿಗೆ ಬಿಡ್ ಕೂಗುವ ಮೂಲಕ ಹರಾಜು ಹಾಕಿ ಕಿಡಿಕಾರಿದರು.

ಕೊಳ್ಳೇಗಾಲದಲ್ಲೂ ವ್ಯಾಪಕ ಬೆಂಬಲ



ಕೊಳ್ಳೇಗಾಲ, ಸೆ.29– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ವಿರೋಧಿಸಿ ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಪಟ್ಟಣದಲ್ಲಿ ವ್ಯಾಪಕ ಬೆಂಬಲ ವ್ಯಕ್ತವಾಯಿತು.

ಬಂದ್ ಹಿನ್ನೆಲೆ ಬಸ್ ಸಂಚಾರ ಸ್ಥಗಿತಗೊಂಡು, ಪಟ್ಟಣದ ಬಸ್ ನಿಲ್ದಾಣ ಪ್ರಯಾಣಿಕರಿಲ್ಲದೇ ಬಿಕೋ ಎನ್ನುತ್ತಿತ್ತು. ವರ್ತಕರು ಅಂಗಡಿ ಮುಂಗಟ್ಟು ಮುಚ್ಚಿ ಬಂದ್‌ಗೆ ಬೆಂಬಲ ಸೂಚಿಸಿದರು. ಅಲ್ಲದೇ ವಿವಿಧ ಸಂಘಟನೆಗಳು, ಆಟೋ, ಕಾರು ಚಾಲಕರು ಕನ್ನಡಪರ ಸಂಘಟನೆಗಳು, ಶಾಲಾ, ಕಾಲೇಜು ಮುಖ್ಯಸ್ಥರು, ಎಸ್‌ಡಿಪಿಐ, ಜೆಡಿಎಸ್, ಬಿಜೆಪಿ, ಬಿಎಸ್ಪಿ ಮುಖಂಡರು ಹೋರಾಟಕ್ಕೆ ಸಾಥ್ ನೀಡಿದ್ದರಿಂದ ಬಂದ್ ಯಶಸ್ವಿಯಾಯಿತು.

ಇದೇ ವೇಳೆ ವಿವಿಧ ಸಂಘಟನೆಗಳ ಕಾರ್ಯಕರ್ತರು ಪಟ್ಟಣದಲ್ಲಿ ಮೆರವಣಿಗೆ ನಡೆಸಿ ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿ ಪ್ರತಿಭಟನೆ ನಡೆಸಿದರು. ರೈತ ಸಂಘದ ಹಿರಿಯ ಮುಖಂಡ ಶೈಲೇಂದ್ರ ಮಾತನಾಡಿ, ಕಾವೇರಿ ವಿಚಾರದಲ್ಲಿ ರಾಜ್ಯಕ್ಕೆ ನಿರಂತರ ಅನ್ಯಾಯ ನಡೆಯುತ್ತಿದೆ. ಚುನಾವಣೆಯಲ್ಲಿ ಗೆಲ್ಲುವ ತನಕ ರಾಜಕಾರಣಿಗಳು ಜನರ ಸೇವಕರೆನ್ನುತ್ತಾರೆ. ಬಳಿಕ ರೈತ ವಿರೋಧಿ ನಿಲುವು ತಾಳುತ್ತಾರೆ. ಅದರಲ್ಲೂ ಕಾವೇರಿ ವಿಚಾರದಲ್ಲಿ ಮಾತ್ರ ಸ್ಪಷ್ಟ ನಿಲುವಿಗೆ ಮುಂದಾಗಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದೇ ವೇಳೆ ಮಾಜಿ ಶಾಸಕ ಎನ್.ಮಹೇಶ್, ಎಸ್. ಬಾಲರಾಜು ಮಾತನಾಡಿದರು. ಈ ವೇಳೆ ರೈತ ಸಂಘದ ಶಿವಮಲ್ಲು, ಬಸವರಾಜು, ಚಾರ್ಲಿ, ಜಯಮೇರಿ ಸೂಸೆಯಮ್ಮ, ಮರಿಯಮ್ಮ, ಸಗಾಯಾಮೇರಿ, ಮೇರಿ, ಜಪಮಾಲೆ, ನಾಗರಿಕ ಹಿತರಕ್ಷಣಾ ಸಮಿತಿ ನಟರಾಜು ಮಾಳಿಗೆ, ಬಿಎಸ್ಪಿ ರಾಜ್ಯ ಕಾರ್ಯದರ್ಶಿ ಕಮಲ್, ಬಸವರಾಜು, ಪುಟ್ಟಮ್ಮ ಕರವೇ ಕಾರ್ಯಾಧ್ಯಕ್ಷ ಅಯಾಜ್, ಸಹ ಸಂಘಟನಾ ಕಾರ್ಯದರ್ಶಿ ಮೊಹಮ್ಮದ್ ಅಬ್ಬಲ್, ಅಫ್ರೋಜ್ ಪಾಷ, ಸಂಚಾಲಕ ಸಲೀಮ್ ಕುಮಾರ್ ಸೇರಿದಂತೆ ಇನ್ನಿತರಿದ್ದರು.

ಪ್ರತಿಭಟನೆ ವೇಳೆ ಆತ್ಮಹತ್ಯೆಗೆ ಯತ್ನಿಸಿದ ರೈತ

ಚಾಮರಾಜನಗರ, ಸೆ.29– ಬಂದ್ ಹಿನ್ನೆಲೆಯಲ್ಲಿ ನಗರದಲ್ಲಿ ನಡೆದ ಪ್ರತಿಭಟನೆ ವೇಳೆ ರೈತನೊಬ್ಬ ಮೈ ಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದರು. ನಗರದ ಭುವನೇಶ್ವರಿ ವೃತ್ತದಲ್ಲಿ ಮುಂಜಾನೆ 5.50ಕ್ಕೆ ಸಮಾವೇಶಗೊಂಡ ರೈತ ಮುಖಂಡರು ತಮಿಳುನಾಡು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ರೈತ ಮುಖಂಡರು ಭುವನೇಶ್ವರಿ ವೃತ್ತದಲ್ಲಿ ಟೈಯರ್‌ಗೆ ಬೆಂಕಿ ಹಚ್ಚಲು ಮುಂದಾದರು. ಕೂಡಲೇ ಮಧ್ಯ ಪ್ರವೇಶಿಸಿದ ಪೊಲೀಸರು ಬೆಂಕಿ ಹಚ್ಚದಂತೆ ರೈತರನ್ನು ತಡೆದು ಟೈಯರ್ ಕಿತ್ತುಕೊಂಡರು. ಇದರಿಂದ ಕೋಪಗೊಂಡ ರೈತರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಉಡಿಗಾಲ ಗ್ರಾಮದ ರೈತ ಮಂಜುನಾಥ್ ಪೆಟ್ರೋಲ್ ಬಾಟಲಿಯೊಂದಿಗೆ ಸ್ವಲ್ಪ ದೂರ ಓಡಿ ಹೋಗಿ ಮೈ ಮೇಲೆ ಪೆಟ್ರೋಲ್ ಸುರಿದುಕೊಂಡು ಅಸ್ವಸ್ಥಗೊಂಡರು. ಈ ವೇಳೆ ಅವರನ್ನು ಪೊಲೀಸರು ತಮ್ಮ ವಾಹನದಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ದರು.

ಬಂದ್‌ಗೆ ಗುಂಡ್ಲುಪೇಟೆಯಲ್ಲಿ ಉತ್ತಮ ಪ್ರತಿಕ್ರಿಯೆ

ಗುಂಡ್ಲುಪೇಟೆ, ಸೆ.29– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ತಾಲೂಕಿನಾದ್ಯಂತ ಉತ್ತಮ ಪ್ರತಿಕ್ರಿಯೆ ದೊರೆಯಿತು.

ಮುಂಜಾನೆಯಿಂದಲೇ ಪಟ್ಟಣದ ವ್ಯಾಪಾರಸ್ಥರು ಅಂಗಡಿ ಮುಂಗಟ್ಟು ಮುಚ್ಚಿ ಬಂದ್‌ಗೆ ಬೆಂಬಲ ಸೂಚಿಸಿದರು. ಬಿಜೆಪಿ, ರೈತ ಸಂಘ ಹಾಗೂ ಕನ್ನಡ ಸಂಘಟನೆಗಳ ಮುಖಂಡರು ಬಂದ್ ಯಶಸ್ಸಿಗೆ ಶ್ರಮಿಸಿದರು. ತಾಲೂಕಿನ ಹೋಬಳಿ ಕೇಂದ್ರಗಳಾದ ತೆರಕಣಾಂಬಿ, ಬೇಗೂರು ಹಾಗೂ ಹಂಗಳಗಳಲ್ಲಿ ವ್ಯಾಪಾರಸ್ಥರು ಎಲ್ಲಾ ಅಂಗಡಿ ಮುಂಗಟ್ಟು ಮುಚ್ಚಿ ಬೆಂಬಲ ವ್ಯಕ್ತಪಡಿಸಿದರು. ಸಾರಿಗೆ ಬಸ್ಸುಗಳು, ಆಟೋ, ಟೆಂಪೋ ಸೇರಿದಂತೆ ಯಾವುದೇ ವಾಹನಗಳೂ ರಸ್ತೆಗಿಳಿಯಲಿಲ್ಲ. ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು, ರೈತ ಹಾಗೂ ಕನ್ನಡ ಸಂಘಟನೆಗಳು ಮೆರವಣಿಗೆ ನಡೆಸಿ ಸರ್ಕಾರದ ನಿರ್ಧಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಸಾರಿಗೆ ಬಸ್ ನಿಲ್ದಾಣದ ಎದುರು ರಸ್ತೆ ತಡೆ ನಡೆಸಿದ ಮಾಜಿ ಶಾಸಕ ಸಿ.ಎಸ್. ನಿರಂಜನ ಕುಮಾರ್ ಮಾತನಾಡಿ, ಬಿಜೆಪಿ ಆಡಳಿತದಲ್ಲಿ ದ್ದಾಗ ರಾಜ್ಯದ ನೀರಿನ ಹಕ್ಕಿಗಾಗಿ ಮೇಕೆದಾಟು ಯೋಜನೆಗೆ ಒತ್ತಾಯಿಸಿ ಪಾದಯಾತ್ರೆ ಮಾಡಿದ್ದ ಕಾಂಗ್ರೆಸ್ ತಾನೇ ಅಧಿಕಾರದಲ್ಲಿದ್ದರೂ ಕಾವೇರಿ ನೀರು ಹರಿಸುವ ಮೂಲಕ ಜನತೆಗೆ ದ್ರೋಹ ಬಗೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಮಾಜಿ ಅಧ್ಯಕ್ಷ ಎಲ್.ಸುರೇಶ್, ಎಸ್. ನಾಗೇಂದ್ರ, ಕರವೇ ಮೋಹನ್, ಕನ್ನಡ ಸಂಘಟನೆಯ ಮುಖಂಡರಾದ ಮುನೀರ್, ಅಬ್ದುಲ್ ಮಾಲಿಕ್, ಸ್ವಾಮಿ, ಈಶ್ವರ್, ಬಿಜೆಪಿ ಯುವಮೋರ್ಚಾ ಜಿಲ್ಲಾಧ್ಯಕ್ಷ ಪ್ರಣಯ್, ಪ್ರಣಯ್, ರಾಜ್ಯ ತಮಿಳು ಸಂಘದ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣನ್ ಸೇರಿದಂತೆ ಹಲವರಿದ್ದರು.

ವೈದ್ಯೆ ಅನುಮಾನಾಸ್ಪದ ಸಾವು



ಕೊಳ್ಳೇಗಾಲ, ಸೆ.29– ವೈದ್ಯೆಯೊಬ್ಬರು ಅನುಮಾನಸ್ಪದವಾಗಿ ಸಾವನ್ನಪ್ಪಿರುವ ಘಟನೆ ಶುಕ್ರವಾರ ಪಟ್ಟಣದಲ್ಲಿ ನಡೆದಿದೆ.

ಮೂಲತಃ ಚೆನ್ನೈ ಮೂಲದ ನಿವಾಸಿ ಹಾಗೂ ಪಟ್ಟಣದ ಉಪವಿಭಾಗ ಆಸ್ಪತ್ರೆಯ ಪ್ರೊಬೆಷನರಿ ಅರವಳಿಕೆ ತಜ್ಞೆ ಡಾ.ಸಿಂಧುಜಾ (28) ಸಾವನ್ನಪ್ಪಿದವರು. ಕಳೆದ ಏಳೆಂಟು ತಿಂಗಳಿಂದ ಇಲ್ಲಿನ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಡಾ.ಸಿಂಧುಜಾ ಇಂದು ಕರ್ತವ್ಯಕ್ಕೆ ಹಾಜರಾಗದ ಹಿನ್ನೆಲೆಯಲ್ಲಿ ಅವರ ಸಹೋದ್ಯೋಗಿಗಳು ಆಕೆಯ ಮನೆಗೆ ಹೋಗಿ ನೋಡಲಾಗಿ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ಸಿಂಧುಜಾ ಮೃತದೇಹ ನೆಲದ ಮೇಲೆ ಬಿದ್ದಿದ್ದು, ಪಕ್ಕದ ಟೇಬಲ್ ಮೇಲೆ ಸಿರಿಂಜ್, ಔಷಧಿ, ಚಾಕು ಇನ್ನಿತರ ವಸ್ತುಗಳು ಕಂಡು ಬಂದಿವೆ. ಜೊತೆಗೆ ವಿದ್ಯುತ್ ವೈರ್ ಸಹಾ ಕಂಡು ಬಂದಿದ್ದು, ಆಕೆ ಸಾವಿನ ಸುತ್ತ ಅನೇಕ ಅನುಮಾನ ಮೂಡಿದೆ. ಸಿಂಧುಜಾಗೆ ಮುಂಬರುವ ಜನವರಿಯಲ್ಲಿ ಮದುವೆ ಕೂಡ ನಿಶ್ಚಯವಾಗಿತ್ತು ಎನ್ನಲಾಗಿದೆ. ಮೃತಳ ಪೋಷಕರು ಚೆನ್ನೈನಿಂದ ಬಂದ ಬಳಿಕ ಮುಂದಿನ ಮುಂದಿನ ಕ್ರಮ ಕೈಗೊಳ್ಳುವುದಾಗಿ ಪಟ್ಟಣ ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಸಾರ್ವಜನಿಕ ಉಪವಿಭಾಗೀಯ ಆಸ್ಪತ್ರೆ ವೈದ್ಯಾಧಿಕಾರಿ ರಾಜಶೇಖರ್ ಮತ್ತು ಪೊಲೀಸ್ ಅಧಿಕಾರಿಗಳು ಇನ್ನಿತರರು ಭೇಟಿ ನೀಡಿ ಪರಿಶೀಲಿಸಿದರು.

ತಮಿಳು ಪೋಸ್ಟರ್ ಹರಿದು ಆಕ್ರೋಶ

ಚಾಮರಾಜನಗರ, ಸೆ.29– ನಗರದ ಸತ್ಯಮಂಗಲಂ ರಸ್ತೆಯಲ್ಲಿರುವ ಸಿದ್ಧಾರ್ಥ ಚಿತ್ರಮಂದಿರಕ್ಕೆ ನುಗ್ಗಿದ ಕಬ್ಬು ಬೆಳೆಗಾರರು, ರಾಘವ ಲಾರೆನ್ಸ್ ಅಭಿನಯದ 'ಚಂದ್ರಮುಖಿ–2' ಚಿತ್ರದ ಪೋಸ್ಟರ್ ಹರಿದು ಹಾಕಿ ಆಕ್ರೋಶ ಹೊರ ಹಾಕಿದರು. ಕಾವೇರಿ ಕ್ಯಾತೆ ನಿಲ್ಲಿಸದಿದ್ದರೇ ತಮಿಳು ಚಿತ್ರಗಳು ಪ್ರದರ್ಶನ ಮಾಡುವಂತಿಲ್ಲ ಎಂದು ಆಕ್ರೋಶಗೊಂಡು ತಮಿಳು ಚಿತ್ರದ ಪೋಸ್ಟರ್‌ಗಳನ್ನು ಹರಿದು ಹಾಕಿ ತಮಿಳುನಾಡು ಸರ್ಕಾರದ ವಿರುದ್ಧ ಕಿಡಿಕಾರಿದರು.



ಚಾಲಕರಿಗೆ ಗುಲಾಬಿ ನೀಡಿ ಪ್ರತಿಭಟನೆ: ನಂತರ ಭುವನೇಶ್ವರಿ ವೃತ್ತದಲ್ಲಿ ಸಮಾವೇಶಗೊಂಡು ಪ್ರತಿಭಟನೆ ನಡೆಸುತ್ತಿದ್ದಾಗ ಮೈಸೂರಿನಿಂದ ಬಂದ ಸಾರಿಗೆ ಬಸ್ ಅನ್ನು ಅಡ್ಡಗಟ್ಟಿದ ಪ್ರತಿಭಟನಾಕಾರರು ಬಸ್‌ನ ಟೈರ್ ಕೆಳಗೆ ಮಲಗಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿ ದರು. ಬಳಿಕ ಬಸ್ ಚಾಲಕನಿಗೆ ಗುಲಾಬಿ ಹೂ ನೀಡಿ ವಾಪಸ್ ಕಳಿಸಿದರು. ಇನ್ನೊಂದೆಡೆ ಆಂಧ್ರ ಪ್ರದೇಶದ ಗೂಡ್ಸ್ ಲಾರಿ ಅಡ್ಡಗಟ್ಟಿ ಪ್ರತಿಭಟನೆ ನಡೆಸಿ, ತಮಿಳುನಾಡು ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು ಚಾಲಕನಿಗೆ ಗುಲಾಬಿ ಹೂ ನೀಡಿ ವಾಪಸ್ ಕಳಿಸಿದರು.

ಅಭ್ಯಾಸ ಪಂದ್ಯ: ಕಿವೀಸ್, ಬಾಂಗ್ಲಾಗೆ ಜಯ

ಮಳೆಯಿಂದಾಗಿ ದ.ಆಫ್ರಿಕಾ, ಆಫ್ಘಾನಿಸ್ತಾನ್ ಪಂದ್ಯ ರದ್ದು

ಹೈದರಾಬಾದ್/ ಗುವಾಹಟಿ, ಸೆ.29– ಇಂದಿನಿಂದ ಐಸಿಸಿ ವಿಶ್ವಕಪ್ ಅಭ್ಯಾಸ ಪಂದ್ಯಗಳು ಆರಂಭವಾಗಿದ್ದು, ಇಂದು ನಡೆದ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಬಾಂಗ್ಲಾದೇಶ ಮತ್ತೊಂದು ಪಂದ್ಯದಲ್ಲಿ ಪಾಕಿಸ್ತಾನದ ವಿರುದ್ಧ ನ್ಯೂಜಿಲೆಂಡ್ ಜಯ ಗಳಿಸಿದೆ.

ಬಾಂಗ್ಲಾದೇಶಕ್ಕೆ ಜಯ: ಗುವಾಹಟಿಯಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ 49.1 ಓವರ್‌ಗಳಲ್ಲಿ 263ರನ್‌ಗಳಿಗೆ ಆಲೌಟಾಯಿತು. ತಂಡದ ಪರ ನಿಸ್ಸಾಂಕ 68, ಧನಂಜಯ ಡಿಸಿಲ್ವಾ 55ರನ್ ಗಳಿಸಿದರು. ಬಾಂಗ್ಲಾ ಪರ ಮೆಹದಿ ಹಸನ್ 3, ಮೆಹದಿ ಹಸನ್ ಮಿರಾಜ್, ಶೋರಿಫುಲ್ ಇಸ್ಲಾಂ ಒಂದೊಂದು ವಿಕೆಟ್ ಗಳಿಸಿದರು.

264 ರನ್‌ಗಳ ಗುರಿ ಬೆನ್ನತ್ತಿದ ಬಾಂಗ್ಲಾದೇಶ 42 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ ಗೆಲುವಿನ ನಗೆ ಬೀರಿತು. ಆ ಮೂಲಕ 7 ವಿಕೆಟ್‌ಗಳ ಜಯ ಸಾಧಿಸಿತು. ತಂಡದ ಪರ ಲಿಂಟನ್ ದಾಸ್ 61, ಮೆಹದಿ ಹಸನ್ ಮೀರಾಜ್ 67, ಮುಷ್ಫೀಕರ್ ರಹೀಂ 35, ತಾಂಜೀದ್ ಹಸನ್ 84 ರನ್ ಗಳಿಸಿದರು.

ನ್ಯೂಜಿಲೆಂಡ್‌ಗೆ ಗೆಲುವು: ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ನಿಗದಿತ 50 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 345 ರನ್ ಗಳಿಸಿತು. ತಂಡದ ಪರ ರಿಜ್ವಾನ್ 103, ಬಾಬರ್ ಅಜಂ 80, ಸೌದ್ ಶಕೀಲ್ 75 ರನ್ ಗಳಿಸಿದರು. ನ್ಯೂಜಿಲೆಂಡ್ ಪರ ಮಿಚೆಲ್ ಸ್ಯಾಂಟ್ನರ್ 2, ಹೆನ್ರಿ, ನಿಶಮ್ ಹಾಗೂ ಫರ್ಗ್ಯೂಸನ್ ಒಂದೊಂದು ವಿಕೆಟ್ ಪಡೆದರು.

346 ರನ್‌ಗಳ ಗುರಿ ಬೆನ್ನತ್ತಿದ ನ್ಯೂಜಿಲೆಂಡ್ 43.4 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ ಗುರಿ ತಲುಪಿ 5 ವಿಕೆಟ್‌ಗಳ ಜಯ ಸಾಧಿಸಿತು. ತಂಡದ ಪರ ರಚಿನ್ ರವೀಂದ್ರ 97, ಕೇನ್ ವಿಲಿಯಮ್ಸನ್ 54, ಡ್ಯಾರಿಯಲ್ ಮಿಚೆಲ್ 59, ಮಾರ್ಕ್ ಚಾಂಪಮನ್ 65, ಜೇಮ್ಸ್ ನಿಶಮ್ 33 ರನ್ ಗಳಿಸಿದರು. ಪಾಕ್ ಪರ ಉಸಾಮಾ ಮಿರ್ 2, ಹಸನ್ ಅಲಿ, ಆಘಾ ಸಲ್ಮಾನ್, ಮೊಹಮ್ಮದ್ ವಾಸೀಂ ಒಂದೊಂದು ವಿಕೆಟ್ ಪಡೆದರು.

ದ.ಆಫ್ರಿಕಾ, ಆಫ್ಘಾನಿಸ್ತಾನ್ ಪಂದ್ಯ ರದ್ದು: ತಿರುವಂತಪುರಂನಲ್ಲಿ ನಡೆಯಬೇಕಿದ್ದ ದಕ್ಷಿಣ ಆಫ್ರಿಕಾ ಹಾಗೂ ಆಫ್ಘಾನಿಸ್ತಾನ ನಡುವಿನ ಒಂದ್ಯ ಒಂದು ಎಸೆತ ಕಾಣದೇ ರದ್ದುಗೊಂಡಿತು.

ಕೆಆರ್‌ಎಸ್ ಅಣೆಕಟ್ಟೆಗೆ ಮುತ್ತಿಗೆ: ವಾಟಾಳ್ ನಾಗರಾಜ್

ಬೆಂಗಳೂರು: ಅಕ್ಟೋಬರ್ 5ರಂದು ಕನ್ನಡಪರ ಸಂಘಟನೆಗಳು ಕೆಆರ್‌ಎಸ್ ಅಣೆಕಟ್ಟೆಗೆ ಮುತ್ತಿಗೆ ಹಾಕುವುದಾಗಿ ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ಘೋಷಿಸಿದರು.



ಪ್ರತಿಭಟನೆ ವೇಳೆ ವಶಕ್ಕೆ ಪಡೆದ ಪೊಲೀಸರು ಅವರನ್ನು ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಕರೆತಂದು ಬಿಟ್ಟರು. ಈ ವೇಳೆ ಮಾತನಾಡಿದ ಅವರು, ಕೆಆರ್‌ಎಸ್ ಮುತ್ತಿಗೆ ಕಾರ್ಯಕ್ರಮದಲ್ಲಿ ಸಹಸ್ರಾರು ರೈತರು ಭಾಗವಹಿಸಲಿದ್ದಾರೆ ಎಂದರು. ಪ್ರತಿಭಟಿಸುವ ಹಕ್ಕನ್ನು ಸಿಎಂ ಸಿದ್ದರಾಮಯ್ಯನವರ ಸರ್ಕಾರ ಕಿತ್ತುಕೊಳ್ಳುತ್ತಿದೆ. ದೆಹಲಿ ಮತ್ತು ಪ್ರಧಾನಿ ನರೇಂದ್ರ ಮೋದಿಯವರಿಗೆ ಕನ್ನಡಿಗರ ಸಾಮರ್ಥ್ಯ ತೋರಿಸಲು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಇದು ಅರ್ಥವಾಗುತ್ತಿಲ್ಲ ಎಂದು ಟೀಕಿಸಿದರು. ಈ ವೇಳೆ ಬುರ್ಖಾಧಾರಿಯಾಗಿದ್ದ ವಾಟಾಳ್ ನಾಗರಾಜ್ ಎಲ್ಲರ ಗಮನ ಸೆಳೆದರು.

101 ಪ್ರದಕ್ಷಿಣೆ ಮೂಲಕ ಕಾವೇರಿ ಹೋರಾಟಕ್ಕೆ ಬೆಂಬಲ



ಮೈಸೂರು, ಸೆ. 29– ರಾಜ್ಯ ಸರ್ಕಾರ ಕಾವೇರಿ ವಿಚಾರದಲ್ಲಿ ಪೂರಕವಾಗಿ ಸ್ಪಂದಿಸಲಿ ಎಂದು ನಗರದ 101 ಗಣಪತಿ ದೇವಸ್ಥಾನದಲ್ಲಿ ಪ್ರಜ್ಞಾವಂತ ನಾಗರಿಕ ವೇದಿಕೆಯ ಕಾರ್ಯಕರ್ತರು, ನಗರಪಾಲಿಕೆ ಸದಸ್ಯ ಮಾ.ವಿ. ರಾಮ್ ಪ್ರಸಾದ್, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಚಂದ್ರಶೇಖರ್ ನೇತೃತ್ವದಲ್ಲಿ ವಿಘ್ನ ನಿವಾರಕ ವಿಘ್ನೇಶ್ವರನಲ್ಲಿ ಸಾಮೂಹಿಕ ನಮಸ್ಕಾರ ಮಾಡಿ 101 ಪ್ರದಕ್ಷಿಣೆ ಮಾಡುವ ಮೂಲಕ ವಿಶೇಷ ರೀತಿ ಪ್ರತಿಭಟಿಸಿದ್ದಾರೆ.

ಹಾಗೆಯೇ ಈ ಕೂಡಲೇ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಕಾವೇರಿ ಸಮಸ್ಯೆ ನಿವಾರಿಸಲಿ ಹಾಗೂ ನ್ಯಾಯಾಧೀಕರಣ ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲಿ ಮತ್ತು ರಾಜ್ಯದಲ್ಲಿ ವರುಣ ಕೃಪೆ ತೋರಲಿ ಎಂದು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್, ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ನಂದೀಶ್ ನಾಯಕ್, ಅಪೂರ್ವ ಸುರೇಶ್, ಮೋಹನ್ ಕುಮಾರ್‌ಗೌಡ, ಗೌತಮ್, ಈಶ್ವರ್ ಗೌಡ, ಸದಾಶಿವ್, ಚಂದ್ರು, ಇನ್ನಿತರರು ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಹೊಸ ಮನೆ ಮಾರಾಟಕ್ಕಿದೆ
1 ಬಿಹೆಚ್‌ಕೆ ಹೊಸ ಮನೆ ಮಾರಾಟಕ್ಕಿದೆ. ಗ್ರೌಂಡ್ ಮತ್ತು ಫಸ್ಟ್ ಫ್ಲೋರ್, #307, 4ನೇ ಕ್ರಾಸ್, 1ನೇ ಹಂತ, ಸುಬ್ರಹ್ಮಣ್ಯ ನಗರ, ಹೆಬ್ಬಾಳು, ಮೈಸೂರು. ಸಂಪರ್ಕಿಸಿ:
9945988126, 7349224232

ಛತ್ರ ಖಾಲಿ ಇದೆ
6th, 22nd, Nov-23
28th Jan-24
G.L.N. Convention Hall
9845129666
9606225582

WANTED
Sales Representative for Educational Insitution in Mysore. (Male or Female with 1 year experience in Marketing) English fluency and owning a two wheeler is must.
8277636287
9243078482

NEW HOUSE FOR SALE
40X60 East Facing
4 Bed Rooms (All Attached) at 1st Stage Vijayanagar, Mysore
Price - 3.6 Cr (Slightly Negotiable)
9606160320

S.K. Construction
ಕನಸು ನಿಮ್ಮದು ನನಸು ನಮ್ಮದು ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ, Loan ಮಾಡಿಸಿ. ಪ್ರಾರಂಭ 25% ನಾವೇ ಹಾಕಿ 3D Plan ಸಹಿತ ಉತ್ತಮ ಗುಣ ಮಟ್ಟದ ಮನೆ ಮಾಡಿಕೊಡುತ್ತೇವೆ.
Mob: 9620528490

ವಸತಿ ಸೌಲಭ್ಯವಿದೆ
K.R.S. ಬಳಿ ಕಟ್ಟೇರಿಯ ತೋಟದಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ:
9591212047, 8970101710

2.5 BHK HOME INTERIORS @ ₹2.5 LACS
ISO 9001:2015 Certified Company Depot
Build Mart
TALK TO OUR DESIGN TEAM
9731591267

Commercial building for sale
1st, 2nd, 3rd & 4th floor, 1200 sq. Ring Road, Ananda Nagar. Contact:
9844713445, 9066637156

neem BOND PLATINUM
PLYWOOD & DOORS @ FACTORY DEPOT RATES
10 YEARS WARRANTY*
9845426862, 9901291267

ಮಂಟಪ ಮನೆ
ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ ಸಂಪರ್ಕಿಸಿ: ಶ್ರೀನಗರ ಮೈಸೂರು
9448207634
9036742526

Alpha School of Fashion Design, Mysore
Become a Fashion Designer
NCVTE New Delhi approved courses
- 3 MONTHS CERTIFICATION COURSE
- 6 MONTHS DIPLOMA COURSE
- 1 YEAR ADVANCE DIPLOMA COURSE
ADMISSION OPEN
*HOSTEL AND PG AVAILABLE
Alpha School of Fashion Design, No.66/2, Manandavadi Road, Near Ring Road Signal Junction, Srirampura, Mysore
782 993 7469

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196, 9880548596

ಬೋಳು ತಲೆಯ ಸಮಸ್ಯೆಯೇ?
ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, Kuvempunagar, Mysuru
MYSURU 9611028523 MANGALORE 9343142258

REQUIRED DRIVERS
Bulker Trailer truck drivers for Nanjungud, Taluk Mysore.
Contact: 9251640157

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

RBI ಟೇಬಲ್ ಮೌಲ್ಡ್ ಇಟ್ಟಿಗೆಗಳು
ದೀರ್ಘಕಾಲ ಉಳಿಯುವ ಇಟ್ಟಿಗೆಗಳು
•ಪರಿಶೀಲಿಸಿದ ಗುಣಮಟ್ಟ •ಸುಲಭ ಡೆಲಿವರಿ
•ಅತ್ಯುತ್ತಮ ಧೃಡತೆ •ಕಡಿಮೆ ಬೆಲೆಯಲ್ಲಿ
ಮುಂದಿನ ಪೀಳಿಗೆಗೆ ಸದೃಢವಾದ ಉಡುಗೊರೆ...
82178 93849
98442 24480

ಬರವಣಿಗೆಯ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409 ಮೈಸೂರು ಅಗ್ರಹಾರ.
9449774835 ಚಾಮರಾಜನಗರ

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೇಲ್ಸ್ ಮ್ಯಾನ್ ಮತ್ತು ಸೇಲ್ಸ್ ಗರ್ಲ್ಸ್ ಆಕರ್ಷಕ ಸಂಬಳ + ESI, PF, Incentive
ಗಾಂಧಿ ಸರ್ಕಲ್, ಮೈಸೂರು
9980620678

DOCUMENT LOST
Basavaraju B.M., 908, LIG-2, Lakshmikanthanagar, 1st Stage, Mysore-17, I lost the original khatha (name of the Khatha Holder Somashekara Raju, S/o Late M.R. Sundar Raju) of House No. 128, LIG 2nd Stage, Hebbal, Mysuru, while shifting the house.
Finders please contact:
Mob: 9845777762

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚಾತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ: 8861612486

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9902914891

HOUSES & OFFICE SPACE FOR RENT
@ SARASWATHIPURAM, KUVEMPUNAGAR & SURROUNDINGS.
S.S. Property Services (Opp. Kuvempu School), S.S. Puram
93421-25252

DOCUMENT LOST
Rohini, Door No. 24/3, 1st Cross, Medar Block, New Bamboo Bazar, Mysuru-570 021, I lost my registered sale deed document No. 689/95-96, dated 16-8-1995 (Holenarasipura Sub-registrar office) in Mandi Mohalla at Mysuru. Finders please contact:
Mob: 9986440838

ಮನೆಯಲ್ಲಿಯೇ ಕೆಲಸ WORK @ HOME JOB
ಡೈಲಿಂಗ್ ಕೆಲಸ ಹಾರದ ಸಂಬಳ 3,000 ರಿಂದ 18,000
8749098879

ಕಳೆದಿದೆ
ಮೈಸೂರು ಜಿಲ್ಲಾ ಕಸಬಾ ಹೋಬಳಿ ಕುಪ್ಪಲೂರು ಗ್ರಾಮದ ಸರ್ವೆ ನಂ. 59/2ರ ಆಕೃತಿ ಬಡಾವಣೆಯ ನನ್ನ ಹೆಸರಿನ ಸೈಟ್ ನಂ. 73ರ 9x12 ಅಳತೆಯ ನಿವೇಶನದ ಮುಡಾ ಖಾತಾ ಪತ್ರವು ಕಳೆದಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9945615819

9/11A ಹಾಗೂ 11B ಖಾತೆಗಳಿಗೆ ಲೋನ್ ಮಾಡಿಕೊಡಲಾಗುವುದು
ಶೀಟಿನ ಮನೆ, ಹೆಂಚಿನ ಮನೆ, ಆರ್‌ಸಿಸಿ ಮನೆ ಮೇಲೆ ಸಾಲ ಮತ್ತು ಮನೆ ಖರೀದಿಸಲು, ಮನೆ ನವೀಕರಣ ಮಾಡಲು ಬ್ಯಾಂಕ್ ಲೋನ್ ಮಾಡಿಕೊಡಲಾಗುವುದು
9008504456

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ನೈಟ್ ಶಿಫ್ಟ್‌ಗೆ ಹುಡುಗರು/ಪುರುಷರು ಬೇಕಾಗಿದ್ದಾರೆ.
ಸಂಬಳ: 12,000/–
8892258814

ಹೊಸ ಮನೆ ಮಾರಾಟಕ್ಕಿದೆ
20x30 ಡ್ಯೂಪ್ಲೆಕ್ಸ್ ವಿವೇಕಾನಂದ ನಗರ ಪೆಟ್ರೋಲ್ ಬಂಕ್ ಹತ್ತಿರ ಮೈಸೂರು
7204401199
7795269272

ತಮಿಳುನಾಡು ಪ್ರವಾಸ 07 ದಿನಗಳು
ದಿನಾಂಕ: 26ನೇ ಅಕ್ಟೋಬರ್ 2023
ಇಶಾ ಫೌಂಡೇಷನ್ (112 ಅಡಿ ಶಿವನ ಪ್ರತಿಮೆ), ಕನ್ಯಾಕುಮಾರಿ, ನವಗ್ರಹ ದರ್ಶನ (ಒಂದು ದಿನದಲ್ಲಿ), ಪಿಚ್ಚಾವರಂ ಮಾಂಗ್ರೂವ್ ಅರಣ್ಯ, ಅಣ್ಣಾಮಲೈ, ರಾಮೇಶ್ವರ, ಧನುಷ್ಕೋಟಿ, ಮಧುರೈ, ತಂಜಾವೂರು ಬೃಹತ್ ಶಿವ, ಕಂಚಿ, ವೆಲ್ಲೋರ್ ಗೋಲ್ಡನ್ ಟೆಂಪಲ್. ಒಬ್ಬರಿಗೆ ರೂ. 14,500.
7022271023, 9611341351

ಬೇಕಾಗಿದ್ದಾರೆ
ಹಾಸ್ಟೆಲ್‌ಗೆ ದೋಸೆ ಹಾಕುವವರು ಪುರುಷರು ಬೇಕಾಗಿದ್ದಾರೆ
ಸ್ಥಳ: ಸುಳ್ಯ ದಕ್ಷಿಣ ಕನ್ನಡ
9902176566

ಸುವರ್ಣಾವಕಾಶ
ಪ್ರಯೋಜನಗಳು, ಶೂನ್ಯ ಬಂಡವಾಳ ಮನೆ/ಕಚೇರಿಯಿಂದಲೇ ಕೆಲಸ ನಿಮ್ಮ ಸಮಯಕ್ಕೆ ತಕ್ಕಂತೆ ಕೆಲಸ ಪಿಎಫ್ ಹಾಗೂ ವೈದ್ಯಕೀಯ ಲಾಭ ವಿದೇಶ ಪ್ರಯಾಣ, 30 ವರ್ಷ ಮೇಲ್ಪಟ್ಟಿರಬೇಕು ಹಾಗೂ ಎಸ್‌ಎಸ್‌ಎಲ್‌ಸಿ ಪಾಸಾಗಿರಬೇಕು
9449152797,8660764095

ತಕ್ಷಣ ಬೇಕಾಗಿದ್ದಾರೆ
ಬೋಗಾದಿ, ಗಂಗೋತ್ರಿ ಮತ್ತು ಟಿ.ಕೆ.ಲೇಔಟ್, ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: 15000
9620777819
9620667819

ಗೋವಾ ಪ್ರವಾಸ
ಹೊರಡುವ ದಿನಾಂಕ: 16 ಅಕ್ಟೋಬರ್ 2023 (3 ದಿನಗಳು). ವೀಕ್ಷಿಸುವ ಸ್ಥಳಗಳು: ಬಾಗ ಬೀಚ್, ದೂಧ್‌ಸಾಗರ್ ಜಲಪಾತ, ಕಲಂಗುಟ್ ಬೀಚ್, ಬಾಸಲಿಕ ಚರ್ಚ್, ಅಗೊಡ ಕೋಟೆ, ಮಂಗೇಶಿ ದೇವಸ್ಥಾನ ಮತ್ತು ನಾಗೇಶಿ ದೇವಸ್ಥಾನ. ಊಟ, ವಸತಿ ಸೇರಿರುತ್ತದೆ. ಎಲ್ಲಾ ಸೇರಿ ಒಬ್ಬರಿಗೆ ರೂ. 7,500.
Mob: 70222 71023

FOR RENT 1bhk HOUSE & 2 SHOPS
Mysore Vidyaranyapuram 4th Main, 27th Cross Corner Ground floor 894/A House, North facing having all facilities Vehicle Parking, Solar, Ward Robes, Water Sump, Automatic Motor Pump, Water Tank, Show Case, 2 Fans fitted, Separate Washing Stone.
2 shops west facing measuring 10x10 feet available near Sterling theatre.
9448872684,9900079871

ಸುವರ್ಣ ಯಾತ್ರ
1. ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 9 ದಿನಗಳು 26–10–23
2. 2 ಜ್ಯೋತಿರ್ಲಿಂಗ ಸೇರಿ ಕಾಶಿ ಪ್ರವಾಸ 7 ದಿನಗಳು 27–10–2023
3) ಪುರಿ ಜಗನ್ನಾಥ ಪ್ರವಾಸ 4 ದಿನಗಳು 26–10–23
4) ಗುಜರಾತ್ ಪ್ರವಾಸ 8 ದಿನಗಳು 31–10–23
9480843945
9008381022

ಹೋಂ ನರ್ಸಿಂಗ್ ಕೆಲಸ
ಮೈಸೂರಿನ ಹೆಸರಾಂತ ಹೆಲ್ತ್ ಕೇರ್ ಸಂಸ್ಥೆಗೆ ಹೋಂ ನರ್ಸಿಂಗ್ ಕೆಲಸಕ್ಕೆ ಯುವಕ, ಯುವತಿಯರು, ಮಹಿಳೆಯರು, ವಿಧವೆಯರು ತಕ್ಷಣವೇ ಸಂಪರ್ಕಿಸಿ ಊಟ ವಸತಿಯೊಂದಿಗೆ ಸಂಬಳ 12000–18000 (ಸರ್ಕಾರಿ ನೋಂದಾಯಿತಾ ಸಂಸ್ಥೆ)
9035113222

ಮನೆ ಮಾರಾಟಕ್ಕಿದೆ
(30x40) ವಿದ್ಯಾರಣ್ಯಪುರಂ ಮೈಸೂರು 90 ಲಕ್ಷ, ನೆಗೋಷಿಯೆಬಲ್ (ಮಧ್ಯವರ್ತಿಗಳು ಬೇಡ)
9880395655

Natural Pure Organic honey with C3C4 testing available here (Only for Bulk Orders)
9900374767

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಮತ್ತು ಹೆಬ್ಬಾಳ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: 15000+W/o (8Hrs)
9880727819
9620667819

ಬೇಕಾಗಿದ್ದಾರೆ
ಮೈಸೂರಿನ ವಿಶ್ವೇಶ್ವರನಗರದಲ್ಲಿ Helpers, Loaders & Unloaders ಕೆಲಸ ನಿರ್ವಹಿಸಲು ಪುರುಷರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಮೇಟಗಳ್ಳಿ ಇಂಡಸ್ಟ್ರೀಯಲ್ ಏರಿಯಾದಲ್ಲಿ ಕೆಲಸ ನಿರ್ವಹಿಸಲು ಪುರುಷರು ಬೇಕಾಗಿದ್ದಾರೆ ಸಂಪರ್ಕಿಸಿ
8050958451,9611238376
6360469984

ಬೇಕಾಗಿದ್ದಾರೆ
ಮೈಸೂರಿನ ಕುವೆಂಪುನಗರದ ಐಶ್ವರ್ಯ ಲೇಔಟ್‌ನ ಮನೆಯೊಂದರಲ್ಲಿ ರುಚಿ & ಶುಚಿಯಾಗಿ ವೆಜ್ & ನಾನ್ ವೆಜ್ ಅಡುಗೆ ಮಾಡಿಕೊಡಲು ಮಹಿಳಾ ಅಡುಗೆಯವರು ಬೇಕಾಗಿದ್ದಾರೆ. (ಆಕರ್ಷಕ ಸಂಬಳ ದೊರೆಯುತ್ತದೆ)
9902508150
7406833379

ಶಾದಿಗುರೂಜಿ.ಕಾಂ
ವಧುವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆ ಮಾಡಿ
6361740552

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಕಂಪನಿಗಳಿಗೆ, ಆಫೀಸ್‌ಗಳಿಗೆ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass/Fail ಆದ ಯುವಕ ಯುವತಿಯರಿಗೆ Telephone attender, Receptionist, Billing, Cashier, Backend Department, Quality, Production, helper, Labelling, Maintenance ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 15,200 ರಿಂದ 43,200 (ESI+PF+OT) ಸೇರಿ. T&C Apply
9036548905, 6364103418

ವಾರ್ಷಿಕ ಮಹಾಸಭೆ
ಪದಕಿ ಗೃಹ ನಿರ್ಮಾಣ ಸಹಕಾರ ಸಂಘ (ನಿ) 2022–23ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ: 01–10–2023ನೇ ಭಾನುವಾರ ಬೆಳಿಗ್ಗೆ 10.30 ಗಂಟೆಗೆ "ಹೋಟೆಲ್ ದಾಸಪ್ರಕಾಶ್ ಪ್ಯಾರಡೈಸ್ ಸಭಾಂಗಣ" ವಿವೇಕಾನಂದ ರಸ್ತೆ, ಯಾದವಗಿರಿ, ಮೈಸೂರು–20 ಇಲ್ಲಿ ನಡೆಯಲಿದ್ದು ಮಾನ್ಯ ಸದಸ್ಯರುಗಳು ತಪ್ಪದೇ ಹಾಜರಾಗಬೇಕಾಗಿ ವಿನಂತಿ.
ಕಾರ್ಯಕಾರಿ ಸಮಿತಿಯ ಅಪ್ಪಣೆಯ ಮೇರೆಗೆ ಸಹಿ/– ಅಧ್ಯಕ್ಷರು
ದೂರವಾಣಿ: 0821–2430991

ವಾರ್ಷಿಕ ಮಹಾಸಭೆ
ಪದಕಿ ಸೌಹಾರ್ದ ಕ್ರೆಡಿಟ್ ಕೋ.ಆಪರೇಟಿವ್ ನಿಯಮಿತ
2022–23ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ: 01–10–2023ನೇ ಭಾನುವಾರ ಬೆಳಿಗ್ಗೆ 12.00 ಗಂಟೆಗೆ "ಹೋಟೆಲ್ ದಾಸಪ್ರಕಾಶ್ ಪ್ಯಾರಡೈಸ್ ಸಭಾಂಗಣ" ವಿವೇಕಾನಂದ ರಸ್ತೆ, ಯಾದವಗಿರಿ, ಮೈಸೂರು–20 ಇಲ್ಲಿ ನಡೆಯಲಿದ್ದು ಮಾನ್ಯ ಸದಸ್ಯರುಗಳು ತಪ್ಪದೇ ಹಾಜರಾಗಬೇಕಾಗಿ ವಿನಂತಿ.
ಕಾರ್ಯಕಾರಿ ಸಮಿತಿಯ ಅಪ್ಪಣೆಯ ಮೇರೆಗೆ ಸಹಿ/– ಅಧ್ಯಕ್ಷರು
ದೂರವಾಣಿ 0821–2524154

HOUSE FOR LEASE
2BHK in first Floor, East Facing with Portico on both sides & car Parking Facility Vijayanagar Nagar, 4th Stage, 2nd Phase, Location : Walkable Distance to NPS School, Canara Bank, Manya Clinic & Double road, City Bus stop
9480792529

ತೇಜಸ್ವಿನಿ ಟೂರಿಸ್ಟ್
25–10–23 ರಿಂದ– 8 ದಿನ 3 ಜ್ಯೋತಿರ್ಲಿಂಗ, ಶಿರಡಿ, ತ್ರಯಂಬಕೇಶ್ವರ, ಘೃಷ್ಣೇಶ್ವರ, ಭೀಮಾಶಂಕರ್, ಪೂನೆ, ಮಂತ್ರಾಲಯ, ಗಾಣಗಾಪುರ, ಇತ್ಯಾದಿ
8–12–23 – 10ದಿನ, ಹೈದರಾಬಾದ್, ಮಂತ್ರಾಲಯ, ಅಹೋಬಲ, ಬೆಲಂಗುಹೆ, ಯೋಗಾದಿ, ಅನಾವರಂ, ಸಿಂಹಾಚಲ ಇತ್ಯಾದಿ
9379792644

3 BHK Duplex HOUSE FOR SALE
3 Yrs Old, N/E Corner, Park Facing, 28x40, MUDA App, Panchacharya layout, Vijayanagar 4th Stage, Mysuru Near SVEI School
Price - Rs 1.18 cr
8660105902

ಕಳೆದಿದೆ
ವಸಂತ ಕೋಂ. ಕುಮಾರಶೆಟ್ಟಿ ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲ್ಲೂಕು, ಚುಂಚನಕಟ್ಟೆ ಹೋ॥ ಹಳಿಯೂರು (ಹೊಸೂರು) ಗ್ರಾಮದಲ್ಲಿ ವಾಸವಾಗಿರುವ ಇವರ ನಿವೇಶನದ ಶುದ್ಧ ಕ್ರಯಪತ್ರದ ದಾಸ್ತಾವೇಜು ಸಂಖ್ಯೆ 680 ದಿನಾಂಕ: 02-06-2003 ಮತ್ತು ಪುಸ್ತಕದ ಸಂಖ್ಯೆ 01 VOL - 2496 ಈ ಪತ್ರವು ಕಳೆದಿರುತ್ತದೆ ಸಿಕ್ಕಿದಲ್ಲಿ ಸಂಪರ್ಕಿಸಿ:
8197013082,8197307101
8123983656

HOUSE FOR SALE
2 Houses (GF + FF) measuring 22 sq each, built on 45ft x 60ft plot in Siddharthanagar, Mysuru
Buyers only contact: 83106 36871
Brokers not welcome

ಕೆಲಸಕ್ಕೆ ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್ (ಪುರುಷರು): ಊಟದ ವ್ಯವಸ್ಥೆ ಇರುತ್ತದೆ. ಕೆ.ಆರ್.ಎಸ್. ರಸ್ತೆ, ಬನ್ನಿಮಂಟಪ, ಚಾಮುಂಡಿಪುರಂ, ಜೆಪಿನಗರ, ಡಿ. ಅರಸು ರಸ್ತೆ, ಲಕ್ಷ್ಮೀಪುರ, ಕಳಸ್ತವಾಡಿ, ಕುವೆಂಪುನಗರ, ಸಿದ್ದಲಿಂಗಪುರ, ಹೆಬ್ಬಾಳ 2ನೇ ಹಂತ, ಸರಸ್ವತಿಪುರಂ ಲಲಿತಾದ್ರಿಪುರ, ಜೂ ಹತ್ತಿರ.
8310098788

SITE FOR SALE
40x60 Suvarna Nagar
40x60 SBM Layout
40x60 Kaveri Layout
and Bapuji layout near by
9740088990

WANTED GRADUATE ENGINEER
To work in a free residential school for deprived children Veg food + Accommodation, Honourarium up to 20,000/-
divyadeepa.trust@gmail.com, www.divyadeepatrust.org
WhatsApp: 9341369901
8088586087, 9538499901

SITE FOR SALE
30x40 North Face Site sale Suvarna Nagar (gaddige road bogadi)
9880273834

30x40 ಸೈಟುಗಳು ಮಾರಾಟಕ್ಕೆ ಇದೆ
30x40, 20x40, 30x35 ಸೈಟುಗಳು ಮಾರಾಟಕ್ಕಿದೆ. ಗೊರೂರು ಬಸ್ ನಿಲ್ದಾಣ ಹತ್ತಿರ ರಾಮಾಬಾಯಿನಗರ, ಮೈಸೂರು DTCP ಅನುಮೋದಿತ (ಕಾರ್ಪೋರೇಶನ್ ಮಿತಿ)
1.5 Kms from JP Nagar Ring Road
8660105902

For Sale
1) 30x40 site 16 lakhs including Registration Near New RT Nagar
2) 30x40 E Preethi layout Srirampura
3) 30x40 S/W Sky Top layout yelawala
4) 20x30 G+2 House R K Nagar and Dattagalli
5) 20x 30 Ground +1 New House Kandaya Srirampura
6) 18x40 E 40 feet road Kuvempu nagar
Prakruthi Properties
9538690359,9035990359

ಸೈಟು ಮಾರಾಟಕ್ಕಿದೆ
30x40 E/F K.B.L.Cilicon City K.R.S Road Near NIIT and BEML Infosys
9880490014

ಸೋಲಾರ್ ವಾಟರ್ ಹೀಟರ್ Solar Water Heater
ಸೇಲ್ಸ್, ರಿಪೇರ್, ಸರ್ವೀಸ್ ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳು ದೊರೆಯುತ್ತವೆ
Vinay Krishna 96116 48636
POWERR TECHNOLOGIES Mysore
Multi Branded Solar Water Heater
ಪವರ್ ಟೆಕ್ನಾಲಜೀಸ್
COMPLETE SOLAR SOLUTIONS

SITE FOR SALE
40x60 site with clear titles, near Varuna Lake and JSS Layout, T. Narasipura Road, Mysore.
Buyers contact:
Mob: 9483295181

CHANGE OF NAME
I, **Rajeshwari M.** W/o Eregowda aged about 49 years residing at D.No. 249, 'D' Block, 2nd Main, 3rd Stage, Vijayanagar, Mysore-570 017, changed my old name **Rajeswari M** (Mentioned as per SSLC Marks card) to **Rajeshwari M.** (as per mentioned in Adhar card No. 9206 3746 3632) Here afterwards wish to called and known for all acts deeds and things as **Rajeshwari M** only, vide affidavit sworn in before Notary Sujatha C, Dated 26.09.2023.
Sd/- Rajeshwari M.

ಮೈಸೂರಲ್ಲಿ ಬಂದ್ ಸಂಪೂರ್ಣ ಯಶಸ್ವಿ





ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಬಿಕೋ ಎನ್ನುತ್ತಿರುವ ಮೈಸೂರಿನ ರಸ್ತೆ, ಗ್ರಾಮಾಂತರ, ನಗರ ಬಸ್ ನಿಲ್ದಾಣಗಳು.



ತಮಿಳುನಾಡಿಗೆ ನೀರು ಹರಿಸುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಬಂದ್ ವೇಳೆ ಮಾಜಿ ಶಾಸಕ ಎಲ್. ನಾಗೇಂದ್ರ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು, ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

ಒಂದನೇ ಪುಟದಿಂದ

ಇಂದು ತೀವ್ರ ಸ್ವರೂಪ ಪಡೆಯಿತು. ಕಳೆದ ಎರಡು ತಿಂಗಳಿಂದ ನಡೆಯುತ್ತಿರುವ ಹೋರಾಟಕ್ಕೂ ಮಣಿಯದ ರಾಜ್ಯ ಸರ್ಕಾರದ ವಿರುದ್ಧ ಸಿಡಿದೆದ್ದ ಜನತೆ 'ಕರ್ನಾಟಕ ಬಂದ್' ಮೂಲಕ ಬಿಸಿ ಮುಟ್ಟಿಸಿದರು. ಇದಕ್ಕೂ ಮುನ್ನ ಸೆ.26ರಂದು 'ಬೆಂಗಳೂರು ಬಂದ್' ಮೂಲಕವೂ ಆಕ್ರೋಶ ವ್ಯಕ್ತವಾಗಿತ್ತು.

ಬೀದಿಗಿಳಿದ ಹೋರಾಟಗಾರರು: ಪ್ರಾಧಿಕಾರದ ಆದೇಶದಂತೆ ಕಾವೇರಿ ನೀರು ಬಿಡುವುದನ್ನು ವಿರೋಧಿಸಿ ರೈತ ಹಾಗೂ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಇಂದು ಬೀದಿಗಿಳಿದು ಹೋರಾಟ ಮಾಡಿದರು. ಕೆಆರ್‌ಎಸ್, ಕಬಿನಿ ಸೇರಿದಂತೆ ಕಾವೇರಿ ಜಲಾಯನ ಪ್ರದೇಶದ ಅಣೆಕಟ್ಟು ಬರಿದಾಗುತ್ತಿದ್ದು, ಕುಡಿಯುವ ನೀರಿಗೂ ಹಾಹಾಕಾರ ಉಂಟಾಗುತ್ತಿರುವ ಪರಿಸ್ಥಿತಿ ಇದೆ. ಆದರೂ ಅಕ್ಟೋಬರ್ 15ರ ತನಕ 3 ಸಾವಿರ ಕ್ಯುಸೆಕ್ ನೀರು ಬಿಡುವಂತೆ ಪ್ರಾಧಿಕಾರ ಆದೇಶ ನೀಡಿದೆ. ಈ ಹಿನ್ನೆಲೆಯಲ್ಲಿ ರೊಚ್ಚಿಗೆದ್ದ ಕನ್ನಡಿಗರು 'ಕರ್ನಾಟಕ ಬಂದ್' ಮೂಲಕ ಹೋರಾಟಕ್ಕೆ ಮತ್ತಷ್ಟು ಕಾವು ನೀಡಿದರು. ಈ ಮೂಲಕ ಕೇಂದ್ರ, ರಾಜ್ಯ ಸರ್ಕಾರಕ್ಕೆ ಎಚ್ಚರಿಕಾ ಸಂದೇಶ ರವಾನಿಸಲಾಗಿದೆ.

ಕಾವೇರಿ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿದ ಮೈಸೂರಿನ ಜನರು ಸ್ವಯಂ ಪ್ರೇರಣೆಯಿಂದ ಬಂದ್ ಮಾಡಿದ್ದರು. ಜೀವನದಿ ಕಾವೇರಿ ಒಡಲನ್ನು ಬರಿದು ಮಾಡುತ್ತಿರುವ ಸರ್ಕಾರದ ವಿರುದ್ಧ ಮೈಸೂರು ಜನರು ಬಂದ್ ಬೆಂಬಲಿಸುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ವಹಿವಾಟು ಬಂದ್: ಮೈಸೂರಿನ ಹೃದಯ ಭಾಗವಾದ ಕೆ.ಆರ್.ವೃತ್ತ, ಸಯ್ಯಾಜಿ ರಾವ್ ರಸ್ತೆ, ದೇವರಾಜ ಅರಸ್ ರಸ್ತೆ, ಶಿವರಾಂಪೇಟೆ, ಅಶೋಕ ರಸ್ತೆ, ಇರ್ವಿನ್ ರಸ್ತೆ, ಮಂಡಿ ಮೊಹಲ್ಲಾ, ಅಗ್ರಹಾರ, ನಂಜುಮಳಿಗೆ ಸೇರಿದಂತೆ ಬಡಾವಣೆಗಳಲ್ಲೂ ಅಂಗಡಿಗಳನ್ನು ಬಂದ್ ಮಾಡುವ ಮೂಲಕ ವ್ಯಾಪಾರಸ್ಥರು ಕಾವೇರಿ ಹೋರಾಟಕ್ಕೆ ಕೈ ಜೋಡಿಸಿದರು. ಇದರಿಂದ ಸದಾ ಗಿಜಿಗಿಡುತ್ತಿದ್ದ ಮೈಸೂರಿನ ರಸ್ತೆಗಳು ಬಿಕೋ ಎನ್ನುತ್ತಿದ್ದವು. ಮೈಸೂರಿನ ಸಿನಿಮಾ ಥಿಯೇಟರ್‌ಗಳು, ಮಾಲ್‌ಗಳು, ಸೂಪರ್ ಮಾರ್ಕೆಟ್‌ಗಳು ಸ್ವಯಂ ಪ್ರೇರಣೆಯಿಂದ ಬಾಗಿಲು ಹಾಕಿ ರೈತರು ಹಾಗೂ ಕನ್ನಡ ಪರ ಸಂಘಟನೆಗಳು ನಡೆಸುತ್ತಿದ್ದ ಹೋರಾಟಕ್ಕೆ ಸಾಥ್ ನೀಡಿದರು.

ಸ್ವಯಂ ಪ್ರೇರಣೆಯಿಂದ ಬಂದ್: ವ್ಯಾಪಾರಸ್ಥರು ಸ್ವಯಂ ಪ್ರೇರಣೆಯಿಂದ ಬಂದ್ ಮಾಡಿದ್ದರಿಂದ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಬಲವಂತವಾಗಿ ಬಾಗಿಲು ಹಾಕಿಸುವ ಪ್ರಮೇಯವೇ ಬರಲಿಲ್ಲ. ತಮಿಳುನಾಡಿಗೆ ಹೀಗೆ ಕಾವೇರಿ ನೀರು ಹರಿಸಿದರೆ ಕುಡಿಯುವ ನೀರಿಗೂ ಹಾಹಾಕಾರ ಉಂಟಾಗುತ್ತದೆ ಎಂಬುದು ಮನವರಿಕೆ ಆಗಿದ್ದ ಕಾರಣ ಮೈಸೂರಿನ ಪ್ರತಿಯೊಬ್ಬರು ಹೋರಾಟವನ್ನು ಬೆಂಬಲಿಸಿದರು.

ಬಡಾವಣೆಗಳಲ್ಲೂ ಸ್ಥಗಿತ: ಸಾಮಾನ್ಯವಾಗಿ ಬಂದ್ ವೇಳೆ ನಗರದ ಹೃದಯ ಭಾಗದಲ್ಲಿ ಮಾತ್ರ ಅದರ ಪರಿಣಾಮ ಕಂಡು ಬರುತ್ತಿತ್ತು ಬಡಾವಣೆಗಳ ವ್ಯಾಪಾರ-ವಹಿವಾಟು ಎಂದಿನಂತೆ ನಡೆಯುತ್ತಿತ್ತು. ಆದರೆ ಇಂದು ನಡೆದ 'ಕರ್ನಾಟಕ ಬಂದ್' ವೇಳೆ ಮೈಸೂರಿನ ಬಹುತೇಕ ಎಲ್ಲಾ ಬಡಾವಣೆಗಳ ಅಂಗಡಿಗಳನ್ನು ಬಂದ್ ಮಾಡಿ ವ್ಯಾಪಾರ-ವಹಿವಾಟು ಸ್ಥಗಿತಗೊಳಿಸಿದ್ದರು. ದೇವರಾಜ ಮಾರುಕಟ್ಟೆ ಅಗ್ರಹಾರದ ವಾಣಿವಿಲಾಸ ಮಾರುಕಟ್ಟೆ, ಮಂಡಿ ಮೊಹಲ್ಲಾ ಮಾರುಕಟ್ಟೆಗಳಲ್ಲಿ ಹಣ್ಣು, ತರಕಾರಿ ಅಂಗಡಿಗಳನ್ನು ಮುಚ್ಚಲಾಗಿತ್ತು. ದೇವರಾಜ ಮಾರುಕಟ್ಟೆಯಲ್ಲಿ ಹೂವಿನ ಅಂಗಡಿ ತೆರೆದಿದ್ದರೂ ಗ್ರಾಹಕರಿಲ್ಲದೆ ವ್ಯಾಪಾರವೇ ಆಗಲಿಲ್ಲ. ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್‌ಗಳ ಸಂಚಾರ ಸ್ಥಗಿತವಾಗಿತ್ತು. ಇದರಿಂದ ನಗರ, ಗ್ರಾಮಾಂತರ ಹಾಗೂ ಖಾಸಗಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಲ್ಲದೆ ಬಿಕೋ ಎನ್ನುವ ವಾತಾವರಣವಿತ್ತು. ಆಟೋ, ಟ್ಯಾಕ್ಸಿ, ಕ್ಯಾಬ್‌ಗಳು ರಸ್ತೆಗಿಳಿಯಲಿಲ್ಲ. ಇದರಿಂದ ವಾಹನಗಳ ಸಂಚಾರವಿಲ್ಲದೆ ಇಡೀ ಮೈಸೂರು ನಗರದ ರಸ್ತೆಗಳು ಖಾಲಿ ಖಾಲಿಯಾಗಿ ಬಿಕೋ ಎನ್ನುತ್ತಿದ್ದವು.

ಬಸ್ ಸಂಚಾರ ಸ್ಥಗಿತ: ಮುಂಜಾನೆ ಹೊರ ಊರುಗಳಿಂದ ಬಂದ ಜನರು ಇಲ್ಲಿಂದ ತೆರಳಲು ಬಸ್‌ಗಳಿಲ್ಲದೆ ಬಸ್ ನಿಲ್ದಾಣದಲ್ಲೇ ಸಂಜೆತನಕ ಕಾಲ ಕಳೆದರು. ಆದರೆ ನಗರದ ಹಲವು ಬಡಾವಣೆಗಳಿಗೆ ಹೋಗಲು ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಪೊಲೀಸರು ಪ್ರಿ-ಪೇಯ್ಡ್ ಆಟೋ ವ್ಯವಸ್ಥೆ ಮಾಡಿದ್ದರಿಂದ ತೊಂದರೆ ಆಗಲಿಲ್ಲ.

ಮೈಸೂರು ನಗರ ಪಾಲಿಕೆ, ಕಾಡಾ ಕಚೇರಿ, ಪೋಸ್ಟ್ ಆಫೀಸ್‌ಗಳಲ್ಲಿ ಸಿಬ್ಬಂದಿ ಎಂದಿನಂತೆ ಕಾರ್ಯ ನಿರ್ವಹಿಸುತ್ತಿದ್ದರು. ಈ ವೇಳೆ ಸರ್ಕಾರಿ ಕಚೇರಿಗಳಿಗೆ ಬಂದ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಕಚೇರಿ ಬಂದ್ ಮಾಡುವಂತೆ ಮನವಿ ಮಾಡಿದರು. ಆದರೆ, ಬಲವಂತ ಮಾಡದೆ ಕೈ ಮುಗಿದು ಬೆಂಬಲ ಕೋರಿದರು. ಇದಕ್ಕೆ ಸ್ಪಂದಿಸಿದ ಸಿಬ್ಬಂದಿ ಬಾಗಿಲು ಹಾಕಿ ಮನೆಯತ್ತ ಹೊರಟರು.

ಕಾವೇರಿ ಕ್ರಿಯಾ ಸಮಿತಿ ಸೇರಿದಂತೆ ರೈತ ಹಾಗೂ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಬೆಳಗ್ಗೆಯಿಂದ ಸಂಜೆ ತನಕ ಬೈಕ್ ರ‍್ಯಾಲಿ ನಡೆಸಿ, ತಮಿಳುನಾಡಿಗೆ ಕಾವೇರಿ ನೀರು ಬಿಡುತ್ತಿರುವ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನ ಇನ್ನಿತರ ಕಡೆ ಪ್ರತಿಭಟನೆ ನಡೆಸಿದರು.



ವ್ಯಾಪಕ ಬಂದೋಬಸ್ತ್; ಎಲ್ಲೆಡೆ ಹದ್ದಿನ ಕಣ್ಣು!





'ಕರ್ನಾಟಕ ಬಂದ್' ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಮೈಸೂರು ನಗರದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ಸ್ವತಃ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿ ಮುತ್ತುರಾಜ್ ಅವರು ಬೆಳಗ್ಗೆಯಿಂದ ಸಂಜೆ ತನಕ ನಗರದ ಹಲವು ಸ್ಥಳಗಳಿಗೆ ಭೇಟಿ ನೀಡಿ ಭದ್ರತಾ ವ್ಯವಸ್ಥೆ ಬಗ್ಗೆ ಪರಿಶೀಲನೆ ನಡೆಸಿದರು.

ಯಾವುದೇ ಅಹಿತಕರ ಘಟನೆ ನಡೆಯದಂತೆ ಪ್ರಮುಖ ಹಾಗೂ ಸೂಕ್ಷ್ಮ ಸ್ಥಳಗಳಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು. ನಗರದ ಎಲ್ಲಾ ವೃತ್ತ ಹಾಗೂ ರಸ್ತೆಗಳಲ್ಲಿ ಅಳವಡಿಸಲಾಗಿರುವ ಸಿಸಿ ಕ್ಯಾಮರಾಗಳ ಮೂಲಕ ಜನರು ಹಾಗೂ ಪ್ರತಿಭಟನಾಕಾರರ ಚಲನ-ವಲನಗಳ ಮೇಲೆ ನಿಗಾ ಇಡಲಾಗಿತ್ತು. ನಗರ, ಗ್ರಾಮಾಂತರ ಬಸ್ ನಿಲ್ದಾಣ ಹಾಗೂ ರೈಲ್ವೆ ನಿಲ್ದಾಣದಲ್ಲಿ ಪ್ರತಿಭಟನೆ ನಡೆಯುವ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು. ರಾಜ್ಯ ಹಾಗೂ ಕೇಂದ್ರ ಸರ್ಕಾರಿ ಕಚೇರಿಗಳಿಗೆ ಭದ್ರತೆ ನೀಡಲಾಗಿತ್ತು. ಪೊಲೀಸರಲ್ಲದೆ 300ಕ್ಕೂ ಹೆಚ್ಚು ಹೋಂಗಾರ್ಡ್‌ಗಳನ್ನು ಭದ್ರತೆಗೆ ನಿಯೋಜನೆ ಮಾಡಲಾಗಿತ್ತು. ಬಲವಂತವಾಗಿ ಬಂದ್ ಮಾಡಿಸಿದರೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದು ಈ ಮೊದಲೇ ನಗರ ಪೊಲೀಸ್ ಆಯುಕ್ತರು ಎಚ್ಚರಿಕೆ ನೀಡಿದ್ದರಿಂದ ಯಾವ ಸಂಘಟನೆಗಳ ಕಾರ್ಯಕರ್ತರು ಬಲವಂತವಾಗಿ ಬಂದ್ ಮಾಡಿಸುವ ಸಾಹಸಕ್ಕೆ ಹೋಗಲಿಲ್ಲ. ವ್ಯಾಪಾರಸ್ಥರು ಸ್ವಯಂ ಪ್ರೇರಣೆಯಿಂದ ಬಂದ್ ಮಾಡಿದ್ದರು. ಆದರೂ ಕೆಲವು ಸಣ್ಣ-ಪುಟ್ಟ ಅಂಗಡಿಗಳು ತೆರೆದಿದ್ದವು. ಬೈಕ್ ರ‍್ಯಾಲಿಯಲ್ಲಿ ಬಂದ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಅಂಗಡಿ ಮುಚ್ಚುವಂತೆ ಮನವಿ ಮಾಡಿದರು. ಈ ಮೂಲಕ ಇಡೀ ದಿನ ನಡೆದ ಹೋರಾಟದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದೆ ಶಾಂತಿಯುತವಾಗಿ ಬಂದ್ ಆಗಿತ್ತು.

ಮದ್ಯಪ್ರಿಯರ ಅಲೆದಾಟ!

ಯಾವುದೇ ಬಂದ್ ವೇಳೆ ಬಾರ್‌ಗಳಲ್ಲಿ ಕದ್ದು ಮುಚ್ಚಿ ವ್ಯಾಪಾರ ಮಾಡಲಾಗುತ್ತಿತ್ತು. ಆದರೆ ಇಂದಿನ ಕಾವೇರಿ ಹೋರಾಟಕ್ಕೆ ಬಾರ್ ಅಂಡ್ ರೆಸ್ಟೋರೆಂಟ್ ಮಾಲೀಕರು ಕೂಡ ಕೈ ಜೋಡಿಸಿ, ಬಾರ್‌ಗಳನ್ನು ಸಂಪೂರ್ಣವಾಗಿ ಬಂದ್ ಮಾಡಿದ್ದರು. ಮೈಸೂರಿನ ಸಣ್ಣ-ಪುಟ್ಟ ಬಾರ್‌ಗಳೂ ತೆರೆದಿರಲಿಲ್ಲ. ಆದರೆ ಒಂದು ದಿನವೂ ಮದ್ಯ ಬಿಡದ ವ್ಯಸನಿಗಳು ಬಾರ್‌ಗಳು ಬಂದ್ ಆಗಿದ್ದರಿಂದ ಪರದಾಡುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಗಲ್ಲಿಗಳಲ್ಲಿರುವ ಬಾರ್‌ಗಳಾದರೂ ತೆರೆದಿರಬಹುದೆಂದು ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆದಾಡುತ್ತಿದ್ದರು.

ಪ್ರವಾಸಿಗರಿಗೆ ಸಂಕಷ್ಟ

ಮೈಸೂರು ಪ್ರಮುಖ ಪ್ರವಾಸಿ ಕೇಂದ್ರವಾಗಿದ್ದು, ಪ್ರತಿ ದಿನ ದೇಶ ವಿದೇಶಗಳಿಂದ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಆದರೆ ಇಂದು 'ಕರ್ನಾಟಕ ಬಂದ್' ಆಗಿದ್ದರಿಂದ ಮೈಸೂರಿಗೆ ಬಂದಿದ್ದ ಪ್ರವಾಸಿಗರಿಗೆ ಬಂದ್ ಬಿಸಿ ತಟ್ಟಿತು. ಬಹಳಷ್ಟು ಪ್ರವಾಸಿಗರು ಮೈಸೂರಿನಲ್ಲೆ ವಾಸ್ತವ್ಯ ಹೂಡಿದ್ದರು. ಆದರೆ ಇಂದು ಹೋಟೆಲ್ ಹಾಗೂ ಫಾಸ್ಟ್‌ಫುಡ್‌ಗಳು ಬಂದ್ ಆಗಿದ್ದರಿಂದ ಊಟ-ತಿಂಡಿಗಾಗಿ ಪರದಾಡುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಮೈಸೂರು ಅರಮನೆ, ಮೃಗಾಲಯ ಸೇರಿದಂತೆ ಇತರೆ ಪ್ರವಾಸಿ ತಾಣಗಳು ತೆರೆದಿದ್ದರೂ ಪ್ರವಾಸಿಗರಿಲ್ಲದೆ ಭಣಗುಡುತ್ತಿದ್ದವು.

ತಮಿಳುನಾಡು ವಾಹನಗಳು ಕಾಣಸಿಗಲಿಲ್ಲ

ಸಾಮಾನ್ಯವಾಗಿ ತಮಿಳುನಾಡಿನಿಂದ ಮೈಸೂರಿಗೆ ಪ್ರತಿ ದಿನ ಸಾವಿರಾರು ವಾಹನಗಳು ಬರುತ್ತವೆ. ಸತ್ಯಮಂಗಲ, ಊಟಿ, ಕೊಯಮತ್ತೂರು ಕಡೆಯಿಂದ ತಮಿಳುನಾಡಿನ ಸಾಕಷ್ಟು ಜನರು ಪ್ರವಾಸ ಹಾಗೂ ವ್ಯಾಪಾರ-ವಹಿವಾಟಿಗೆ ಮೈಸೂರಿಗೆ ಬರುತ್ತಾರೆ. ಆದರೆ ಇಂದು ತಮಿಳುನಾಡಿನಿಂದ ಯಾವ ವಾಹನವೂ ಮೈಸೂರಿಗೆ ಬರಲಿಲ್ಲ. ಮೈಸೂರಿನಲ್ಲಿ ತಮಿಳುನಾಡಿನ ಒಂದು ವಾಹನವೂ ಕಾಣಿಸಲಿಲ್ಲ. ಕಾವೇರಿ ನೀರು ಪಡೆಯುತ್ತಿರುವ ತಮಿಳುನಾಡಿನ ವಿರುದ್ಧವೇ ನಡೆಯುತ್ತಿರುವ ಹೋರಾಟವಾದ ಕಾರಣ ಅಲ್ಲಿನ ಜನರು ಮೈಸೂರಿಗೆ ಬರುವ ಸಾಹಸ ತೋರಲಿಲ್ಲ.

ಎಂದಿನಂತೆ ಅಗತ್ಯ ವಸ್ತುಗಳ ಮಾರಾಟ

ಮೈಸೂರಿನ ಎಲ್ಲಾ ವ್ಯಾಪಾರ-ವಹಿವಾಟು ಬಂದ್ ಆಗಿದ್ದರೂ ಕೆಲವೊಂದಕ್ಕೆ ವಿನಾಯಿತಿ ನೀಡಲಾಗಿತ್ತು. ಅಗತ್ಯ ವಸ್ತುಗಳ ವ್ಯಾಪಾರಕ್ಕೆ ಯಾರೂ ಅಡ್ಡಿ ಮಾಡಲಿಲ್ಲ. ಇದರಿಂದ ಆಸ್ಪತ್ರೆ, ಮೆಡಿಕಲ್ ಸ್ಟೋರ್, ಹಣ್ಣಿನ ಅಂಗಡಿ ಹಾಗೂ ಹಾಲು ಮಾರಾಟದ ಅಂಗಡಿಗಳು ಎಂದಿನಂತೆ ತೆರೆದಿದ್ದವು. ಆದರೆ ಕೆಎಸ್‌ಆರ್‌ಟಿಸಿ ಬಸ್, ಆಟೋ, ಟ್ಯಾಕ್ಸಿ, ಕ್ಯಾಬ್‌ಗಳ ಸಂಚಾರವಿಲ್ಲದ ಕಾರಣ ಆಸ್ಪತ್ರೆಗಳಿಗೆ ಹೋಗುವವರು ಪರದಾಡಿದರು. ಸಾಮಾನ್ಯವಾಗಿ ಕೆ.ಆರ್.ಆಸ್ಪತ್ರೆಯಲ್ಲಿ ಯಾವಾಗಲೂ ರೋಗಿಗಳು ತುಂಬಿರುತ್ತಿದ್ದರು. ಆದರೆ ಇಂದು ಬಂದ್ ಆಗಿದ್ದರಿಂದ ರೋಗಿಗಳ ಸಂಖ್ಯೆ ತೀರಾ ಕಡಿಮೆ ಇತ್ತು.

ಕಾವೇರಿ ಕಣಿವೆ ಪ್ರದೇಶ ಸ್ತಬ್ಧ

ಪಡೆಯಬಹುದು. ನ್ಯಾಯಾಂಗ ನಿಂದನೆಯಾಗಲಿದೆ. ಸರ್ಕಾರವನ್ನು ವಜಾ ಮಾಡಬಹುದು. ಆದರೂ ಕಾನೂನು ತಜ್ಞರ ಸಲಹೆ ಪಡೆದು ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದಿದ್ದಾರೆ. ಕಾವೇರಿ ಕೊಳ್ಳದ ಜಿಲ್ಲೆಗಳಲ್ಲಿ ಬಂದ್ ಪೂರ್ಣವಾಗಿ ಯಶಸ್ವಿಯಾಗಿದ್ದರೆ, ಉತ್ತರ ಕರ್ನಾಟಕ ಮತ್ತು ಕರಾವಳಿ ಭಾಗದಲ್ಲಿ ಬಂದ್‌ಗೆ ಮಿಶ್ರ ಪ್ರತಿಫಲ ಕಂಡಿದೆ. ಬಂದ್ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಆಗಮಿಸಬೇಕಿದ್ದ ವಿಮಾನಗಳು ಹಾಗೂ ಬೆಂಗಳೂರಿನಿಂದ ವಿವಿಧ ರಾಜ್ಯಗಳ ನಗರಗಳಿಗೆ ತೆರಳಬೇಕಿದ್ದ ವಿಮಾನಗಳು ರದ್ದಾಗಿದ್ದವು. ಪ್ರತಿಭಟನಾಕಾರರು ರೈಲುಗಳನ್ನು ತಡೆಹಿಡಿಯುವ ಹಾಗೂ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡುವ ಪ್ರಯತ್ನವನ್ನು ಕೆಲವೆಡೆ ಮಾಡಿದರೂ ಯಾವುದೇ ಅಹಿತಕರ ಘಟನೆ ಜರುಗಲಿಲ್ಲ. ಬಂದ್‌ಗೆ ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿದರು, ರಾಜಧಾನಿ ಬೆಂಗಳೂರು ಸೇರಿದಂತೆ ಕಾವೇರಿ ಕೊಳ್ಳದ ಭಾಗದಲ್ಲಿ ಸ್ವಯಂ ಪ್ರೇರಿತವಾಗಿ ಬಂದ್‌ಗೆ ಬೆಂಬಲ ನೀಡಲಾಗಿತ್ತು.

ಈ ಭಾಗದ ಚಲನಚಿತ್ರ, ವಾಣಿಜ್ಯೋದ್ಯಮ, ಅಂಗಡಿ-ಮುಂಗಟ್ಟು ಬಂದ್ ಆಗಿ ಪೂರ್ಣವಾಗಿ ವಾಣಿಜ್ಯ ವಹಿವಾಟು ಸ್ಥಗಿತಗೊಂಡಿತ್ತು. ಕೈಗಾರಿಕೆಗಳು ಸ್ತಬ್ಧಗೊಂಡು ಕಾವೇರಿ ಹೋರಾಟಕ್ಕೆ ಬೆಂಬಲ ನೀಡಿದ್ದವು. ಆದರೆ, ರಾಜ್ಯ ಸರ್ಕಾರ ತಮ್ಮ ಸ್ವಾಮ್ಯಕ್ಕೆ ಒಳಪಟ್ಟ ಬಸ್‌ಗಳನ್ನು ರಸ್ತೆಗಿಳಿಸಿದ್ದರೂ ಪ್ರಯಾಣಿಕರಿಲ್ಲದೆ ಸೊರಗಿತ್ತು.

ಮುನ್ನೆಚ್ಚರಿಕೆಯಾಗಿ ಶಾಲಾ-ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿತ್ತು. ಇನ್ನೂ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸ್ವಾಮ್ಯದ ಕಚೇರಿಗಳು ಎಂದಿನಂತೆ ಕಾರ್ಯ ನಿರ್ವಹಿಸಿದ್ದರೂ ಹಾಜರಾತಿ ವಿರಳವಾಗಿತ್ತು. ಬಂದ್ ಸಂದರ್ಭದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ರಾಜಧಾನಿಯಲ್ಲಿ ಪ್ರತಿಭಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗಿತ್ತು. ಆದರೆ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮಾತ್ರ ನಡೆಯುವಂತೆ ನೋಡಿಕೊಂಡರು. ಚಿತ್ರೋದ್ಯಮ ಬಂದ್ ಮಾಡಿದ್ದ ನಟ-ನಟಿಯರು ಹಾಗೂ ಚಿತ್ರೋದ್ಯಮದ ಪ್ರಮುಖರು ಚಲನಚಿತ್ರ ವಾಣಿಜ್ಯ ಮಂಡಳಿ ಬಂದ್ ಮಾಡಿ ಪ್ರತಿಭಟನೆ ನಡೆಸಿ, ಕಾವೇರಿ ನೀರು ಹರಿಸುವುದನ್ನು ನಿಲ್ಲಿಸುವಂತೆ ಆಗ್ರಹಿಸಿದರು. ನಿಷೇಧಾಜ್ಞೆ ಜಾರಿಯಲ್ಲಿದ್ದರಿಂದ ಯಾವುದೇ ಸಂಘಟನೆಗಳು ಮೆರವಣಿಗೆ ನಡೆಸಲಿಲ್ಲ. ಬಂದ್‌ನ ಕೇಂದ್ರ ಬಿಂದುವಾದ ವಾಟಾಳ್ ನಾಗರಾಜ್ ಬುರ್ಖಾ ತೊಟ್ಟು ವಿನೂತನವಾಗಿ ಪ್ರತಿಭಟನೆ ಮಾಡಿದರು. ನಂತರ ಮಾತನಾಡಿದ ಅವರು, ಕರ್ನಾಟಕ ಬಂದ್ ಶಾಂತಿಯುತವಾಗಿ ಯಶಸ್ವಿಯಾಗಿದೆ. ಅಕ್ಟೋಬರ್ 5ರಂದು ರಾಜಧಾನಿಯಿಂದ ಕೆಆರ್‌ಎಸ್ ಜಲಾಶಯದವರೆಗೆ ಕೆಆರ್‌ಎಸ್ ಚಲೋ ರ‍್ಯಾಲಿ ನಡೆಸಲಾಗುವುದು. ರ‍್ಯಾಲಿಗೆ ತಮ್ಮ ಸ್ವಂತ ವಾಹನಗಳಲ್ಲಿ ಚಲಚಿತ್ರ ಕಲಾವಿದರು, ರೈತರು, ಕನ್ನಡಪರ ಸಂಘಟನೆಯವರು ಭಾಗವಹಿಸಬೇಕು ಎಂದು ಕರೆ ನೀಡಿದರು. ತಮಿಳುನಾಡಿಗೆ ನೀರು ಹರಿಸುವುದನ್ನು ನಿಲ್ಲಿಸದಿದ್ದರೆ ಕೆಆರ್‌ಎಸ್ ಜಲಾಶಯಕ್ಕೆ ಮುತ್ತಿಗೆ ಹಾಕುವ ಚಳುವಳಿ ಮಾಡಲಾಗುವುದು ಎಂದರು.


ನಿತ್ಯ 3 ಸಾವಿರ ಕ್ಯೂಸೆಕ್ ನೀರು ಬಿಡಿ

ಬಾಕಿ 83 ಟಿಎಂಸಿ ನೀರು ಬಿಡುಗಡೆ ಮಾಡುವಂತೆ ಸೂಚಿಸಬೇಕು ಎಂದು ಸಿಡಬ್ಲ್ಯುಎಂಎ ಸಭೆಯಲ್ಲಿ ತಮಿಳುನಾಡು ಸರ್ಕಾರದ ಪರ ಅಧಿಕಾರಿಗಳು ವಾದ ಮಂಡನೆ ಮಾಡಿದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಕರ್ನಾಟಕದ ಪರ ಅಧಿಕಾರಿ ಸಿಂಗ್, ರಾಜ್ಯದಲ್ಲಿ ಸಾಕಷ್ಟು ಮಳೆ ಕೊರತೆ ಇದೆ. ರಾಜ್ಯದ ಡ್ಯಾಂಗಳಲ್ಲಿ ಸಾಕಷ್ಟು ನೀರಿಲ್ಲ. ಮುಂದಿನ ಜೂನ್ ತಿಂಗಳವರೆಗೂ ರಾಜ್ಯದಲ್ಲಿ ಉತ್ತಮ ಮಳೆಯಾಗುವ ಯಾವುದೇ ಆಶಾಭಾವವಿಲ್ಲ. ಬೆಂಗಳೂರು ಮತ್ತು ಇತರೆ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸಬೇಕು. ನಮ್ಮಲ್ಲೂ ರೈತರು ಬತ್ತ ಬೆಳೆಯುತ್ತಿದ್ದಾರೆ. ಅವರಿಗೇ ನೀರಿಲ್ಲ. ಆದರೆ ತಮಿಳುನಾಡಿನ ಪರಿಸ್ಥಿತಿ ಹೀಗಿಲ್ಲ. ಅಲ್ಲಿ ಹಿಂಗಾರು ಮಳೆ ಇದೆ. ಹಿಂಗಾರು ಮಳೆಯಿಂದ ಮೆಟ್ಟೂರು ಡ್ಯಾಂ ತುಂಬುತ್ತದೆ. ಹೀಗಾಗಿ ಈ ಸಂಕಷ್ಟದ ಪರಿಸ್ಥಿತಿಯಲ್ಲಿ ನೀರು ಬಿಡಲು ಸಾಧ್ಯವೇ ಇಲ್ಲ ಎಂದು ರಾಕೇಶ್ ಸಿಂಗ್ ಏರುಧನಿಯಲ್ಲೇ ಆಕ್ಷೇಪ ವ್ಯಕ್ತಪಡಿಸಿದರು. ಕರ್ನಾಟಕದ ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಶೇ 53 ರಷ್ಟು ಮಳೆ ಕೊರತೆ ಇದೆ. ರಾಜ್ಯ ಸರ್ಕಾರವು 161 ತಾಲೂಕುಗಳನ್ನು ಬರಪೀಡಿತವೆಂದು ಘೋಷಿಸಿದೆ. 34 ತಾಲೂಕುಗಳು ಮಧ್ಯಮ ಬರ ಪೀಡಿತವೆಂದು ಸರ್ಕಾರ ಘೋಷಿಸಿದೆ. 32 ತೀವ್ರ ಬರ ಪೀಡಿತ ತಾಲೂಕುಗಳು ಕಾವೇರಿ ಜಲಾನಯನ ಪ್ರದೇಶದಲ್ಲಿವೆ. ಕರ್ನಾಟಕ ತನ್ನ ಜಲಾಶಯಗಳಿಂದ ನೀರು ಹರಿಸುವ ಸ್ಥಿತಿಯಲ್ಲಿಲ್ಲ. ಕರ್ನಾಟಕ ಸರ್ಕಾರ ಈಗಾಗಲೇ ನಿಮ್ಮ ಎಲ್ಲಾ ಆದೇಶ ಪಾಲಿಸಿದೆ. ರಾಜ್ಯದಲ್ಲಿ ನೀರು ಕೊರತೆ ಇರುವುದನ್ನು ಸಿಡಬ್ಲ್ಯುಎಂಎ ಗಮನಿಸಬೇಕು. ರಾಜ್ಯದ ರೈತರು, ಜನರ ಆಕ್ರೋಶ ಹೆಚ್ಚಾಗಿದ್ದು ಸರಣಿ ಬಂದ್ ನಡೆಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಮತ್ತೆ ನೀರು ಹರಿಸುವುದು ಅಸಾಧ್ಯವೆಂದು ಕರ್ನಾಟಕ ಪರ ಅಧಿಕಾರಿಗಳು ವಾದ ಮಂಡಿಸಿದರು. ಅಂತಿಮವಾಗಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ತಮಿಳುನಾಡಿಗೆ ನಿತ್ಯ 3 ಸಾವಿರ ಕ್ಯುಸೆಕ್ ನೀರನ್ನು ಹರಿಸುವ ಕಾವೇರಿ ನೀರು ನಿಯಂತ್ರಣಾ ಸಮಿತಿ ಆದೇಶ ಪಾಲಿಸುವಂತೆ ಆದೇಶ ನೀಡಿದೆ.

ತಮಿಳುನಾಡಿಗೆ ಧಾರಾಕಾರವಾಗಿ ಹರಿಯುತ್ತಿರುವ ಕಾವೇರಿ...

ಈಗ ಲಭ್ಯವಿರುವುದು ಕೇವಲ 14 ಟಿಎಂಸಿ ನೀರು



ಮೈಸೂರು, ಸೆ.29(ಬಿಎಲ್‌ಯು)- ತಮಿಳುನಾಡಿಗೆ ಪ್ರತಿ ದಿನ ಕಾವೇರಿ ನೀರು ಬಿಡುತ್ತಿರುವ ಕಾರಣ ಕೆಆರ್‌ಎಸ್ ಜಲಾಶಯದಲ್ಲಿ ಕೇವಲ 20.96 ಟಿಎಂಸಿ ನೀರು ಮಾತ್ರ ಉಳಿದಿದೆ. ಇದರಲ್ಲಿ ಡೆಡ್ ಸ್ಟೋರೇಜ್ ಕಳೆದು, ಕೇವಲ 14 ಟಿಎಂಸಿ ನೀರು ಬಳಕೆಗೆ ಲಭ್ಯವಿದೆ.

ತಮಿಳುನಾಡಿಗೆ ಅಕ್ಟೋಬರ್ 15ರವರೆಗೆ ನೀರು ಬಿಡುವಂತೆ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಇಂದು ಮತ್ತೆ ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ. ಇದರಿಂದ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ತಮಿಳುನಾಡಿಗೆ ನೀರು ಬಿಡಲಾಗುತ್ತಿದೆ.

ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 97.56 ಅಡಿಗಳಾಗಿವೆ. ಜಲಾಶಯಕ್ಕೆ 4,835 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 2,348 ಕ್ಯುಸೆಕ್ ಹೊರಗೆ ಬಿಡಲಾಗುತ್ತಿದೆ.

ಜಲಾಶಯದ ಒಟ್ಟು ನೀರಿನ ಸಂಗ್ರಹ ಸಾಮರ್ಥ್ಯ 49.45 ಟಿಎಂಸಿ ಗಳಾಗಿದ್ದು, ಇಂದು ಜಲಾಶಯದಲ್ಲಿ ಕೇವಲ 20.96 ಟಿಎಂಸಿ ನೀರು ಉಳಿದಿದೆ. ಇದರಲ್ಲಿ 6.50 ಟಿಎಂಸಿ ಡೆಡ್ ಸ್ಟೋರೇಜ್ ಕಳೆದರೆ 14.46 ಟಿಎಂಸಿ ನೀರು ಮಾತ್ರ ಬಳಕೆಗೆ ಲಭ್ಯವಿದೆ. ಈ ಮಧ್ಯೆ ಅಕ್ಟೋಬರ್ 15 ರವರೆಗೆ ಪ್ರತಿ ದಿನ 3,000 ಕ್ಯುಸೆಕ್ ನೀರು ಹರಿಸಿದರೆ 16 ದಿನಗಳವರೆಗೆ 48 ಸಾವಿರ ಕ್ಯುಸೆಕ್ ನೀರು ಹರಿಯಲಿದೆ. ಇದರಿಂದ 4.80 ಟಿಎಂಸಿ ನೀರು ತಮಿಳುನಾಡಿಗೆ ಹರಿದು ಹೋಗಲಿದ್ದು, ಅಂದು ಡೆಡ್ ಸ್ಟೋರೇಜ್ ಕಳೆದು ಉಳಿಯುವ ನೀರು 9.66 ಟಿಎಂಸಿ ನೀರು ಮಾತ್ರ.

ಮೈಸೂರಿನ ಕಬಿನಿ ಜಲಾಶಯದ ಪರಿಸ್ಥಿತಿ ಕೂಡ ಇದೇ ರೀತಿ ಆಗುತ್ತದೆ. ಕಬಿನಿ ಜಲಾಶಯದ ಗರಿಷ್ಠ ಮಟ್ಟ 2.284 ಅಡಿಗಳಾಗಿದ್ದು, ಇಂದಿನ ಮಟ್ಟ 2,273 ಅಡಿಗಳಾಗಿದೆ. ಕಬಿನಿ ಜಲಾಶಯಕ್ಕೆ 860 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, 1,500 ಕ್ಯುಸೆಕ್ ಹೊರಗೆ ಬಿಡಲಾಗುತ್ತಿದೆ.

ಜಲಾಶಯದ ಒಟ್ಟು ಸಂಗ್ರಹ ಸಾಮರ್ಥ್ಯ 19.52 ಟಿಎಂಸಿಗಳಾಗಿದ್ದು, ಇಂದು 13.37 ಟಿಎಂಸಿ ನೀರು ಇದೆ. ಇದರಲ್ಲಿ 4.50 ಡೆಡ್ ಸ್ಟೋರೇಜ್ ಕಳೆದರೆ ಉಳಿಯುವುದು 8.37 ಟಿಎಂಸಿ ನೀರು ಮಾತ್ರ.

ಅಕ್ಟೋಬರ್ 15ರ ತನಕ 1,500 ಕ್ಯುಸೆಕ್‌ನಂತೆ 16 ದಿನಗಳ ತನಕ 24 ಸಾವಿರ ಕ್ಯುಸೆಕ್ ನೀರು ಹರಿಸಿದರೆ 2.40 ಟಿಎಂಸಿ ನೀರು ಖಾಲಿಯಾಗುತ್ತದೆ. ಆಗ ಡೆಡ್ ಸ್ಟೋರೇಜ್ ಕಳೆದರೆ ಕಬಿನಿ ಜಲಾಶಯದಲ್ಲಿ 5.97 ಟಿಎಂಸಿ ನೀರು ಉಳಿಯುತ್ತದೆ. ಅಂದರೆ ಅಕ್ಟೋಬರ್ 15ರ ವೇಳೆಗೆ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಲ್ಲಿ ಒಟ್ಟು 15.63 ಟಿಎಂಸಿ ನೀರು ಲಭ್ಯವಿರುತ್ತದೆ. ಮುಂದಿನ ಮಳೆಗಾಲದ ಮೇ ತಿಂಗಳ ತನಕ ಮೈಸೂರು, ಬೆಂಗಳೂರು ಸೇರಿದಂತೆ ಇತರೆ ನಗರಗಳಿಗೆ ಕುಡಿಯುವ ನೀರಿಗೆ ಇಷ್ಟು ನೀರು ಸಾಕಾಗುವುದೇ ಎಂಬ ಪ್ರಶ್ನೆ ಎದುರಾಗಿದೆ.

ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳಿಗೆ ಈ ವಾಸ್ತವ ಸ್ಥಿತಿ ಅರಿವಿಲ್ಲವೇ? ಎಂಬ ಪ್ರಶ್ನೆ ಕಾಡಿದೆ.

ಒಟ್ಟಾರೆ ಮೈಸೂರು, ಬೆಂಗಳೂರು ಸೇರಿದಂತೆ ಇತರೆ ನಗರಗಳಿಗೆ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗುವುದಂತೂ ಖಚಿತ. ಇದರಿಂದ ಮೂರು ದಿನಗಳಿಗೊಮ್ಮೆ ಕುಡಿಯುವ ನೀರು ಬಿಡುವ ಪರಿಸ್ಥಿತಿ ಉದ್ಭವಿಸುವ ಸಾಧ್ಯತೆ ಇದೆ.




ಕರ್ನಾಟಕ ಬಂದ್ ವೇಳೆ ಬೆಂಗಳೂರಿನಲ್ಲಿ ಸ್ಯಾಂಡಲ್‌ವುಡ್‌ನ ನಟ-ನಟಿಯರು ಶಿವರಾಜ್‌ಕುಮಾರ್ ನೇತೃತ್ವದಲ್ಲಿ ಬೀದಿಗಿಳಿದು ರಾಜ್ಯದ ಪರ ಪ್ರತಿಭಟಿಸಿದರು.



ತಿ.ನರಸೀಪುರ ಪಟ್ಟಣದಲ್ಲಿ ರೈತರು ಪ್ರತ್ಯೇಕವಾಗಿ ಬೈಕ್ ರ್‍ಯಾಲಿ ನಡೆಸಿದರು.



ರೈತರ ಮುತ್ತಿಗೆ ಹಿನ್ನೆಲೆಯಲ್ಲಿ ಕಬಿನಿ ಜಲಾಶಯಕ್ಕೆ ಪೊಲೀಸರ ಸರ್ಪಗಾವಲು.



ಬಂದ್ ಹಿನ್ನೆಲೆಯಲಿ ಬಿಕೋ ಎನ್ನುತ್ತಿರುವ ಹುಣಸೂರು ಪಟ್ಟಣದ ವಾಣಿಜ್ಯ ಕೇಂದ್ರ

ಮೈಸೂರು ಜಿಲ್ಲೆಯಾದ್ಯಂತ ಬಂದ್ ಯಶಸ್ವಿ

ತಮಿಳುನಾಡಿಗೆ ಕಾವೇರಿ ನೀರು ಬಿಡುತ್ತಿರುವುದನ್ನು ವಿರೋಧಿಸಿ ಶುಕ್ರವಾರ ಕರೆ ನೀಡಲಾಗಿದ್ದ ಕರ್ನಾಟಕ ಬಂದ್‌ಗೆ ತಿ.ನರಸೀಪುರ, ಪಿರಿಯಾಪಟ್ಟಣ ಹೊರತು ಪಡಿಸಿ ಮೈಸೂರು ಜಿಲ್ಲೆಯಲ್ಲಿ ಅಭೂತಪೂರ್ವ ಬೆಂಬಲ ವ್ಯಕ್ತವಾಗಿ ಬಂದ್ ಸಂಪೂರ್ಣ ಯಶಸ್ವಿಯಾಯಿತು. ಬೆಂಗಳೂರು ಬಂದ್ ಬೆಂಬಲಿಸಿ ತಿ.ನರಸೀಪುರದಲ್ಲಿ ಬಂದ್ ಆಚರಿದ್ದರಿಂದ ಇಂದಿನ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾದರೆ, ಪಿರಿಯಾಪಟ್ಟಣದಲ್ಲಿ ಬಲವಂತವಾಗಿ ಬಂದ್ ಮಾಡಿಸಿದ ಕೆಲವೇ ನಿಮಿಷಗಳಲ್ಲಿ ಮತ್ತೆ ವ್ಯಾಪಾರ ವಹಿವಾಟು ನಡೆದು ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.

ತಿ.ನರಸೀಪುರ, ಪಿರಿಯಾಪಟ್ಟಣದಲ್ಲಿ ಮಿಶ್ರ ಪ್ರತಿಕ್ರಿಯೆ

ಹುಣಸೂರಲ್ಲಿ ರೈತ ಸಂಘಟನೆಗಳ ಪ್ರತಿಭಟನೆ: ಬಂದ್‌ಗೆ ಬೆಂಬಲ



ಹುಣಸೂರು, ಸೆ.29– ತಮಿಳುನಾಡಿಗೆ ನೀರು ಬಿಡುತ್ತಿರುವುದನ್ನು ಖಂಡಿಸಿ ಕರೆ ನೀಡಲಾಗಿದ್ದ ಕರ್ನಾಟಕ ಬಂದ್‌ಗೆ ತಾಲೂಕಿನಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿ ಬಂದ್ ಯಶಸ್ವಿಯಾಯಿತು.

ರೈತ ಸಂಘ (ಪುಟ್ಟಣಯ್ಯ ಬಣ), ರೈತ ಸಂಘ (ಚುಕ್ಕಿ ನಂಜುಂಡಸ್ವಾಮಿ ಬಣ) ಹಾಗೂ ದಲಿತಪರ ಸಂಘಟನೆಗಳು ನಗರದಲ್ಲಿ ಪ್ರತಿಭಟನೆ ನಡೆಸಿದವು. ಪಟ್ಟಣದಲ್ಲಿ ಅಂಗಡಿ–ಮುಂಗಟ್ಟುಗಳು ಮುಚ್ಚಿದ್ದವು. ಕೆಎಸ್‌ಆರ್‌ಟಿಸಿ ಸೇರಿದಂತೆ ಖಾಸಗಿ ಬಸ್‌ಗಳು, ವಾಹನಗಳು ಸಂಚಾರ ಸ್ಥಗಿತಗೊಂಡಿತ್ತು.

ಪ್ರತಿಭಟನಾಕಾರರು ನಗರದ ಸಂವಿಧಾನ ಸರ್ಕಲ್‌ನಲ್ಲಿ ಸಮಾವೇಶಗೊಂಡು ತಮಿಳುನಾಡಿಗೆ ಹರಿಯುತ್ತಿರುವ ನೀರಿನಿಂದ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ವಿರೋಧಿಸಿ ದಿಕ್ಕಾರ ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾಕಾರರು ನಗರದ ಸಂವಿದಾನ ಸರ್ಕಲ್‌ನಿಂದ ಮೆರವಣಿಗೆ ಹೊರಟು ಕಲ್ಪತರು ಸರ್ಕಲ್, ಗೋಕುಲ ರಸ್ತೆ, ಬೈಪಾಸ್ ರಸ್ತೆ ಮೂಲಕ ತಾಲೂಕು ಕಛೇರಿಗೆ ತೆರಳಿ ಮನವಿ ಸಲ್ಲಿಸಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ರೈತ ಸಂಘದ ಹೊಸೂರು ಕುಮಾರ್, ಪುರಸಭೆ ಮಾಜಿ ಸದಸ್ಯ ವರದರಾಜು ಮಾತನಾಡಿದರು. ಪ್ರತಿಭಟನೆಯಲ್ಲಿ ಆದಿಜಾಂಬವ ಸಂಘದ ತಾಲೂಕು ಅಧ್ಯಕ್ಷ ಬಿ.ಶಿವಣ್ಣ, ದಲಿತ ಮುಖಂಡ ರಾಮ ಕೃಷ್ಣ, ಚಿಕ್ಕಣ್ಣ, ರೈತ ಸಂಘದ ಕಾರ್ಯದರ್ಶಿ ಅಗ್ರಹಾರ ರಾಮೇಗೌಡ, ಚಿಕ್ಕ ಹುಣಸೂರು ರಾಜು, ಜೆ.ಮಹದೇವು, ಸುರೇಶ್, ದಲಿತ ಮುಖಂಡ ದೇವರಾಜು ಮಲ್ಲಾಡಿ, ಧನಂಜಯ ಕಿರಿಜಾಜಿ, ವಕೀಲ ಪ್ರವಿಣ್, ಮೊದೂರು ಮಹೇಶ್, ರಾಜೇಶ್, ಶಿವು, ದಲಿತ ಮುಖಂಡ ಕೊಳ್ಳಗಟ್ಟ ಕೃಷ್ಣ, ನಂಜುಂಡಸ್ವಾಮಿ ಬಣದ ಅಧ್ಯಕ್ಷ ಸೇರಿದಂತೆ ನೂರಾರು ಕಾರ್ಯಕರ್ತರು ಬಾಗವಹಿಸಿದ್ದರು.

ಕಬಿನಿ ಜಲಾಶಯಕ್ಕೆ ಮುತ್ತಿಗೆ ಹಾಕಲೆತ್ನಿಸಿದ ರೈತರ ಬಂಧನ, ಬಿಡುಗಡೆ

ಹೆಚ್.ಡಿ.ಕೋಟೆ, ಸೆ29– ಕಬಿನಿ ಜಲಾಶಯದಿಂದ, ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಕಬಿನಿ ಜಲಾಶಯಕ್ಕೆ ರೈತರು ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ರೈತರನ್ನು ಕಬಿನಿ ಜಲಾಶಯದ ಮುಖ್ಯ ದ್ವಾರದ ಬಳಿ ಬಂಧಿಸಿ ಬಿಡುಗಡೆ ಮಾಡಲಾಯಿತು.

ರಾಜ್ಯ ಕಬ್ಬು ಬೆಳೆಗಾರರ ಸಂಘ ಮತ್ತು ಇನ್ನಿತರ ರೈತ ಪರ ಸಂಘಟನೆಗಳು ಮೈಸೂರಿನಿಂದ ಬೈಕ್ ರ್‍ಯಾಲಿ ಮೂಲಕ ಹ್ಯಾಂಡ್ ಪೋಸ್ಟ್ ಮಾರ್ಗವಾಗಿ ಬೀಚನಹಳ್ಳಿಯ ಪ್ರವಾಸಿ ಮಂದಿರದ ಬಳಿ ಬರುತ್ತಿದ್ದಂತೆ ಪೊಲೀಸರು ಪ್ರತಿಭಟನಾಕಾರರ ಬೈಕ್‌ಗಳನ್ನು ತಡೆದರು. ನಂತರ ರೈತರು ನಡೆದುಕೊಂಡು ಹೋಗಿ ಕಬಿನಿ ಜಲಾಶಯದ ಮುಖ್ಯ ದ್ವಾರದ ಬಳಿ ಜಮಾಯಿಸಿದರು.

ಈ ವೇಳೆ ಹುತಾತ್ಮ ರೈತ ಗುರುಸ್ವಾಮಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಕಬಿನಿ ಜಲಾಶಯಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು. ಆಗ ತಾಲೂಕು ದಂಡಾಧಿಕಾರಿ ಎಲ್.ಸಣ್ಣ ರಾಮಪ್ಪ ಮತ್ತು ಕಬಿನಿ ಜಲಾಶಯದ ಕಾರ್ಯಪಾಲಕ ಅಭಿಯಂತರ ಚಂದ್ರಶೇಖರ್, ಅವರು ರೈತರನ್ನು ಮನವೊಲಿಸಲು ಯತ್ನಿಸಿದರು, ಪಟ್ಟು ಬಿಡದ ರೈತರು ಜಲಾಶಯಕ್ಕೆ ನುಗ್ಗಲು ಯತ್ನಿಸಿದರು.

ಜಲಾಶಯದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದ್ದ ಕಾರಣ ಪೊಲೀಸ್ ಸಿಬ್ಬಂದಿಗಳು ಪ್ರತಿಭಟನಾಕಾರರಿಗೆ ಜಲಾಶಯಕ್ಕೆ ನುಗ್ಗಲು ಬಿಡದೆ ಬಂಧಿಸಿದರು. ಪೊಲೀಸ್ ವಾಹನ ಮೂಲಕ ಕರೆದುಕೊಂಡು ಹೋಗಿ ನಂತರ ಬಿಡಗಡೆ ಗೊಳಿಸಿದರು.

ಅಪಾರ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಂದಿನಿ, ಡಿವೈಎಸ್‌ಪಿ ಮಹೇಶ್, ವೃತ್ತ ನಿರೀಕ್ಷಕ ಎಂ.ಲಕ್ಷ್ಮೀಕಾಂತ, ಶಬ್ಬೀರ್ ಹುಸೇನ್, ಪಿರಿಯಾಪಟ್ಟಣ ಇನ್ಸ್‌ಪೆಕ್ಟರ್ ಶ್ರೀಧರ್, ಹುಣಸೂರು ಇನ್ಸ್‌ಪೆಕ್ಟರ್ ರವಿ ಸೇರಿದಂತೆ 150 ಕ್ಕೂ ಪೊಲೀಸ್ ಮತ್ತು ಕ್ಷಿಪ್ರ ಕಾರ್ಯಪಡೆಯ ಸಿಬ್ಬಂದಿಗಳು ಜಲಾಶಯದ ಬಂದೋಬಸ್ತ್‌ಗೆ ನಿಯೋಜನೆಗೊಂಡಿದ್ದರು.

ಹುಲ್ಲಹಳ್ಳಿಯಲ್ಲಿ ಅಂಗಡಿ–ಮುಂಗಟ್ಟುಗಳು ಬಂದ್

ಹುಲ್ಲಹಳ್ಳಿ: ಕರ್ನಾಟಕ ಬಂದ್ ಬೆಂಬಲಿಸಿ ಹುಲ್ಲಹಳ್ಳಿ ಸಂಪೂರ್ಣ ಬಂದ್ ಆಗಿತ್ತು. ಬಸ್ ನಿಲ್ದಾಣ, ಡಾ.ರಾಜಕುಮಾರ ರಸ್ತೆ, ಡಾ.ಅಂಬೇಡ್ಕರ್ ಜೋಡಿ ರಸ್ತೆ, ಸಂಗಮ್ ರಸ್ತೆ ಹಾಗೂ ಮೈಸೂರು ರಸ್ತೆಗಳ ಅಂಗಡಿಗಳು, ಬೇಕರಿಗಳು, ಸಿನಿಮಾ ಮಂದಿರಗಳು, ಫುಟ್‌ಬಾತ್ ವ್ಯಾಪಾರಗಳು ಬಂದ್ ಆಗಿದ್ದವು.



ಆಟೋಗಳು, ಮ್ಯಾಕ್ಸಿಕ್ಯಾಬ್‌ಗಳು, ಸರಕಾರಿ ಬಸ್‌ಗಳು, ಸಂಚಾರ ಸ್ಥಗಿತಗೊಂಡಿದ್ದವು. ಸರಕಾರಿ ಕಚೇರಿಗಳಾದ ನಾಡಕಚೆರಿ, ಬ್ಯಾಂಕ್, ಅಂಚೆ ಕಚೇರಿ, ಗ್ರಾಮ ಪಂಚಾಯತಿ ಕಚೇರಿಗಳು ಜನರಿಲ್ಲದೆ ಕಾರ್ಯನಿರ್ವಸಿದವು. ಮುಖಂಡರಾದ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೋಹನಶಂಕರ್, ಗ್ರಾಪಂ ಸದಸ್ಯರಾದ ಶಿವಣ್ಣ, ಮಲ್ಲಿಕಾರ್ಜುನ, ಪಿಎಸಿಸಿ ನಿರ್ದೇಶಕರಾದ ವಾರದ ರಾಜ್ ತುಕರಾಮ್ ಹಾಗೂ ಅಣ್ಣಯ್ಯಶೆಟ್ಟಿ, ಶಿವಲಿಂಗ ನಾಯಕ, ಶಿವಕುಮಾರ್, ಅಶೋಕ್ ಹಾಜರಿದ್ದರು.

ನರಸೀಪುರದಲ್ಲಿ ಪ್ರತಿಭಟನೆಗಳು, ಬಂದ್‌ಗೆ ವ್ಯಾಪಾರಸ್ಥರ ನಿರಾಸಕ್ತಿ



ತಿ.ನರಸೀಪುರ: ಕರ್ನಾಟಕ ಬಂದ್‌ಗೆ ತಿ.ನರಸೀಪುರದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.

ಶಾಲಾ–ಕಾಲೇಜಿಗೆ ರಜೆ ಘೋಷಿಸಲಾಗಿತ್ತು. ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್‌ಗಳ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದರಿಂದ ಪ್ರಯಾಣಿಕರು ಪರದಾಡಬೇಕಾಯಿತು. ಪ್ರತಿಭಟನೆಗಳು ಪ್ರತ್ಯೇಕವಾಗಿ ನಡೆದವಾದರೂ ವ್ಯಾಪಾರಸ್ಥರು ಬಂದ್‌ಗೆ ನಿರಾಸಕ್ತಿ ತೋರಿ ಅಂಗಡಿ ಮುಂಗಟ್ಟುಗಳನ್ನು ತೆರೆದು ವ್ಯಾಪಾರದಲ್ಲಿ ತೊಡಗಿದ್ದ ದೃಶ್ಯ ಕಂಡು ಬಂತು.

ಪ್ರತಿಭಟನಾನಿರತರು ತೆರೆದಿದ್ದ ಅಂಗಡಿಗಳನ್ನು ಮುಚ್ಚಿಸಿದರು. ಲಿಂಕ್ ರಸ್ತೆ ಹಾಗೂ ಮಾರುಕಟ್ಟೆ ರಸ್ತೆಯಲ್ಲಿ ವರ್ತಕರು ಬಂದ್‌ಗೆ ಬೆಂಬಲ ಸೂಚಿಸಿದರೆ, ಉಳಿದೆಡೆ ಮಾಮೂಲಿಯಂತೆ ವ್ಯಾಪಾರ ವಹಿವಾಟು ನಡೆದವು. ಆಟೋಗಳು ಎಂದಿನಂತೆ ಸಂಚರಿಸಿದವು. ಬ್ಯಾಂಕು ಹಾಗೂ ಸರ್ಕಾರಿ ಕಚೇರಿಗಳು ಎಂದಿನಂತೆ ಕಾರ್ಯ ನಿರ್ವಹಿಸಿದವು. ಹೋಟೆಲ್, ಪೆಟ್ರೋಲ್ ಬಂಕ್‌ಗಳು ತೆರೆದಿದ್ದವು. ಚಿತ್ರಮಂದಿರಗಳ ಮಾಲೀಕರು ಪ್ರದರ್ಶನ ರದ್ದುಗೊಳಿಸಿ ಬಂದ್‌ಗೆ ಬೆಂಬಲ ಸೂಚಿಸಿದ್ದರು.

ರಾಜ್ಯ ಬಂದ್ ಹಿನ್ನೆಲೆಯಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಸದಸ್ಯರು ಪಟ್ಟಣದಲ್ಲಿ ಬೈಕ್ ರ್‍ಯಾಲಿ ನಡೆಸಿದರೆ, ಕರ್ನಾಟಕ ರಾಜ್ಯ ರೈತ ಸಂಘವು ಮೆರವಣಿಗೆ ನಡೆಸಿ ತಹಶೀಲ್ದಾರ್‌ರಿಗೆ ಮನವಿ ಸಲ್ಲಿಸಿತು.

ಪಟ್ಟಣದ ಶ್ರೀ ಗುಂಜಾನರಸಿಂಹ ಸ್ವಾಮಿ ದೇವಸ್ಥಾನದ ಬಳಿ ತಮ್ಮ ಬೈಕ್‌ಗಳೊಂದಿಗೆ ಜಮಾವಣೆಗೊಂಡ ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಸದಸ್ಯರು ತಮಿಳುನಾಡಿಗೆ ನೀರು ಬಿಡುತ್ತಿರುವ ರಾಜ್ಯ ಸರ್ಕಾರದ ನಿಲುವನ್ನು ಖಂಡಿಸಿ ರಾಜ್ಯ ಸರ್ಕಾರ ಹಾಗೂ ರಾಜ್ಯದ ಸಂಸದರ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.


ಈ ವೇಳೆ ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್, ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್ ಮಾತನಾಡಿದರು.

ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೈಕ್ ರ್‍ಯಾಲಿ ನಡೆಸಿದ ರೈತರು ಕಬಿನಿ ಜಲಾಶಯಕ್ಕೆ ಮುತ್ತಿಗೆ ಹಾಕಲು ಮೈಸೂರು ರಸ್ತೆ ಮಾರ್ಗವಾಗಿ ಕಬಿನಿ ಜಲಾಶಯದತ್ತ ತೆರಳಿದರು.

ಮತ್ತೊಂದೆಡೆ ಕರ್ನಾಟಕ ರಾಜ್ಯ ರೈತ ಸಂಘದ ಟಿ.ನರಸೀಪುರ ಶಾಖೆಯ ರೈತ ಮುಖಂಡರು ಪಟ್ಟಣದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ರಾಜ್ಯ ಸರ್ಕಾರದ ನಿಲುವನ್ನು ಖಂಡಿಸಿದರು. ಸಂಘದ ಅಧ್ಯಕ್ಷ ಕರೋಹಟ್ಟಿ ಕುಮಾರಸ್ವಾಮಿ ಮಾತನಾಡಿ, ಕಾವೇರಿ ನೀರಿನ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಪ್ರಧಾನ ಮಂತ್ರಿಗಳು ಮಧ್ಯ ಪ್ರವೇಶ ಮಾಡುವಂತೆ ಆಗ್ರಹಿಸಿದರು.

ಬೈಕ್ ರ್‍ಯಾಲಿಯಲ್ಲಿ ಕಿರಗಸೂರು ಪ್ರಸಾದ್ ನಾಯಕ್, ಸಿಸ್ಟರ್ ಬ್ಯಾಂಗಲ್ಸ್ ಅಪ್ಪಣ್ಣ ಸೇರಿದಂತೆ ರೈತ ಮುಖಂಡರು ಭಾಗವಹಿಸಿದ್ದರೆ, ಕರ್ನಾಟಕ ರಾಜ್ಯ ರೈತ ಸಂಘದಿಂದ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಸಂಘದ ಟೌನ್ ಅಧ್ಯಕ್ಷ ಈ.ರಾಜು, ಜಿಲ್ಲಾ ಉಪಾಧ್ಯಕ್ಷ ಎಸ್.ಶಾಂತಮೂರ್ತಿ, ಮಹದೇವನಾಯ್ಕ, ನಂಜುಂಡಸ್ವಾಮಿ, ಚನ್ನಬಸಪ್ಪ, ತಾಂಡವಮೂರ್ತಿ, ಶಿವ ಶಂಕರಮೂರ್ತಿ, ಮಂಟಯ್ಯ, ಕೆ.ಎಂ.ಸಿದ್ದರಾಜು, ಶಶಾಂಕ್, ಪುಟ್ಟ ಮಾದಯ್ಯ, ನಾರಾಯಣ, ಬೂದಹಳ್ಳಿ ಶಂಕರ ಸೇರಿದಂತೆ ಮತ್ತಿತರ ಮುಖಂಡರು ಭಾಗವಹಿಸಿದ್ದರು.

ಕೆ.ಆರ್.ನಗರ ತಾಲೂಕಲ್ಲೂ ಬಂದ್ ಯಶಸ್ವಿ



ಕೆ.ಆರ್.ನಗರ: ರಾಜ್ಯದಲ್ಲಿ ಕಾವೇರಿ ನೀರಿಗಾಗಿ ನಡೆಯುತ್ತಿರುವ ಪ್ರತಿಭಟನೆಗೆ ಕೆ.ಆರ್.ನಗರ ಪಟ್ಟಣ ಸೇರಿದಂತೆ ಗ್ರಾಮಾಂತರ ಭಾಗದಲ್ಲೂ ಬಂದ್ ಯಶಸ್ವಿಯಾಗಿದೆ.

ಪಟ್ಟಣದ ಡಾ. ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಮುಂಭಾಗ ಬೆಳಿಗ್ಗೆ 8 ಗಂಟೆಗೆ ಸಭೆ ಸೇರಿದ ತಾಲೂಕು ರೈತ ಸಂಘಟನೆಗಳು ಸಾಹಿತ್ಯ ಪರಿಷತ್ ಜಯ ಕರ್ನಾಟಕ ಸಂಘಟನೆ ಜನಪದ ಪರಿಸತ್ ಸೇರಿದಂತೆ ತಾಲೂಕಿನ ಎಲ್ಲಾ ವಿವಿಧ ಸಂಘ ಸಂಸ್ಥೆಗಳ ಮುಖ್ಯಸ್ಥರು ಪದಾಧಿಕಾರಿಗಳು ಡಾಕ್ಟರ್ ಬಿ.ಆರ್.ಅಂಬೇಡ್ಕರ್ ಪ್ರತಿಭೆಗೆ ಮಾಲಾರ್ಪಣೆ ಮಾಡಿ ವಿವಿಧ ರಸ್ತೆ ಮತ್ತು ಪಟ್ಟಣದ ಸುತ್ತ ಮೆರವಣಿಗೆ ಮಾಡುತ್ತಾ ಘೋಷಣೆಗಳೊಂದಿಗೆ ಕಾವೇರಿ ನಮ್ಮದು ಕನ್ನಡ ನೆಲ, ಜಲ, ಭಾಷೆ ಸೇರಿದಂತೆ ಯಾವುದನ್ನು ಸಹ ಬಿಡುವುದಿಲ್ಲ ಸರ್ಕಾರಗಳಿಗೆ ಧಿಕ್ಕಾರ ರಾಜಕಾರಣಿಗಳಿಗೆ ಧಿಕ್ಕಾರ ಎಂಬ ಘೋಷಣೆಗಳೊಂದಿಗೆ ಮೆರವಣಿಗೆಯಲ್ಲಿ ತೆರಳಿ ತಹಸಿಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಬೆಳಿಗ್ಗೆಯಿಂದಲೇ ಸಾರಿಗೆ ಸಂಸ್ಥೆಯ ಬಸ್ಸುಗಳು ಬಸ್ ನಿಲ್ದಾಣ ಸೇರಿದಂತೆ ಯಾವ ಕಡೆಯಲ್ಲೂ ಸಂಚರಿಸದೆ ಕರ್ನಾಟಕ ಬಂದಿಗೆ ಬೆಂಬಲ ಸೂಚಿಸುವ ಮೂಲಕ ಕಾವೇರಿ ನಮ್ಮದು ಕಾವೇರಿ ನೀರನ್ನು ತಮಿಳುನಾಡಿಗೆ ಬಿಡಲು ನಮ್ಮ ವಿರೋಧವಿದೆ ಎಂದು ಖಾಸಗಿ ವಾಹನಗಳಾದ ಟೆಂಪೋ ಟ್ರಾವೆಲ್ಸ್ ಸೇರಿದಂತೆ ಆಟೋಗಳು, ಕಾರುಗಳು, ಬಾಡಿಗೆ ವಾಹನಗಳ ಮಾಲೀಕರು ಮುಷ್ಕರಕ್ಕೆ ಬೆಂಬಲ ಸೂಚಿಸುವ ಮೂಲಕ ರಸ್ತೆಗೆ ಇಳಿಯಲಿಲ್ಲ. ವರ್ತಕರು ಬೆಂಬಲ ವಕ್ತ ಪಡಿಸಿದ್ದರಿಂದ ಅಂಗಡಿ ಮುಂಗಟ್ಟುಗಳು ಬಂದಾಗಿದ್ದವು.

ಜಿಲ್ಲಾಧಿಕಾರಿಗಳ ಆದೇಶದಂತೆ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು ಈ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಬಿಕೋ ಎನ್ನುತ್ತಿದ್ದವು. ಕೆಲವು ಖಾಸಗಿ ಸಂಸ್ಥೆಗಳು ಮತ್ತು ಸರ್ಕಾರಿ ಸಂಸ್ಥೆಗಳು ಪ್ರತಿಭಟನಾಕಾರರ ಒತ್ತಡಕ್ಕೆ ಮಣಿದು ಬಂದಾಗಿದ್ದವು.

ಕಾವೇರಿ ನಮ್ಮದು: ರಕ್ತ ಕೊಟ್ಟೇವು, ನೀರು ಬಿಡೆವು

ಬನ್ನೂರು, ಸೆ.29– ಕಾವೇರಿ ನಮ್ಮದು, ರಕ್ತ ಕೊಟ್ಟೇವು ನೀರು ಮಾತ್ರ ಬಿಡೆವು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ಸದಸ್ಯರು ಕಾವೇರಿ ನೀರಿಗಾಗಿ ಕಾವೇರಿ ವೃತ್ತದ ರಸ್ತೆಯಲ್ಲಿ ಕುಳಿತು ಪ್ರತಿಭಟನೆ ನಡೆಸಿದರು.

ಪಟ್ಟಣದ ಎಂ.ಎಂ.ರಸ್ತೆ ಮತ್ತು ಎಸ್‌ಆರ್‌ಪಿ ರಸ್ತೆಗೆ ಹೊಂದಿಕೊಂಡಂತೆ ಇರುವಂತ ಕಾವೇರಿ ವೃತ್ತದಲ್ಲಿ ಜಮಾಯಿಸಿದ ರೈತರು ಸರ್ಕಾರದ ವಿರುದ್ದ ಘೋಷಣೆ ಕೂಗುತ್ತಾ, ಕಾವೇರಿ ಪ್ರಾಧಿಕಾರದ ಕುರುಡುತನಕ್ಕೆ ಶಾಪ ಹಾಕಿದರು. ನಮ್ಮ ರೈತರು ಬೆಳೆದ ಬೆಳೆಗೆ ನೀರಿಲ್ಲದೇ ಬೆಳೆಗಳು ಒಣಗುತ್ತಿದ್ದರು, ನೆರೆಯ ತಮಿಳುನಾಡು ರಾಜ್ಯ ನೀರು ಹರಿಸುವುದು ಎಷ್ಟರ ಮಟ್ಟಿಗೆ ಸರಿ ಎಂದು ಗುಡುಗಿದ ರೈತರು ಸಕಾಲದಲ್ಲಿ ಮಳೆ ಆಗದೆ ನೀರಿಲ್ಲದೆ ಬೆಳೆಗಳು ಸಂಪೂರ್ಣವಾಗಿ ನೆಲ ಕಚ್ಚಿದ್ದರು ಸರ್ಕಾರ ಈ ಕಡೆ ಗಮನ ಹರಿಸದೆ, ನೆರೆಯ ಸರ್ಕಾರದ ಬೆಂಬಲಕ್ಕೆ ನಿಂತಂತೆ ಕಾಣುತ್ತಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ಅಧ್ಯಕ್ಷ ಹುಚ್ಚೇಗೌಡ, ಶಿವಕುಮಾರ್, ಮಹೇಶ್, ಆನಂದ್, ಪ್ರಭಾ, ಜಯರಾಮ, ಮಹೇಂದ್ರ, ರಾಮಚಂದ್ರು, ಕಿರಣ್, ಕೃಷ್ಣ, ಮಹೇಶ್, ಶಿವರಾಮು, ನಾಗರಾಜು, ರವಿ, ಚಾಮೇಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪಿರಿಯಾಪಟ್ಟಣದಲ್ಲಿ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ



ಪಿರಿಯಾಪಟ್ಟಣ, ಸೆ.29– ಕಾವೇರಿ ಹೋರಾಟದ ಹಿನ್ನೆಲೆಯಲ್ಲಿ ಕನ್ನಡಪರ ಸಂಘಟನೆಗಳು ಹಾಗೂ ರೈತ ಸಂಘ ಸೇರಿದಂತೆ ವಿವಿಧ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಪಿರಿಯಾಪಟ್ಟಣದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಬೆಳಗ್ಗೆ ಎಂದಿನಂತೆ ವರ್ತಕರು ತಮ್ಮ ಅಂಗಡಿ–ಮುಂಗಟ್ಟುಗಳನ್ನು ತೆರೆದು ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದರು. ನಂತರ ರೈತ ಸಂಘದ ಪ್ರತಿಭಟನಾಕಾರರು ಅಂಗಡಿಯನ್ನು ಬಂದ್ ಮಾಡಿ ಕಾವೇರಿ ಹೋರಾಟಕ್ಕೆ ಸಹಕರಿಸಬೇಕು ಎಂಬ ಮನವಿಗೆ ವರ್ತಕರು ಅಂಗಡಿಗಳನ್ನು ತೆರೆಮರೆಯಲ್ಲಿ ಮುಚ್ಚಿ ತೆರೆದು ವ್ಯಾಪಾರ ಮಾಡ ತೊಡಗಿದರೆ ಮತ್ತೆ ಕೆಲವು ವರ್ತಕರು ಸ್ವಯಂಪ್ರೇರಿತವಾಗಿ ಅಂಗಡಿ ಮುಂಗಟ್ಟನ್ನು ಮುಚ್ಚಿ ಬಂದ್‌ಗೆ ಸಹಕರಿಸಿದರು.

ಮೈಸೂರು ಹಾಗೂ ಮಡಿಕೇರಿ ಕಡೆಯಿಂದ ಬೆಳಗ್ಗೆ 10.30 ರವರೆಗೆ ಕೆಲವು ಬಸ್‌ಗಳು ಓಡಾಡಿದವು. ಪಿರಿಯಾಪಟ್ಟಣಕ್ಕೆ ಬಂದ ನಂತರ ಪ್ರಯಾಣಿಕರಿಲ್ಲದೆ ಸ್ಟ್ಯಾಂಡ್‌ನಲ್ಲೆ ಬಸ್ ನಿಲ್ಲಬೇಕಾಯಿತು. ಸ್ಥಳಕ್ಕೆ ಆಗಮಿಸಿದ ಬಸ್ ಡಿಪೋ ಮ್ಯಾನೇಜರ್ ದರ್ಶನ್ ಸೇರಿದಂತೆ ಕೆಲವು ಅಧಿಕಾರಿಗಳು ಪ್ರಯಾಣಿಕರಿಗೆ ತೊಂದರೆ ಆಗದಂತೆ ಕೆಲವು ಬಸ್‌ಗಳನ್ನು ಪ್ರಯಾಣಿಕರ ಅನುಕೂಲಕ್ಕೆ ತಕ್ಕಂತೆ ಆಯಾಯ ಸ್ಥಳಕ್ಕೆ ಹೊರಡಿಸಲು ಅನುವು ಮಾಡಿಕೊಟ್ಟರು. ಎಂದಿನಂತೆ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಕೆಲವೊಂದು ಬ್ಯಾಂಕ್‌ಗಳು ಗ್ರಾಹಕರಿಲ್ಲದೆ ಬಾಗಿಲು ಮುಚ್ಚಿ ಕರ್ತವ್ಯ ನಿರ್ವಹಿಸುತ್ತಿದ್ದು ಕಂಡು ಬಂತು. ಪ್ರತಿಭಟನೆಯಲ್ಲಿ ರೈತ ಸಂಘದ ಅಧ್ಯಕ್ಷ ಸ್ವಾಮಿಗೌಡ ಸೇರಿದಂತೆ ಪದಾಧಿಕಾರಿಗಳಾದ ದಶರತ್, ಗುರುರಾಜ್, ಗಡಿಗೌಡ, ಗಣೇಶ್, ಧನಂಜಯ ಸೇರಿದಂತೆ ಹಲವು ಮುಖಂಡರುಗಳು ಹಾಗೂ ಇತರರು ಹಾಜರಿದ್ದರು.

ನಂಜನಗೂಡು ಬಂದ್ ಸಂಪೂರ್ಣ ಯಶಸ್ವಿ

ನಂಜನಗೂಡು, ಸೆ.29– ಕಾವೇರಿ ನೀರಿಗಾಗಿ ಕನ್ನಡಪರ ಸಂಘಟನೆಗಳು ಶುಕ್ರವಾರ ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ನಂಜನಗೂಡಿನಲ್ಲಿ ವ್ಯಾಪಕ ಬೆಂಬಲ ವ್ಯಕ್ತವಾಗಿ ವರ್ತಕರು ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ಸ್ವಯಂಪ್ರೇರಿತವಾಗಿ ಮುಚ್ಚುವ ಮೂಲಕ ಬಂದ್ ಸಂಪೂರ್ಣ ಯಶಸ್ವಿಯಾಯಿತು.



ಶುಕ್ರವಾರ ಮುಂಜಾನೆಯಿಂದಲೇ ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ವರ್ತಕರು ಮುಚ್ಚಿದ್ದರು. ನಗರದ ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದ ಬಜಾರ್ ರಸ್ತೆ, ಅಂಗಡಿ ಬೀದಿ, ರಾಷ್ಟ್ರಪತಿ ರಸ್ತೆ ಎಂಜಿಎಸ್ ರಸ್ತೆಗಳು ಬಿಕೋ ಎನ್ನುತ್ತಿದ್ದವು. ಕೆಎಸ್‌ಆರ್‌ಟಿಸಿ, ಹೈಟೆಕ್ ಬಸ್ ನಿಲ್ದಾಣ ಹಾಗೂ ಹಳೇ ಬಸ್ ನಿಲ್ದಾಣ ಜನರಿಲ್ಲದೆ ಬಿಕೋ ಎನ್ನುತ್ತ ಸಂಪೂರ್ಣ ಸ್ತಬ್ಧಗೊಂಡಿತ್ತು ಮೆಡಿಕಲ್, ಹಾಲಿನ ಕೇಂದ್ರಗಳು, ಆಸ್ಪತ್ರೆಗಳು ಎಂದಿನಂತೆ ತೆರೆದಿದ್ದವು. ಆದರೆ ಕೆಲವು ಬ್ಯಾಂಕ್‌ಗಳು, ಪೆಟ್ರೋಲ್ ಬಂಕ್‌ಗಳು, ಎಪಿಎಂಸಿ ಕೂಡ ಮುಚ್ಚಿದ್ದರಿಂದ ಗ್ರಾಹಕರು ಪರದಾಡುವಂತಾಯಿತು. ಶಾಲಾ ಕಾಲೇಜಿಗೆ ರಜೆ ಘೋಷಿಸಲಾಗಿತ್ತು.

ಹುಣ್ಣಿಮೆ ದಿನವಾದ ಶುಕ್ರವಾರ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಭಕ್ತರ ಸಂಖ್ಯೆ ವಿರಳವಾಗಿತ್ತು. ಸಾರಿಗೆ ಬಸ್ ಸಂಚಾರವಿಲ್ಲದೇ ತಮ್ಮ ಸ್ವಂತ ವಾಹನಗಳಲ್ಲಿ ಭಕ್ತರು ದೇವಾಲಯಕ್ಕೆ ಆಗಮಿಸಿ ದರ್ಶನ ಪಡೆಯುತ್ತಿದ್ದ ದೃಶ್ಯ ಕಂಡುಬಂತು.

ಪ್ರತಿಭಟನಾ ರ್‍ಯಾಲಿ: ಕಾವೇರಿ ನೀರು ಹಂಚಿಕೆ ವಿಚಾರವಾಗಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸುವಂತೆ ಆಗ್ರಹಿಸಿ ವಿವಿಧ ಕನ್ನಡಪರ, ರೈತಪರ, ದಲಿತಪರ ಹಾಗೂ ವಿವಿಧ ಸಂಘ ಸಂಸ್ಥೆಗಳು ಪ್ರತ್ಯೇಕವಾಗಿ ಪ್ರತಿಭಟನಾ ಮೆರವಣಿಗೆ ರ್‍ಯಾಲಿ ನಡೆಸಿದರು.

ರೈತಸಂಘ, ದಸಂಸ ಹಾಗೂ ಬಿಎಸ್ಪಿ ಪಕ್ಷದ ಕಾರ್ಯಕರ್ತರು ಸೇರಿದಂತೆ ನಗರದ ಆರ್.ಪಿ.ರಸ್ತೆ, ಎಂಜಿಎಸ್ ರಸ್ತೆ, ಪ್ರಮುಖ ರಸ್ತೆಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ಬಳಿಕ ನಗರದ ಹುಲ್ಲಹಳ್ಳಿ ವೃತ್ತದ ಬಳಿ ಮೈಸೂರು–ನಂಜನಗೂಡು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಮಾವೇಶಗೊಂಡು ಕೇಂದ್ರ ಹಾಗೂ ರಾಜ್ಯ ಸರ್ಕಾರ ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯ ಎಸಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬೊಕ್ಕಹಳ್ಳಿ ನಂಜುಂಡಸ್ವಾಮಿ ಮಾತನಾಡಿದರು.

ಇದೇ ಸಂಧರ್ಭದಲ್ಲಿ ಪ್ರತಿಧ್ವನಿ ವೇದಿಕೆ ಅಧ್ಯಕ್ಷ ತ್ರಿನೇಶ್, ದಸಂಸ ಜಿಲ್ಲಾ ಸಂಚಾಲಕ ಕಾರ್ಯ ಬಸವಣ್ಣ, ಬಿಎಸ್ಪಿ ಜಿಲ್ಲಾ ಉಪಾಧ್ಯಕ್ಷ ಶ್ರೀಕಂಠು, ಕಾರ್ಯದರ್ಶಿ ಮುಳ್ಳೂರು ಸಿದ್ದರಾಜು, ಅಂಬೇಡ್ಕರ್ ಸೇನೆ ಅಧ್ಯಕ್ಷ ನಾಗೇಂದ್ರ, ಮುಳ್ಳೂರು ಸ್ವಾಮಿ, ಹನುಮಯ್ಯ, ಗುರುಲಿಂಗೇಗೌಡ, ವಿಶ್ವನಾಥ್, ನಾಗೇಂದ್ರ ಗೋಳೂರು ಸ್ನೇಕ್ ಬಸವರಾಜು, ರಾಕೇಶ್‌ಕುಮಾರ್, ಸಂತೋಷ್, ಮುಖೇಶ್‌ಕುಮಾರ್, ಬಾಬುಲಾಲ್‌ಕೇಸರಿ, ಮನೀಶ್, ನವೀನ್‌ಕುಮಾರ್, ಸೇರಿದಂತೆ ಹಲವರು ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಚಂದ್ರಮುಖಿ–2 (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜವಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಚಂದ್ರಮುಖಿ–2 (ತ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಸ್ಕಂದ (ತೆ)	4 ಪ್ರದರ್ಶನಗಳು
ಸಂಗಂ	
ಚಂದ್ರಮುಖಿ–2 (ತ)	4 ಪ್ರದರ್ಶನಗಳು
ಲಿಡೋ	
ಒಲವೇ ಮಂದಾರ–2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇರೈವನ್(ತ)	4 ಪ್ರದರ್ಶನಗಳು
ಪ್ರಭಾ	
ಸ್ಕಂದ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಎಕ್ಸ್‌ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಎಲ್ಲಾ ಧರ್ಮಗಳು ಒಳ್ಳೆಯದನ್ನು ಮಾಡುವ ಸಂದೇಶ ಸಾರುತ್ತವೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ

ಮೈಸೂರು, ಸೆ.29(ಎಸ್‌ಪಿಎನ್)– ಬುದ್ಧ, ಬಸವ, ಅಂಬೇಡ್ಕರ್ ಅವರು ಸಮಾಜದ ಬದಲಾವಣೆಗೆ ಶ್ರಮಿಸಿದವರು. ಹಾಗಾಗಿ ನಮ್ಮ ಜೀವನಕ್ಕಾಗಿ ಬದುಕುವ ಬದಲು, ಸಮಾಜದ ಬದಲಾವಣೆಗೆ ಬದುಕು ರೂಢಿಸಿಕೊಳ್ಳಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರು ಚಾಮರಾಜಪುರಂನಲ್ಲಿರುವ ವಿಶ್ವ ಮೈತ್ರಿ ಬುದ್ಧವಿಹಾರದ ಸಭಾಂಗಣದಲ್ಲಿ ತನುಮನ ಸಂಸ್ಥೆ ಆಯೋಜಿಸಿದ್ದ 'ಜಗ ನಡೆಯಲಿ ಬುದ್ಧನ ಕಡೆ' ಸಂಗೀತ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಬುದ್ದ, ಬಸವ, ಅಂಬೇಡ್ಕರ್ ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರು ಪಾಲಿಸಬೇಕಿದೆ. ಎಲ್ಲ ಧರ್ಮಗಳು ನೀವೂ ಒಳ್ಳೆಯವರಾಗಿ ಮತ್ತೊಬ್ಬರಿಗೂ ಒಳ್ಳೆಯದನ್ನೇ ಮಾಡಿ ಎಂಬ ಸಂದೇಶವನ್ನು ಸಾರುತ್ತವೆ. ಆದರೆ ಮನುಷ್ಯನಿಗೆ ಅಹಂಕಾರವನ್ನು ಮೈಗೂಡಿಸಿಕೊಂಡಾಗ ನಮಗೆ ನಾವೇ ಶತ್ರುಗಳಾಗಿ ಬದಲಾಗುತ್ತೇವೆ ಎಂದರು

ಬುದ್ಧ ಎಂದರೆ ಪ್ರತಿ ಕಣವೂ ಪರಿಶುದ್ಧವಾದ ಚೈತನ್ಯ ಎಂದರ್ಥ, ಇಂದಿನ ಕಾಲದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳು ಪ್ರತಿಯೊಬ್ಬರ ಕುಟುಂಬದ ಬದಲಾವಣೆಗೆ ಚಿಂತಿಸುವಂತಿವೆ. ಇಂತಹ ಮಹನೀಯರು ದೀನ ದಲಿತರಿಗೆ ಬದುಕುವ ಮಾರ್ಗ ಕಲಿಸಿದರು. ಬೆಳೆಯುವುದಕ್ಕೆ ಅಡೆ–ತಡೆಗಳನ್ನು ಮಾಡುವಂತಹ ವ್ಯಕ್ತಿಗಳು ಇನ್ನು ಇದ್ದಾರೆ. ಪ್ರತಿಯೊಬ್ಬರು ಬುದ್ಧ ಬಸವ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಾರ್ಗವನ್ನು ಪ್ರತಿಯೊಬ್ಬರು ಅನುಸರಿಸಬೇಕು ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಚಿಕ್ಕಜವರಪ್ಪ ಮಾತನಾಡಿ ಪ್ರತಿಯೊಂದು ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಬೇಕೆಂದರೆ ಶ್ರಮ ಬೇಕಿದೆ, ಗ್ರಾಮೀಣ ಭಾಗಕ್ಕೆ ಇಂತಹ ಕಾರ್ಯಕ್ರಮ ಆಗಬೇಕಿದೆ. ಬುದ್ದನ ವಿಚಾರಗಳನ್ನು ಹಾಡುವ ಮೂಲಕ ಮನೆ ಮನಗಳಮುಟ್ಟುವಂತಹ ಕೆಲಸವನ್ನು ತನುಮನ ಸಂಸ್ಥೆ ಮಾಡುತ್ತಿರುವುದು ಸಂತಸದ ವಿಚಾರ ಎಂದರು.

ಕಾರ್ಯ ಕ್ರಮದಲ್ಲಿ ರಾಜ್ಯ ಲೆಕ್ಕ ಪತ್ರ ಇಲಾಖೆ ಜಂಟಿ ನಿಯಂತ್ರಕ ಕೆ. ಮಹದೇವ ನಾಯಕ, ಪಶು ವೈದ್ಯಕೀಯ ಪರೀಕ್ಷಕ ಪಿ.ಮಹೇಶ್, ಮಾಜಿ ರೈಲ್ವೆ ಮಂಡಳಿ ಸದಸ್ಯ ಎಸ್.ವಿಜಯ್ ಕುಮಾರ್, ನಿವೃತ್ತ ಮುಖ್ಯ ಶಿಕ್ಷಕಿ ಬೃಂದಾಮಣಿ, ಲಲಿತಕಲಾ ಅಕಾಡೆಮಿ ನಿರ್ದೇಶಕ ವಿ.ಕೋಮಲಾ, ಮಾಜಿ ಮೇಯರ್ ಪುರುಷೋತ್ತಮ್ ಇದ್ದರು.

ಭಾರತದ ಅತಿದೊಡ್ಡ ವಂಚಕ ಸಂಸ್ಥೆ: ಮನೇಕಾ ಗಾಂಧಿ ವಿರುದ್ಧ 100 ಕೋಟಿ ರೂ. ಮಾನನಷ್ಟ ಮೊಕದ್ದಮೆ ಹೂಡಿದ ಇಸ್ಕಾನ್

ಕೋಲ್ಕತ್ತಾ, ಸೆ.29– ಗೋವುಗಳ ಸಾಕಣೆ ಹೆಸರಲ್ಲಿ ಅವುಗಳನ್ನು ಕಸಾಯಿಖಾನೆಗೆ ಮಾರಾಟ ಮಾಡುವ ಮೂಲಕ ಭಾರತದಲ್ಲಿ ಅತೀ ದೊಡ್ಡ ವಂಚನೆಯನ್ನು ಅಂತರರಾಷ್ಟ್ರೀಯ ಕೃಷ್ಣ ಪ್ರಜ್ಞಾ ಸಂಘ (ಇಸ್ಕಾನ್) ನಡೆಸುತ್ತಿದೆ ಎಂದು ಬಿಜೆಪಿ ಸಂಸದೆ ಮನೇಕಾ ಗಾಂಧಿ ಆರೋಪ ಮಾಡಿದ್ದು, ಇದೀಗ ವಿವಾದಕ್ಕೆ ಕಾರಣವಾಗಿದೆ. ಈ ನಡುವೆ ಇಸ್ಕಾನ್ ಈ ಆರೋಪಗಳನ್ನು ತಳ್ಳಿಹಾಕಿದೆ.

ಸಂಸ್ಥೆಯ ವಿರುದ್ಧ ನಿರಾಧಾರ ಆರೋಪಗಳನ್ನು ಮಾಡಿದ ಬಿಜೆಪಿ ಸಂಸದೆ ಮನೇಕಾ ಗಾಂಧಿ ಅವರಿಗೆ 100 ಕೋಟಿ ರೂಪಾಯಿ ಮಾನನಷ್ಟ ನೋಟಿಸ್ ಕಳುಹಿಸಿರುವುದಾಗಿ ಇಸ್ಕಾನ್ ಶುಕ್ರವಾರ ತಿಳಿಸಿದೆ.

ಮನೇಕಾ ಗಾಂಧಿಯವರ ವಿಡಿಯೋವೊಂದು ವೈರಲ್ ಆಗಿದ್ದು, ಅದರಲ್ಲಿ ಅವರು, ಇಂಟರ್‌ನ್ಯಾಷನಲ್ ಸೊಸೈಟಿ ಫಾರ್ ಕೃಷ್ಣ ಕಾನ್ಶಿಯಸ್‌ನೆಸ್ (ಇಸ್ಕಾನ್) ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದ್ದಾರೆ.

ಇಸ್ಕಾನ್ ವಿರುದ್ಧ ಸಂಪೂರ್ಣ ಆಧಾರರಹಿತ ಆರೋಪ ಮಾಡಿದ್ದಕ್ಕಾಗಿ ಇಂದು ನಾವು ಮನೇಕಾ ಗಾಂಧಿ ಅವರಿಗೆ 100 ಕೋಟಿ ರೂಪಾಯಿ ಮಾನನಷ್ಟ ನೋಟಿಸ್ ಕಳುಹಿಸಿದ್ದೇವೆ ಎಂದು ಅದರ ಉಪಾಧ್ಯಕ್ಷ ರಾಧಾರಾಮ್ ದಾಸ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆ ಆರೋಪಗಳು ವಿಶ್ವದಾದ್ಯಂತ ಇರುವ ಇಸ್ಕಾನ್ ಭಕ್ತರು, ಬೆಂಬಲಿಗರು ಮತ್ತು ಹಿತೈಷಿಗಳ ಸಮುದಾಯಕ್ಕೆ ತೀವ್ರ ನೋವನ್ನುಂಟು ಮಾಡಿದೆ ಎಂದು ಹೇಳಿದ ಅವರು, ಇವುಗಳನ್ನು 'ದುರುದ್ದೇಶಪೂರಿತ ಆರೋಪಗಳು' ಎಂದು ಬಣ್ಣಿಸಿದರು.

ಮನೇಕಾ ಗಾಂಧಿ ಇಸ್ಕಾನ್ ಆರೋಪಗಳೇನು?: ಆಂಧ್ರ ಪ್ರದೇಶದ ಅನಂತಪುರದಲ್ಲಿರುವ ಇಸ್ಕಾನ್‌ನ ಗೋಶಾಲೆಗೆ ಭೇಟಿ ನೀಡಿದ್ದನ್ನು ಸ್ಮರಿಸಿದ ಗಾಂಧಿ, ಅಲ್ಲಿ ಹಾಲು ನೀಡದ ಯಾವುದೇ ಹಸು ಅಥವಾ ಕರುಗಳು ಕಾಣಿಸುವುದಿಲ್ಲ ಇಸ್ಕಾನ್ ತಮ್ಮ ಗೋಶಾಲೆಗಳಿಂದ ಕಟುಕರಿಗೆ ಹಸುಗಳನ್ನು ಮಾರಾಟ ಮಾಡುತ್ತದೆ ಎಂದು ಆರೋಪಿಸಿರುವುದನ್ನು ವಿಡಿಯೋದಲ್ಲಿ ಕಾಣಬಹುದು. ಈ ವಿಡಿಯೋ ಇದೀಗ ವೈರಲ್ ಆಗಿದೆ.

ರಸ್ತೆಯಲ್ಲಿ 'ಹರೇ ರಾಮ ಹರೇ ಕೃಷ್ಣ' ಎಂದು ಹಾಡುತ್ತಾ ಹೋಗುತ್ತಾರೆ ಮತ್ತು ತಮ್ಮ ಇಡೀ ಜೀವನವು ಹಸುಗಳ ಮೇಲೆ ಅವಲಂಬಿತವಾಗಿದೆ ಎಂದು ಹೇಳುತ್ತಾರೆ. ಆದರೆ, ಕಸಾಯಿಖಾನೆಗೆ ಇವರಷ್ಟು ಹಸುಗಳನ್ನು ಬೇರೆ ಯಾರೂ ಮಾರಾಟ ಮಾಡಿಲ್ಲ. ಇವರೇ ಈ ರೀತಿ ಮಾಡಲು ಸಾಧ್ಯವಾದರೆ, ಇತರರು ಏನು ಮಾಡುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಾಕಿಸ್ತಾನದಲ್ಲಿ ಆತ್ಮಾಹುತಿ ಬಾಂಬ್ ಸ್ಫೋಟ; 55 ಜನರು ಸಾವು

ಕರಾಚಿ, ಸೆ.29– ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದ ಮಸೀದಿಯೊಂದರ ಬಳಿ ಶುಕ್ರವಾರ ಪ್ರವಾದಿ ಮುಹಮ್ಮದ್ ಅವರ ಜನ್ಮದಿನದ ಅಂಗವಾಗಿ ರ್‍ಯಾಲಿ ನಡೆಸಲು ಜನರು ಸೇರಿದ್ದಾಗ ನಡೆದ ಆತ್ಮಾಹುತಿ ಬಾಂಬ್ ಸ್ಫೋಟದಲ್ಲಿ ಕನಿಷ್ಠ 55 ಜನರು ಸಾವಿಗೀಡಾಗಿದ್ದಾರೆ ಮತ್ತು 50ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

ಮಸ್ತುಂಗ್ ಜಿಲ್ಲೆಯ ಮದೀನಾ ಮಸೀದಿ ಬಳಿ ಸ್ಫೋಟ ಸಂಭವಿಸಿದೆ ಎಂದು ಜಿಯೋ ನ್ಯೂಸ್ ವರದಿ ಮಾಡಿದೆ. ರ್‍ಯಾಲಿ ನಡೆಯುವ ಹಿನ್ನೆಲೆಯಲ್ಲಿ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಮಸ್ತುಂಗ್‌ನ ಉಪ ಪೊಲೀಸ್ ವರಿಷ್ಠಾಧಿಕಾರಿ (ಡಿಎಸ್‌ಪಿ) ನವಾಜ್ ಗಶ್ಕೋರಿ ಕೂಡ ಸ್ಫೋಟದಲ್ಲಿ ಸಾವಿಗೀಡಾಗಿದ್ದಾರೆ.

ಪ್ರವಾದಿ ಮುಹಮ್ಮದ್ ಅವರ ಜನ್ಮದಿನದ ಈದ್ ಮಿಲಾದುನ್ ನಬಿಯನ್ನು ಆಚರಿಸಲು ಜನರು ಒಂದೆಡೆ ಸೇರಿದ್ದಾಗ ಪ್ರಬಲ ಸ್ಫೋಟ ಸಂಭವಿಸಿದೆ.

ನಗರದ ಸ್ಟೇಷನ್ ಹೌಸ್ ಆಫೀಸರ್ (ಎಸ್‌ಎಚ್‌ಒ) ಮೊಹಮ್ಮದ್ ಜಾವೇದ್ ಲೆಹ್ರಿ ಅವರು, ಆತ್ಮಾಹುತಿ ಬಾಂಬ್ ದಾಳಿಯಿಂದ ಸ್ಫೋಟ ಸಂಭವಿಸಿದ್ದು, ಡಿಎಸ್‌ಪಿ ಅವರ ಕಾರಿನ ಪಕ್ಕದಲ್ಲಿಯೇ ಆತ್ಮಾಹುತಿ ಬಾಂಬ್ ಅನ್ನು ಸ್ಫೋಟಿಸಿಕೊಳ್ಳಲಾಯಿತು. ಸದ್ಯ ಆಸ್ಪತ್ರೆಗಳಲ್ಲಿ ತುರ್ತು ಪರಿಸ್ಥಿತಿಯನ್ನು ವಿಧಿಸಲಾಗಿದ್ದು, ಗಾಯಾಳುಗಳನ್ನು ವಿವಿಧ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಗುತ್ತಿದೆ ಎಂದು ಹೇಳಿದರು.

ಎಎಸ್‌ಐ ಸಮೀಕ್ಷೆಗೆ ತಡೆ ಕೋರಿ ಜ್ಞಾನವಾಪಿ ಮಸೀದಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ ವಾರಣಾಸಿ ಕೋರ್ಟ್

ವಾರಣಾಸಿ, ಸೆ.29– ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವೈಜ್ಞಾನಿಕ ಸಮೀಕ್ಷೆಗೆ ತಡೆ ನೀಡುವಂತೆ ಕೋರಿ ಜ್ಞಾನವಾಪಿ ಮಸೀದಿ ಆಡಳಿತ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು ವಾರಣಾಸಿ ನ್ಯಾಯಾಲಯ ಶುಕ್ರವಾರ ವಜಾಗೊಳಿಸಿದೆ. ಅಂಜುಮನ್ ಇಂತೇಜಾಮಿಯಾ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಜಿಲ್ಲಾ ಸರ್ಕಾರಿ ವಕೀಲ ರಾಜೇಶ್ ಮಿಶ್ರಾ ಅವರು, ಸಮೀಕ್ಷೆಗೆ ಈಗಾಗಲೇ ಅಲಹಾಬಾದ್ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ಒಪ್ಪಿಗೆ ಸಿಕ್ಕಿದೆ ಎಂದು ಕೋರ್ಟ್ ಗಮನಕ್ಕೆ ತಂದರು. ಇದನ್ನು ಪರಿಗಣಿಸಿದ ಜಿಲ್ಲಾ ನ್ಯಾಯಾಧೀಶ ಎಕೆ ವಿಶ್ವೇಶ್ ಅವರು, ನ್ಯಾಯಾಲಯ ಈ ವಿಚಾರದಲ್ಲಿ ಯಾವುದೇ ಆದೇಶ ನೀಡಲು ಸಾಧ್ಯವಿಲ್ಲ ಎಂದು ಹೇಳಿ ಅರ್ಜಿ ವಜಾಗೊಳಿಸಿದ್ದಾರೆ.

17ನೇ ಶತಮಾನದ ಮಸೀದಿಯನ್ನು ಹಿಂದೂ ದೇವಾಲಯದ ಮೇಲೆ ನಿರ್ಮಿಸಲಾಗಿದೆಯೇ ಎಂದು ನಿರ್ಧರಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ(ASI) ಇಲ್ಲಿನ ಕಾಶಿ ವಿಶ್ವನಾಥ ದೇವಸ್ಥಾನದ ಪಕ್ಕದಲ್ಲಿರುವ ಜ್ಞಾನವಾಪಿ ಮಸೀದಿ ಆವರಣದಲ್ಲಿ ವೈಜ್ಞಾನಿಕ ಸಮೀಕ್ಷೆ ನಡೆಸುತ್ತಿದೆ.

ಎಎಸ್‌ಐ ಸಮೀಕ್ಷೆಯನ್ನು ನಿಯಮಗಳಿಗೆ ವಿರುದ್ಧವಾಗಿ ನಡೆಸಲಾಗುತ್ತಿದ್ದು, ಇದನ್ನು ತಡೆಯಬೇಕು ಎಂದು ಮಸೀದಿ ಆಡಳಿತ ಸಮಿತಿಯು ಜಿಲ್ಲಾ ನ್ಯಾಯಾಲಯದ ಮುಂದೆ ವಾದಿಸಿದೆ ಎಂದು ಮಿಶ್ರಾ ಅವರು ತಿಳಿಸಿದ್ದಾರೆ. ಅರ್ಜಿದಾರರಿಗೆ ಯಾವುದೇ ಹೊಸ ಷರತ್ತುಗಳನ್ನು ವಿಧಿಸುವಂತಿಲ್ಲ ಎಂದು ಜಿಲ್ಲಾ ನ್ಯಾಯಾಧೀಶರು ಹೇಳಿದ್ದಾರೆ.

ತಮಿಳುನಾಡಿಗೆ ನೀರು ಬಿಡಬಾರದು ಎಂಬುದು ನನ್ನ ಅನಿಸಿಕೆ: ಸಿಎಂ



ಬೆಂಗಳೂರು, ಸೆ29(ಕೆಎಂಶಿ)–ತಮಿಳುನಾಡಿಗೆ ಕಾವೇರಿ ನೀರು ಬಿಡಬಾರದೆನ್ನುವುದೇ ನಮ್ಮ ಅನಿಸಿಕೆಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ರೈತ, ದಲಿತ, ಕಾರ್ಮಿಕ ಮತ್ತು ಕನ್ನಡ ಹೋರಾಟಗಾರರ ನಿಯೋಗಕ್ಕೆ ಈ ವಿಷಯ ತಿಳಿಸಿದ ಅವರು, ಕಾವೇರಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಎರಡು ಸಮಿತಿಗಳು ಪರಿಸ್ಥಿತಿ ಅವಲೋಕನ ಮಾಡಿ ಆದೇಶ ನೀಡುತ್ತವೆ. ಬಿಳಿಗುಂಡ್ಲುವಿನಲ್ಲಿ ನೀರು ಬಿಡಬೇಕೆಂದು ಆದೇಶವಾಗಿತ್ತು.

ಸಾಮಾನ್ಯ ಪರಿಸ್ಥಿತಿಯಲ್ಲಿ 177.25 ಟಿಎಂಸಿ ನೀರನ್ನು ಒಂದು ವರ್ಷದಲ್ಲಿ ಬಿಡಬೇಕೆಂದು ಆದೇಶವಿದೆ. ನಮ್ಮ ರಾಜ್ಯಕ್ಕೆ 284.85 ಟಿಎಂಸಿ ನೀರು ಅಗತ್ಯವಿದೆ. ಸುಪ್ರೀಂ ಕೋರ್ಟ್‌ನಲ್ಲಿ ಸಂಕಷ್ಟ ಸೂತ್ರ ಸಿದ್ಧಪಡಿಸಿಲ್ಲ. 2 ಸಮಿತಿಗಳಾಗಬೇಕೆಂದು ನ್ಯಾಯ ಮಂಡಳಿಯೇ ತೀರ್ಮಾನ ಮಾಡಿದೆ ಎಂದು ವಿವರಿಸಿದರು.

ಈ ವರ್ಷ ಆಗಸ್ಟ್‌ನಲ್ಲಿ ಮಳೆ ಕೈಕೊಟ್ಟಿದ್ದರಿಂದ ಸಮಸ್ಯೆ ಉಂಟಾಯಿತು. ಈ ತಿಂಗಳೂ ಮಳೆ ಅಷ್ಟೇನೂ ಆಗಿಲ್ಲ. ತಮಿಳುನಾಡಿಗೆ ಹಿಂಗಾರು ಮಳೆಯಿದೆ. ಈವರೆಗೆ 43 ಟಿಎಂಸಿ ನೀರು ಹೋಗಿದೆ. 123 ಟಿಎಂಸಿ ನೀರು ಬಿಡಬೇಕು ಎಂದು ಆದೇಶವಾಗಿದೆ.

ಆದರೆ ನಾವು ನೀರು ಬಿಟ್ಟಿಲ್ಲ. ಕಾವೇರಿ ಪ್ರಾಧಿಕಾರ ಪ್ರತಿ ಬಾರಿ ಸಭೆ ಕರೆದಾಗಲೂ ನಾವು ಪ್ರತಿಭಟಿಸುತ್ತಲೇ ಬಂದಿದ್ದೇವೆ. ನೀರಿಲ್ಲ ಎಂದೇ ಹೇಳಿದ್ದೇವೆ. ಸುಪ್ರೀಂಕೋರ್ಟ್ ಮುಂದೆಯೂ ಅರ್ಜಿ ಹಾಕಿದ್ದೆವು. ನಮಗೆ ಬೆಳೆ ಉಳಿಸಿಕೊಳ್ಳಲು 70 ಟಿಎಂಸಿ ನೀರು ನೀರಾವರಿಗೆ ಅಗತ್ಯವಿದೆ.

30 ಟಿಎಂಸಿ ಕುಡಿಯುವ ನೀರಿಗೆ ಅಗತ್ಯ. ಹಾಗೂ ಕೈಗಾರಿಕೆಗಳಿಗೆ 3 ಟಿಎಂಸಿ ನೀರು ಅಗತ್ಯ ಒಟ್ಟು 106 ಟಿಎಂಸಿ ಅವಶ್ಯಕತೆ ರಾಜ್ಯಕ್ಕೆ ಇದೆ. ಆದರೆ ನಮ್ಮ ಬಳಿ ಇರುವುದು ಕೇವಲ 50 ಟಿಎಂಸಿ ನೀರು. ನಮ್ಮ ಮೊದಲ ಆದ್ಯತೆ ಕುಡಿಯುವ ನೀರು ಎಂದು ವಿವರಿಸಿದರು.

ಸಂಘಟನೆಗಳು ಜನಪರವಾಗಿ ಹೋರಾಟ ಮಾಡಿದಾಗ ಅವರ ಮೇಲೆ ಹಾಕಲಾಗಿರುವ ಪ್ರಕರಣಗಳನ್ನು ಹಿಂಪಡೆಯಬೇಕೆಂದು ಮನವಿ ಮಾಡಿದರು. ಮೇಕೆದಾಟು ಯೋಜನೆಗೆ ಶೀಘ್ರ ಕಾಯಕಲ್ಪ ನೀಡಬೇಕೆಂದು ಒತ್ತಾಯಿಸಿದರು.

ಎಲ್ಲಾ ಇಲಾಖೆಗಳ ಬ್ಯಾಕ್‌ಲಾಗ್ ಹುದ್ದೆ ಭರ್ತಿಗೆ ಹೈಕೋರ್ಟ್ ಗಡುವು

ಬೆಂಗಳೂರು: ಎಲ್ಲಾ ಇಲಾಖೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆರು ತಿಂಗಳ ಗಡುವು ನೀಡಿದೆ. ಈ ಸಂಬಂಧ ಬೆಂಗಳೂರಿನ ಪಟ್ಟಂದೂರು ಅಗ್ರಹಾರದ ನಿವಾಸಿ ಎಂ. ಮಂಜುನಾಥ್ ಪ್ರಸಾದ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಜಿಎಸ್‌ಟಿ ವ್ಯಾಪ್ತಿಗೆ ಆನ್‌ಲೈನ್ ಗೇಮಿಂಗ್: ಸುಗ್ರೀವಾಜ್ಞೆ ಪ್ರಕಟ

ಬೆಂಗಳೂರು: ಬೆಟ್ಟಿಂಗ್, ಕ್ಯಾಸಿನೊ, ಜೂಜು, ಕುದುರೆ ರೇಸಿಂಗ್, ಲಾಟರಿ, ಆನ್‌ಲೈನ್ ಮನಿ ಗೇಮಿಂಗ್‌ಗಳನ್ನು ರಾಜ್ಯದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿಗೆ ತರಲು ಕರ್ನಾಟಕ ಜಿಎಸ್‌ಟಿ ಕಾಯ್ದೆಗೆ ತಿದ್ದುಪಡಿಗಳನ್ನು ತರುವ ಸುಗ್ರೀವಾಜ್ಞೆಯನ್ನು ಶುಕ್ರವಾರ ಹೊರಡಿಸಲಾಗಿದೆ.

ಎಲ್ಲ ಬಗೆಯ ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳಿಗೆ ಶೇಕಡ 28ರಷ್ಟು ಜಿಎಸ್‌ಟಿ ವಿಧಿಸಲು ಸರಕು ಮತ್ತು ಸೇವಾ ತೆರಿಗೆ ಮಂಡಳಿ (ಜಿಎಸ್‌ಟಿ ಕೌನ್ಸಿಲ್) ಆಗಸ್ಟ್ 2ರಂದು ನಡೆದ ಸಭೆಯಲ್ಲಿ ನಿರ್ಧರಿಸಿತ್ತು. ಭಾನುವಾರದಿಂದ (ಅಕ್ಟೋಬರ್ 1) ಈ ಕ್ರಮ ಜಾರಿಗೆ ಬರಲಿದೆ. ಅದಕ್ಕೆ ಪೂರಕವಾಗಿ ಎಲ್ಲ ರಾಜ್ಯಗಳಲ್ಲೂ ಜಿಎಸ್‌ಟಿ ಕಾಯ್ದೆಗೆ ತಿದ್ದುಪಡಿ ತರುವಂತೆ ಜಿಎಸ್‌ಟಿ ಮಂಡಳಿ ಸೂಚಿಸಿತ್ತು.

ತಕ್ಷಣದಿಂದಲೇ ತಿದ್ದುಪಡಿಯನ್ನು ಜಾರಿಗೊಳಿಸಬೇಕಾದ ಕಾರಣ ಸುಗ್ರೀವಾಜ್ಞೆ ಹೊರಡಿಸಲಾಗಿದೆ. ಆರು ತಿಂಗಳೊಳಗೆ ಈ ತಿದ್ದುಪಡಿಗಳನ್ನು ಒಳಗೊಂಡ ಮಸೂದೆಯನ್ನು ವಿಧಾನಮಂಡಲದಲ್ಲಿ ಮಸೂದೆ ಮಂಡಿಸಿ ಅಂಗೀಕಾರ ಪಡೆಯಬೇಕಿದೆ.

ಆನ್‌ಲೈನ್ ಮತ್ತು ವಿದ್ಯುನ್ಮಾನ ಸಂಪರ್ಕ ಜಾಲದಲ್ಲಿ ಆಟವಾಡಲು ಆಹ್ವಾನಿಸುವುದೂ ಸೇರಿದಂತೆ ಎಲ್ಲ ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳು ಇನ್ನು ಮುಂದೆ ಜಿಎಸ್‌ಟಿ ವ್ಯಾಪ್ತಿಗೆ ಬರಲಿವೆ. ಆಟವು ಕೌಶಲ ಅಥವಾ ಕಾರ್ಯಕ್ಷಮತೆಯನ್ನು ಆಧರಿಸಿರಲಿ ಅಥವಾ ಆಧರಿಸದೇ ಇರಲಿ ಎಲ್ಲವೂ ತೆರಿಗೆ ವ್ಯಾಪ್ತಿಗೆ ಬರುತ್ತವೆ. ವರ್ಚ್ಯುಯಲ್ ಡಿಜಿಟಲ್ ಕರೆನ್ಸಿಯೂ ಸೇರಿದಂತೆ ಹಣ ಅಥವಾ ಹಣದ ಮೌಲ್ಯವನ್ನು ಗೆಲ್ಲುವ ನಿರೀಕ್ಷೆಯಲ್ಲಿ ಹಣ ಅಥವಾ ಹಣದ ಮೌಲ್ಯವನ್ನು ಪಾವತಿಸಿ ಅಥವಾ ಠೇವಣಿಯಾಗಿಟ್ಟು ಆಡುವ ಆನ್‌ಲೈನ್‌ನ ಆಟಗಳು ತೆರಿಗೆ ವ್ಯಾಪ್ತಿಗೆ ಬರಲಿವೆ ಎಂಬ ಉಲ್ಲೇಖ ಸುಗ್ರೀವಾಜ್ಞೆಯಲ್ಲಿದೆ.

ಭಾರತದ ಹೊರಗಿನಿಂದ ದೇಶದೊಳಗೆ ನಡೆಸುವ ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳಿಗೂ ಈ ತಿದ್ದುಪಡಿ ಅನ್ವಯವಾಗಲಿದೆ ಈ ಸುಗ್ರೀವಾಜ್ಞೆಯು ಬೆಟ್ಟಿಂಗ್, ಕ್ಯಾಸಿನೊ, ಜೂಜು, ಕುದುರೆ ರೇಸಿಂಗ್, ಲಾಟರಿ ಅಥವಾ ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳನ್ನು ನಿಷೇಧಿಸುವ, ನಿರ್ಬಂಧಿಸುವ ಅಥವಾ ನಿಯಂತ್ರಿಸುವುದಕ್ಕಾಗಿ ಜಾರಿಯಲ್ಲಿರುವ ಯಾವುದೂ ಕಾನೂನುಗಳಿಗೆ ಅಡ್ಡಿಪಡಿಸುವುದಿಲ್ಲ ತೆರಿಗೆ ವಿಧಿಸುವ ಸುಗ್ರೀವಾಜ್ಞೆಯು ಕ್ಯಾಸಿನೊ, ಕುದುರೆ ರೇಸಿಂಗ್ ಮತ್ತು ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳನ್ನು ಕಾನೂನುಬದ್ಧಗೊಳಿಸುವುದಿಲ್ಲ ಎಂಬ ಅಂಶ ಸುಗ್ರೀವಾಜ್ಞೆಯಲ್ಲಿದೆ.